**ಕರ್ನಾಟಕ ಸರ್ಕಾರ**

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ**

# ಕರ್ನಾಟಕ ಬೋರ್ಸ್ಟಲ್ ಶಾಲೆಗಳ ಅಧಿನಿಯಮ, 1963

# ಮತ್ತು

# ಕರ್ನಾಟಕ ಬೋರ್ಸ್ಟಲ್ ಶಾಲೆಗಳ ನಿಯಮಗಳು, 1969

(ಕರ್ನಾಟಕ ಅಧಿನಿಯಮ 1964ರ ಸಂಖ್ಯೆ 24)

# ಕರ್ನಾಟಕ ಬೋರ್ಸ್ಟ್‌ಲ್ ಶಾಲೆಗಳ ಅಧಿನಿಯಮ, 1963

# ಮತ್ತು

# ಕರ್ನಾಟಕ ಬೋರ್ಸ್ಟ್‌ಲ್ ಶಾಲೆಗಳ ನಿಯಮಗಳು, 1969

(ಕರ್ನಾಟಕ ಅಧಿನಿಯಮ 1964ರ ಸಂಖ್ಯೆ 24)

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ**

**ಕ್ರಮಾಂಕ : ಲಾ 51 ಎಲ್‌ಎಂಪಿ 89 ಬೆಂಗಳೂರು, ದಿನಾಂಕ : 19ನೇ ಅಕ್ಟೋಬರ್, 1989**

**ಅಧಿಸೂಚನೆ**

ಕರ್ನಾಟಕ ರಾಜಭಾಷಾ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ, 26)ರ 5–ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲನಾದ ಶ್ರೀ ಪಿ. ವೆಂಕಟಸುಬ್ಬಯ್ಯ ಎಂಬ ನಾನು ಕರ್ನಾಟಕ ಬೋರ್ಸ್ಟಲ್ ಶಾಲೆಗಳ ಅಧಿನಿಯಮ, 1963 ಮತ್ತು ಕರ್ನಾಟಕ ಬೋರ್ಸ್ಟಲ್ ಶಾಲೆಗಳ ನಿಯಮಗಳು, 1969 – ಇದರ ಕನ್ನಡ ಭಾಷೆಯಲ್ಲಿರುವ ಈ ಮುಂದಿನ ಭಾಷಾಂತರವು ಸರ್ಕಾರಿ ರಾಜ್ಯಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

**ಪಿ. ವೆಂಕಟಸುಬ್ಬಯ್ಯ**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಅರ್ಜುನಪ್ಪ**
ಸರ್ಕಾರದ ಅಧೀನ ಕಾರ್ಯದರ್ಶಿ
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ
(ಪ್ರಕಟಣೆಗಳು).

# ಕರ್ನಾಟಕ ಬೋರ್ಸ್ಟಲ್ ಶಾಲೆಗಳ ಅಧಿನಿಯಮ, 1963

## ವಿಷಯಾನುಕ್ರಮಣಿಕೆ

### ಅಧ್ಯಾಯ – I

### ಪ್ರಾರಂಭಿಕ


| | | |
|---|---|---|
| 1. | ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ | 1 |
| 2. | ಪರಿಭಾಷೆಗಳು | 1 |
| 3. | ಬೋರ್ಸ್ಟಲ್ ಶಾಲೆಗಳ ಸ್ಥಾಪನೆ | 2 |
| 4. | ಬಂದೀಖಾನೆಗಳ ಅಧಿನಿಯಮ ಮತ್ತು ಬಂದಿಗಳ ಅಧಿನಿಯಮದ ಅನ್ವಯ | 2 |


### ಅಧ್ಯಾಯ – II

### ಬೋರ್ಸ್ಟಲ್ ಶಾಲೆಗಳಿಗೆ ಒಪ್ಪಿಸುವಿಕೆ


| | | |
|---|---|---|
| 5. | ನ್ಯಾಯಾಲಯವು ಬೋರ್ಸ್ಟಲ್ ಶಾಲೆಯಲ್ಲಿ ಬಂಧನಕ್ಕಾಗಿ ಅದೇಶವನ್ನು ಮಾಡಬಹುದು | 3 |
| 6. | ವಿನಾಯಿತಿಗೊಳಿಸಲು ರಾಜ್ಯ ಸರ್ಕಾರದ ಅಧಿಕಾರ | 3 |
| 7. | ಬಂಧನಕ್ಕಾಗಿ ಆದೇಶಗಳನ್ನು ಮಾಡಲು ಶಕ್ತಗೊಳಿಸಲಾದ ನ್ಯಾಯಾಲಯಗಳು | 3 |
| 8. | ಈ ಅಧಿನಿಯಮದ ಮೇರೆಗೆ ಬಂಧನಕ್ಕಾಗಿನ ಆದೇಶವನ್ನು ಮಾಡಲು ಮ್ಯಾಜಿಸ್ಟ್ರೇಟನನ್ನು ಶಕ್ತಗೊಳಿಸಿಲ್ಲದೆ ಇರುವಾಗ ಪ್ರಕ್ರಿಯೆ | 4 |
| 9. | 5ನೇ ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರಿಗಳ ಮೇಲೆ ಪರಿಮಿತಿ | 4 |
| 10. | ಬಂದೀಖಾನೆಯಿಂದ ಬೋರ್ಸ್ಟಲ್ ಶಾಲೆಗೆ ವ್ಯಕ್ತಿಯ ವರ್ಗಾವಣೆ | 5 |
| 11. | ತಿದ್ದಲಾಗದವರು ಮುಂತಾದವರನ್ನು ಬಂದೀಖಾನೆಗಳಿಗೆ ವರ್ಗಾಯಿಸುವುದು | 5 |
| 12. | ರಾಜ್ಯ ಸರ್ಕಾರವು ವ್ಯಕ್ತಿಯನ್ನು ಯಾವ ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿರಿಸತಕ್ಕದ್ದೆಂಬುದನ್ನು ನಿರ್ಧರಿಸತಕ್ಕದ್ದು ಮತ್ತು ಅದು ಸ್ಥಳಾಂತರಣವನ್ನು ಆದೇಶಿಸಬಹುದು | 6 |

13. ಅಪರಾಧಿಗಳನ್ನು ಇತರ ರಾಜ್ಯದಲ್ಲಿನ ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡಲು ಮತ್ತು ಅಲ್ಲಿಗೆ ಸ್ಥಳಾಂತರಿಸಲು ಆದೇಶಿಸುವ ಅಧಿಕಾರ 6

14. ವೈದ್ಯಕೀಯ ಚಿಕಿತ್ಸೆಗಾಗಿ ರಾಜ್ಯದಲ್ಲಿ ಸಿವಿಲ್ ಆಸ್ಪತ್ರೆಗೆ ಬಂಧನದಲ್ಲಿಟ್ಟ ವ್ಯಕ್ತಿಗಳ ಸ್ಥಳಾಂತರ 7

**ಅಧ್ಯಾಯ – III**

**ಲೈಸೆನ್ಸಿನ ಮೇಲೆ ಬಿಡುಗಡೆ**

15. ಲೈಸೆನ್ಸಿನ ಮೇಲೆ ಬಿಡುಗಡೆ ಮಾಡಲು ಅಧಿಕಾರ 7

16. ಲೈಸೆನ್ಸನ್ನು ರದ್ದುಪಡಿಸುವುದು 8

17. ತರುವಾಯದ ಮೇಲ್ವಿಚಾರಣೆ 9

18. ಬಂಧನದ ಅವಧಿ 9

19. ಬೋರ್ಸ್ಟಲ್ ಶಾಲೆಯಿಂದ ವಿಮೋಚನೆ 10

20. ಪರಿವೀಕ್ಷಣೆ ಮೇಲೆ ವಿಮೋಚನೆಗೊಳಿಸಿದ ಅಪರಾಧಿಗಳ ವಿರುದ್ಧ ಮಾಡಿದ ದೂರುಗಳ ಬಗ್ಗೆ ತನಿಖಾ ಸಮಿತಿಯು ತನಿಖೆ ನಡೆಸತಕ್ಕದ್ದು ಇತ್ಯಾದಿ 10

21. ಬೋರ್ಸ್ಟಲ್ ಶಾಲೆಯಿಂದ ತಪ್ಪಿಸಿಕೊಳ್ಳುವ ಅಥವಾ ಮೇಲ್ವಿಚಾರಣೆಯಿಂದ ತಪ್ಪಿಸಿಕೊಳ್ಳುವ ಅಪರಾಧಿಯ ದಸ್ತಗಿರಿ 11

**ಅಧ್ಯಾಯ – IV**

**ಬೋರ್ಸ್ಟಲ್ ಶಾಲೆಗಳ ನಿಯಂತ್ರಣ ಮತ್ತು ವ್ಯವಸ್ಥಾಪನೆ**

22. ಬೋರ್ಸ್ಟಲ್ ಶಾಲೆಗಳ ವ್ಯವಸ್ಥಾಪನೆ 11

23. ಸಂದರ್ಶಕ ಸಮಿತಿಗಳ ರಚನೆ, ಅಧಿಕಾರಿಗಳು ಮತ್ತು ಕರ್ತವ್ಯಗಳು 11

24. ನಿವಾಸಿಗಳ ವರ್ಗೀಕರಣ 12

25. ಅಪರಾಧಗಳಿಗಾಗಿ ದಂಡನೆ 13

26. ನಿಷೇಧಿತ ವಸ್ತುಗಳನ್ನು ತರುವುದು ಅಥವಾ ಸ್ಥಳಾಂತರಿಸುವುದಕ್ಕಾಗಿ ದಂಡ 13

| | | |
|---|---|---|
| 27. | ಕೆಲಸದ ವೇಳೆಗಳ ಪರಿಮಿತಿ | 14 |

## ಅಧ್ಯಾಯ – V

## ಸಂಕೀರ್ಣ

| | | |
|---|---|---|
| 28. | ಅಪೀಲುಗಳು ಮತ್ತು ಪುನರೀಕ್ಷಣೆ | 14 |
| 29. | ಅನರ್ಹತೆಯನ್ನು ತೆಗೆದುಹಾಕುವುದು | 14 |
| 30. | ವಯಸ್ಸಿನ ಬಗ್ಗೆ ಪೂರ್ವ ಭಾವನೆ ಮತ್ತು ಅದರ ನಿರ್ಧರಣೆ | 14 |
| 31. | ನಿಯಮ ರಚನಾಧಿಕಾರ | 14 |
| 32. | ನಿರಸನ ಮತ್ತು ಉಳಿಸುವಿಕೆಗಳು | 16 |

## ಕರ್ನಾಟಕ ಬೋರ್ಸ್ಟ್ಲ್ ಶಾಲೆಗಳ ನಿಯಮಗಳು – 1969

## ವಿಷಯಾನುಕ್ರಮಣಿಕೆ

ನಿಯಮ
ಸಂಖ್ಯೆ


| | | |
|---|---|---|
| 1. | ಹೆಸರು | 17 |
| 2. | ಪರಿಭಾಷೆಗಳು | 17 |
| 3. | ಸೂಪರಿಂಟೆಂಡೆಂಟ್ ಮತ್ತು ಇತರ ಅಧಿಕಾರಿಗಳ ನೇಮಕಾತಿ | 17 |
| 4. | ಕೆಲವು ವ್ಯಕ್ತಿಗಳನ್ನು ಶಾಲೆಯಲ್ಲಿ ಬಂಧನದಲ್ಲಿಡಲು ಆದೇಶಿಸತಕ್ಕದ್ದಲ್ಲ | 17 |
| 5. | ಇನ್ಸ್‌ಪೆಕ್ಟರ್ ಜನರಲ್‌ರವರಿಂದ ಒಂದು ಬೋರ್ಸ್ಟ್ಲ್ ಶಾಲೆಯಿಂದ ಮತ್ತೊಂದಕ್ಕೆ ವರ್ಗಾವಣೆ | 17 |
| 6. | ಸೇರಿಸಿಕೊಂಡ ಮೇಲೆ ಪರೀಕ್ಷೆ | 17 |
| 7. | ವೈದ್ಯಕೀಯ ಪರೀಕ್ಷೆ | 17 |
| 8. | ಬೋರ್ಸ್ಟ್ಲ್ ತರಬೇತಿಗಾಗಿ ಅನರ್ಹನಾದ ನಿವಾಸಿಯ ಬಗ್ಗೆ ವರದಿ | 17 |
| 9. | ನಿವಾಸಿಗಳ ಬಗ್ಗೆ ಗೃಹ ವ್ಯವಸ್ಥೆ ಮತ್ತು ವರ್ಗೀಕರಣ ಮತ್ತು ಶುಶ್ರೂಷೆ | 18 |
| 10. | ಹೌಸ್ ಮಾಸ್ಟರ್ ಮತ್ತು ಉಪಾಧ್ಯಾಯನ ಜವಾಬ್ದಾರಿಗಳು | 18 |
| 11. | ಗುಂಪಿನ ಮೇಲ್ವಿಚಾರಕ | 18 |
| 12. | ಮುಖ್ಯ ಮೇಲ್ವಿಚಾರಕ | 18 |
| 13. | ಸಾಮಾನ್ಯ ದರ್ಜೆ | 18 |
| 14. | ನಕ್ಷತ್ರ ದರ್ಜೆಗೆ ಬಡ್ತಿ | 19 |
| 15. | ನಕ್ಷತ್ರ ದರ್ಜೆ | 19 |
| 16. | ವಿಶೇಷ ನಕ್ಷತ್ರ ದರ್ಜೆ | 19 |
| 17. | ಬ್ಯಾಡ್ಜ್ ಹಣ | 20 |
| 18. | ಕ್ರೀಡೆಗಳು ಮೊದಲಾದವುಗಳಲ್ಲಿ ಪಾಲ್ಗೊಳ್ಳಲು ನಿವಾಸಿಗಳಿಗೆ ಅನುಮತಿ | 20 |

| | | |
|---|---|---|
| 19. | ನಿವಾಸಿಗಳಿಂದ ಅಭ್ಯಾಸ ನಡಿಗೆ | 20 |
| 20. | ದಂಡನೆ ದರ್ಜೆಯ ಕೆಲಸ | 20 |
| 21. | ದಂಡನೆ ದರ್ಜೆಗೆ ಇಳಿಸುವುದು | 20 |
| 22. | ವಿಶೇಷಾಧಿಕಾರಿಗಳು | 21 |
| 23. | ಪತ್ರ ವ್ಯವಹಾರ ಮತ್ತು ಸಂದರ್ಶನಗಳ ಬಗ್ಗೆ ವ್ಯವಸ್ಥೆ | 21 |
| 24. | ಶಿಸ್ತು, ಖುದ್ದು ಮೇಲ್ವಿಚಾರಣೆ ಇವುಗಳ ಬಗ್ಗೆ ಉಪಬಂಧಗಳು | 22 |
| 25. | ನಿವಾಸಿಯ ಮೇಲೆ ಬಲಪ್ರಯೋಗದ ಪರಿಬಂಧ | 22 |
| 26. | ಆಪರಾಧಗಳ ಬಗ್ಗೆ ತನಿಖೆ | 22 |
| 27. | ತಿದ್ದಲಾಗದ ನಿವಾಸಿಯ ಬಗ್ಗೆ ವರದಿ | 22 |
| 28. | ದೈನಿಕ ಕಾರ್ಯಕ್ರಮ ಮತ್ತು ಕೆಲಸದ ವೇಳೆಗಳು | 23 |
| 29. | ವಿದ್ಯಾಭ್ಯಾಸ | 23 |
| 30. | ಸಾಕ್ಷರತೆಯನ್ನು ಪಡೆಯಲು ವಿಫಲವಾಗುವುದು | 24 |
| 31. | ಗ್ರಂಥಾಲಯ | 24 |
| 32. | ಶಿಕ್ಷಣಮಟ್ಟ | 24 |
| 33. | ವೃತ್ತಿ ತರಬೇತಿ | 24 |
| 34. | ವೃತ್ತಿ ಶಿಕ್ಷಣ | 25 |
| 35. | ಪ್ರಥಮ ಚಿಕಿತ್ಸೆ ಇತ್ಯಾದಿಗಳಲ್ಲಿ ತರಬೇತಿ | 25 |
| 36. | ಕ್ರೀಡೆಗಳು ಮತ್ತು ಆಟಗಳು | 25 |
| 37. | ನೈತಿಕ ಶಿಕ್ಷಣ | 25 |
| 38. | ಸಾಂಸ್ಕೃತಿಕ ಚಟುವಟಿಕೆಗಳು | 25 |
| 39. | ನ್ಯಾಯಾಲಯಗಳು, ತೀರ್ಪಿನ ಪ್ರತಿಗಳು ಇತ್ಯಾದಿಗಳನ್ನು ಸೂಪರಿಂಟೆಂಡೆಂಟನಿಗೆ ಕಳುಹಿಸತಕ್ಕದ್ದು | 26 |
| 40. | ಸಭೆಯ ಅಧ್ಯಕ್ಷ ಮತ್ತು ಕೋರಂ | 26 |

| | | |
|---|---|---|
| 40–ಕ | ಸಂದರ್ಶಕ ಸಮಿತಿಯ ಅಧಿಕಾರೇತರ ಸದಸ್ಯರು | 26 |
| 41. | ಸಂದರ್ಶಕ ಸಮಿತಿಯ ವ್ಯವಹರಣೆಗಳು | 26 |
| 42. | ಸೂಪರಿಂಟೆಂಡೆಂಟನ ಕರ್ತವ್ಯಗಳು | 26 |
| 43. | ಬಿಟ್ಟುಬಿಡಲಾಗಿದೆ | 27 |
| 44. | ತಂದೆ / ತಾಯಿ ಅಥವಾ ಪಾಲಕ ಅಥವಾ ಸ್ನೇಹಿತನಿಗೆ ನಿವಾಸಿಯ ಬಿಡುಗಡೆಯ ಬಗ್ಗೆ ನೋಟೀಸು | 27 |
| 45. | 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸಿನ ನಮೂನೆ | 27 |
| 46. | ಪ್ರಾರಂಭಿಕ ವಿಚಾರಣೆ | 27 |
| 47. | ಪರಿವೀಕ್ಷಣಾ ಅಧಿಕಾರಿಯಿಂದ ವರದಿ | 27 |
| 48. | ನಿವಾಸಿಯ ಅನರ್ಹತೆ ಅಥವಾ ಅಸಾಮರ್ಥ್ಯದ ಸಂದರ್ಭದಲ್ಲಿ ಲೈಸೆನ್ಸಿನ ರದ್ದಿಯಾತಿ | 27 |
| 49. | ವಿಶೇಷವಾಗಿ ಶಿಫಾರಸ್ಸು ಮಾಡಿದ ಹೊರತು ತಪ್ಪಿಸಿಕೊಂಡವನಿಗೆ ಲೈಸೆನ್ಸನ್ನು ಕೊಡತಕ್ಕದ್ದಲ್ಲ. | 28 |
| 50. | ನಿವಾಸಿಯ ಬಿಡುಗಡೆಯ ನಿರೀಕ್ಷೆಯಲ್ಲಿ ಪರಿವೀಕ್ಷಣಾ ಅಧಿಕಾರಿಗೆ ಸೂಪರಿಂಟೆಂಡೆಂಟನ ವರದಿ | 28 |
| 51. | ಜಿಲ್ಲಾ ಪರಿವೀಕ್ಷಣಾಧಿಕಾರಿಯ ಕರ್ತವ್ಯಗಳು | 28 |
| 52. | ಲೈಸೆನ್ಸ್‌ಗಳ ರಿಜಿಸ್ಟರು | 28 |
| 53. | ಬಟ್ಟೆಬರೆ ಮತ್ತು ಹಾಸಿಗೆ | 29 |
| 54. | ಬಟ್ಟೆಬರೆಗಳ ಮತ್ತು ಹಾಸಿಗೆಯ ಶ್ರೇಣಿ | 29 |
| 55. | ರಜಾ ದಿವಸಗಳು | 30 |
| 56. | ಕ್ಯಾಂಟೀನ್ | 31 |
| 57. | ಅಂಕಿ ಅಂಶಗಳು ಮತ್ತು ವಿವರ ಪಟ್ಟಿಕೆಗಳು | 31 |
| 58. | ನಿವಾಸಿಯ ಮರಣ / ಕಾಯಿಲೆಯ ಬಗ್ಗೆ ವರದಿ ಮತ್ತು ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು | 31 |

| | | |
|---|---|---|
| 59. | ನಿವಾಸಿಗಳ ಆಹಾರ | 32 |
| 60. | ಲೈಸೆನ್ಸಿನ ನಮೂನೆ | 33 |
| 61. | ನಿರಸನ ಮತ್ತು ಉಳಿಸುವಿಕೆಗಳು | 33 |
| | ನಮೂನೆ – I ರಿಂದ ನಮೂನೆ – V | 35–40 |

# ಕರ್ನಾಟಕ ಅಧಿನಿಯಮ, 1964ರ ಸಂಖ್ಯೆ 24

(1964ರ ಮೇ ಇಪ್ಪತ್ತೆಂಟನೇ ದಿವಸದಂದು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಯಿತು)

# ಕರ್ನಾಟಕ ಬೋರ್ಸ್ಟಲ್ ಶಾಲೆಗಳ ಅಧಿನಿಯಮ, 1963

(1964ರ ಏಪ್ರಿಲ್ ಹತ್ತನೇ ದಿವಸದಂದು ರಾಷ್ಟ್ರಪತಿಯ ಅನುಮತಿಯನ್ನು ಪಡೆಯಿತು)

ಕರ್ನಾಟಕ ರಾಜ್ಯದಲ್ಲಿ ಬೋರ್ಸ್ಟಲ್ ಶಾಲೆಗಳ ಸ್ಥಾಪನೆ ಮತ್ತು ನಿಯಂತ್ರಣಕ್ಕೆ ಸಂಬಂಧಪಟ್ಟ ಕಾನೂನನ್ನು ಕ್ರೋಢೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

ಕರ್ನಾಟಕ ರಾಜ್ಯದಲ್ಲಿ ಬೋರ್ಸ್ಟಲ್ ಶಾಲೆಗಳ ಸ್ಥಾಪನೆ ಮತ್ತು ನಿಯಂತ್ರಣಕ್ಕೆ ಸಂಬಂಧಪಟ್ಟ ಕಾನೂನನ್ನು ಕ್ರೋಢೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ ;

ಭಾರತ ಗಣರಾಜ್ಯದ ಹದಿನಾಲ್ಕನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

## ಅಧ್ಯಾಯ – I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಬೋರ್ಸ್ಟಲ್ ಶಾಲೆಗಳ ಅಧಿನಿಯಮ, 1963 ಎಂದು ಕರೆಯತಕ್ಕದ್ದು.

2. ಇದು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುತ್ತದೆ.

3. ಅದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು,–

(ಕ) "ಬೋರ್ಸ್ಟಲ್ ಶಾಲೆ" ಎಂದರೆ, ಈ ಅಧಿನಿಯಮದ ಅನುಸರಣೆಯಲ್ಲಿ ಬಂಧನದಲ್ಲಿರಿಸಿರುವಾಗ ಯುವಾಪರಾಧಿಗಳಿಗೆ ಅವರ ಸುಧಾರಣೆಗೆ ಮತ್ತು ಅಪರಾಧವನ್ನು ನಿವಾರಿಸುವುದಕ್ಕೆ ಸಹಾಯಕವಾಗುವಂಥ ಔದ್ಯಮಿಕ ತರಬೇತಿಯನ್ನು ಮತ್ತು ಇತರ ಶಿಕ್ಷಣವನ್ನು ಕೊಡುವ ಮತ್ತು ಅಂಥ ಇತರ ಶಿಸ್ತುಪಾಲನೆ ಮತ್ತು ನೈತಿಕ ಪ್ರಭಾವಗಳಿಗೆ ಒಳಪಟ್ಟಿರುವಂಥ ಸ್ಥಳ ;

(ಖ) ರಾಜ್ಯದ ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ "ಸಂಹಿತೆ" ಎಂದರೆ ಅಂಥ ಪ್ರದೇಶದಲ್ಲಿ ಜಾರಿಯಲ್ಲಿರುವಂತ ದಂಡ ಪ್ರಕ್ರಿಯಾ ಸಂಹಿತೆ, 1898 (ಕೇಂದ್ರ ಅಧಿನಿಯಮ, 1898 V) ;

(ಗ) "ಸಕ್ರಮ ನ್ಯಾಯಾಲಯ" ಎಂದರೆ ಒಬ್ಬ ಜಿಲ್ಲಾ ಮ್ಯಾಜಿಸ್ಟ್ರೇಟನ ನ್ಯಾಯಾಲಯ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನ ನ್ಯಾಯಾಲಯ ;

(ಘ) "ಜಿಲ್ಲಾ ಮ್ಯಾಜಿಸ್ಟ್ರೇಟ್" ಎಂದರೆ, ಸಂಹಿತೆಯ ಮೇರೆಗೆ ಜಿಲ್ಲಾ ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನು ಚಲಾಯಿಸುವ, ರಾಜ್ಯದ ನ್ಯಾಯಿಕ ಸೇವೆಯಲ್ಲಿನ ಅಧಿಕಾರಿ ;

(ಙ) "ಇನ್ಸ್‌ಪೆಕ್ಟರ್ ಜನರಲ್" ಎಂದರೆ ಬಂದೀಖಾನೆಗಳ ಇನ್ಸ್‌ಪೆಕ್ಟರ್, ಜನರಲ್ ಮತ್ತು ಅದು ಇನ್ಸ್‌ಪೆಕ್ಟರ್ ಜನರಲ್‌ನಿಗೆ ಈ ಅಧಿನಿಯಮದ ಮೂಲಕ ವಿಧಿಸಿದ ಎಲ್ಲಾ ಅಥವಾ ಯಾವುದೇ ಕರ್ತವ್ಯವನ್ನು ನೆರವೇರಿಸಲು ರಾಜ್ಯ ಸರ್ಕಾರವು ನೇಮಕ ಮಾಡಿದ ಯಾವನೇ ಅಧಿಕಾರಿಯನ್ನು ಒಳಗೊಳ್ಳುತ್ತದೆ ;

(ಚ) "ಅಧಿಸೂಚನೆ" ಎಂದರೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ;

(ಛ) "ಅಪರಾಧಿ" ಎಂದರೆ ಯಾವುದೇ ಮುಂಚಿನ ಅಪರಾಧ ನಿರ್ಣಯವನ್ನು ಅವನ ವಿರುದ್ಧ ರುಜುವಾತುಪಡಿಸಿರಲಿ ಅಥವಾ ಇಲ್ಲದಿರಲಿ, ಕಾರಾವಾಸ ಶಿಕ್ಷೆಗೆ ಅವನು ಗುರಿಯಾಗುವ ಅಥವಾ ಸಂಹಿತೆಯ VIIIನೇ ಅಧ್ಯಾಯದ ಮೇರೆಗೆ ಭದ್ರತೆಯನ್ನು ಒದಗಿಸಲು ತಪ್ಪಿದ್ದಕ್ಕಾಗಿ ಕಾರಾವಾಸಕ್ಕೆ ಗುರಿಯಾಗುವಂಥ ಅಪರಾಧಕ್ಕಾಗಿ ತಪ್ಪಿತಸ್ಥನೆಂದು ರುಜುವಾತಾದ ವ್ಯಕ್ತಿ ;

(ಜ) "ನಿಯಮಿಸಲಾದುದು" ಎಂದರೆ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ;

(ಝ) "ನಿಷೇಧಿತ ವಸ್ತು" ಎಂದರೆ ಯಾವ ವಸ್ತುವನ್ನು ಯಾವುದೇ ಬೋರ್ಸ್ಟಲ್ ಶಾಲೆಯೊಳಕ್ಕೆ ತರುವುದನ್ನು ಅಥವಾ ಅದರಿಂದ ಸ್ಥಳಾಂತರಿಸುವುದನ್ನು ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೂಲಕ ನಿಷೇಧಿಸಲಾಗಿದೆಯೋ ಆ ವಸ್ತು ;

(ಞ) "ಯುವ ಅಪರಾಧಿ" ಎಂದರೆ, 21 ವರ್ಷಗಳಿಗಿಂತ ಹೆಚ್ಚು ವಯಸ್ಸಿನವನಲ್ಲದ ಮತ್ತು ;

(i) ಯಾವ ಪ್ರದೇಶದಲ್ಲಿ ಕರ್ನಾಟಕ ಮಕ್ಕಳ ಅಧಿನಿಯಮ, 1963 ಪ್ರವರ್ತನೆಯಲ್ಲಿಲ್ಲವೋ ಆ ಯಾವುದೇ ಪ್ರದೇಶದಲ್ಲಿ ಹದಿನೈದು ವರ್ಷಗಳಿಗಿಂತ ಕಡಿಮೆಯಲ್ಲದ ; ಅಥವಾ

(ii) ಇತರೆ ಪ್ರದೇಶಗಳಲ್ಲಿ, ಬಾಲಕನ ಸಂದರ್ಭದಲ್ಲಿ ಹದಿನಾರು ವರ್ಷಗಳಿಗಿಂತ ಕಡಿಮೆಯಲ್ಲದ ಮತ್ತು ಬಾಲಕಿಯ ಸಂದರ್ಭದಲ್ಲಿ ಹದಿನೆಂಟು ವರ್ಷಗಳಿಗಿಂತ ಕಡಿಮೆಯಿಲ್ಲದ ಅಪರಾಧಿ ; ಅಥವಾ

**3. ಬೋರ್ಸ್ಟಲ್ ಶಾಲೆಗಳ ಸ್ಥಾಪನೆ.–** (1) ಈ ಅಧಿನಿಯಮದ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು, ಒಂದು ಅಥವಾ ಹೆಚ್ಚು ಬೋರ್ಸ್ಟಲ್ ಶಾಲೆಗಳನ್ನು ಸ್ಥಾಪಿಸಬಹುದು.

(2) ಪ್ರತಿಯೊಂದು ಬೋರ್ಸ್ಟಲ್ ಶಾಲೆಗಾಗಿ ನಿಯಮಿಸಬಹುದಾದಂಥ ರೀತಿಯಲ್ಲಿ ಸಂದರ್ಶಕ ಸಮಿತಿಯನ್ನು ನೇಮಕ ಮಾಡತಕ್ಕದ್ದು.

**4. ಬಂದೀಖಾನೆಗಳ ಅಧಿನಿಯಮ ಮತ್ತು ಬಂದಿಗಳ ಅಧಿನಿಯಮದ ಅನ್ವಯ.–** ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮೂಲಕ ಮಾಡಿದ ಯಾವುದೇ ಬದಲಾವಣೆಗಳು, ಅಳವಡಿಕೆಗಳು ಮತ್ತು ವಿನಾಯಿತಿಗಳಿಗೆ ಒಳಪಟ್ಟು, ಕರ್ನಾಟಕ ಬಂದೀಖಾನೆಗಳ ಅಧಿನಿಯಮ, 1963 ಮತ್ತ ಕರ್ನಾಟಕ ಬಂದಿಗಳ ಅಧಿನಿಯಮ, 1963 ಮತ್ತು ಅವುಗಳ ಮೇರೆಗೆ ರಚಿಸಿದ ನಿಯಮಗಳು ಈ ಅಧಿನಿಯಮದ ಮೇರೆಗೆ ಸ್ಥಾಪಿಸಿದ ಪ್ರತಿಯೊಂದು ಬೋರ್ಸ್ಟಲ್ ಶಾಲೆಯ ಸಂದರ್ಭದಲ್ಲಿ ಅದು ಬಂದೀಖಾನೆ ಮತ್ತು ನಿವಾಸಿಗಳು ಬಂದಿಗಳಾಗಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

## ಅಧ್ಯಾಯ – II

## ಬೋರ್ಸ್ಟಲ್ ಶಾಲೆಗಳಿಗೆ ಒಪ್ಪಿಸುವಿಕೆ

**5. ನ್ಯಾಯಾಲಯವು ಬೋರ್ಸ್ಟಲ್ ಶಾಲೆಯಲ್ಲಿ ಬಂಧನಕ್ಕಾಗಿ ಆದೇಶವನ್ನು ಮಾಡಬಹುದು.–** ಸಕ್ಷಮ ನ್ಯಾಯಾಲಯಕ್ಕೆ ಅದರ ಮುಂದೆ ಇರುವ ಅಪರಾಧಿಯು ಯುವ ಅಪರಾಧಿಯೆಂದು ಮತ್ತು ಅವನ ಅಪರಾಧಿಕ ಸ್ವಭಾವಗಳು ಅಥವಾ ಪ್ರವೃತ್ತಿಗಳ ಅಥವಾ ಕೆಟ್ಟ ವ್ಯಕ್ತಿಗಳ ಸಹವಾಸದ ಕಾರಣದಿಂದಾಗಿ, ಅವನನ್ನು ಅವನ ಸುಧಾರಣೆಗೆ ಅತ್ಯಂತ ಅನುಕೂಲಕರವೆಂದು ಕಂಡುಬರುವಂಥ ಶಿಕ್ಷಣ ಹಾಗೂ ಶಿಸ್ತಿಗೆ ಒಳಪಡಿಸಿ ಅಂಥ ಅವಧಿಗಾಗಿ ಬಂಧನಕ್ಕೊಳಪಡಿಸುವುದು ವಿಹಿತವೆಂದು ಕಂಡುಬಂದಲ್ಲಿ ಅಂಥ ನ್ಯಾಯಾಲಯವು ಕಾರಾವಾಸದ ಶಿಕ್ಷೆ ಅಥವಾ ಸಂಹಿತೆಯ 123ನೇ ಪ್ರಕರಣದ ಮೇರೆಗೆ ಕಾರಾವಾಸದ ಆದೇಶಕ್ಕೆ ಬದಲಾಗಿ ಈ ಅಧಿನಿಯಮದ ಮೇರೆಗೆ ಸ್ಥಾಪಿಸಿದ ಬೊರ್ಸ್ಟಲ್ ಶಾಲೆಯಲ್ಲಿ ಅಂಥ ಅಪರಾಧಿಯ ಬಂಧನಕ್ಕಾಗಿ ಅಥವಾ 13ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಿಗೊಳಪಟ್ಟು ಸಕ್ಷಮ ನ್ಯಾಯಾಲಯವು ಯೋಗ್ಯವೆಂದು ಯೋಚಿಸುವಂಥ ಮೂರು ವರ್ಷಗಳಿಗಿಂತ ಕಡಿಮೆಯಿಲ್ಲದೆ ಅಥವಾ ಐದು ವರ್ಷಗಳಿಗೆ ಹೆಚ್ಚಿಲ್ಲದ ಅವಧಿಕಾಗಿ ಆದರೆ ಯಾವುದೇ ಸಂದರ್ಭದಲ್ಲಿ ನ್ಯಾಯಾಲಯದ ಅಭಿಪ್ರಾಯದಲ್ಲಿ ಯಾವ ದಿನಾಂಕದಂದು ಅಪರಾಧಿಗೆ ಇಪ್ಪತ್ಮೂರು ವರ್ಷಗಳ ವಯಸ್ಸು ತುಂಬುವುದೋ ಆ ದಿನಾಂಕದಿಂದ ಆಚೆ ವಿಸ್ತರಿಸದ ಹಾಗೆ ಭಾರತದಲ್ಲಿನ ಯಾವುದೇ ಇತರ ರಾಜ್ಯದಲ್ಲಿನ ಬೋರ್ಸ್ಟಲ್ ಶಾಲೆಯಲ್ಲಿ ಅಂಥ ಅಪರಾಧಿಯ ಬಂಧನಕ್ಕಾಗಿ ಆದೇಶವನ್ನು ಮಾಡಬಹುದು:

ಪರಂತು, ಅಂಥ ಆದೇಶವನ್ನು ಮಾಡುವುದಕ್ಕೆ ಮುಂಚೆ ಸಕ್ಷಮ ನ್ಯಾಯಾಲಯವು ಸದರಿ ಅಪರಾಧಿಯ ತಂದೆ ತಾಯಿಗಳಿಗೆ ಅಥವಾ ಪಾಲಕರಿಗೆ, ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಡತಕ್ಕದ್ದು ಮತ್ತು ಅಂಥ ಬೊರ್ಸ್ಟಲ್ ಶಾಲೆಯಲ್ಲಿ ಉಪಚಾರಕ್ಕಾಗಿ ಆ ಪ್ರಕರಣದ ಸೂಕ್ತತೆಯ ಬಗ್ಗೆ ಮಾಡಿಕೊಳ್ಳಬಹುದಾದಂಥ ಯಾವುದೇ ಮನವಿ ಅಥವಾ ನಿವೇದನೆಯನ್ನು ಪರ್ಯಾಲೋಚಿಸತಕ್ಕದ್ದು ಮತ್ತು ಯುವಾಪರಾಧಿಯ ಚಾರಿತ್ರ್ಯ, ಆರೋಗ್ಯದ ಸ್ಥಿತಿ ಮತ್ತು ಮಾನಸಿಕ ಸ್ಥಿತಿ ಮತ್ತು ಆ ಪ್ರಕರಣದ ಇತರ ಸಂದರ್ಭಗಳು ಹಿಂದೆ ಹೇಳಿದಂತೆ ಅಂಥ ಅಪರಾಧಿಯು ಅಂಥ ಶಿಕ್ಷಣ ಮತ್ತು ಶಿಸ್ತಿನಿಂದ ಲಾಭ ಪಡೆಯುವ ಸಂಭವವುಳ್ಳದ್ದಾಗಿದೆಯೆಂದು ಅದು ಮನದಟ್ಟು ಮಾಡಿಕೊಳ್ಳತಕ್ಕದ್ದು.

**6. ವಿನಾಯಿತಿಗೊಳಿಸಲು ರಾಜ್ಯ ಸರ್ಕಾರದ ಅಧಿಕಾರ.–** ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ಅಂಥ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ವ್ಯಕ್ತಿಗಳ ಯಾವುದೇ ವರ್ಗ ಅಥವಾ ವರ್ಗಗಳನ್ನು ಒಂದು ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡಲು ಆದೇಶಿಸತಕ್ಕದ್ದಲ್ಲವೆಂದು ನಿರ್ದೇಶಿಸಬಹುದು.

**7. ಬಂಧನಕ್ಕಾಗಿ ಆದೇಶವನ್ನು ಮಾಡಲು ಶಕ್ತಗೊಳಿಸಲಾದ ನ್ಯಾಯಾಲಯಗಳು.–** (1) ತಾತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅದರ ಈ ಅಧಿನಿಯಮದಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿರುವಂತೆ ಹೊರತು ಈ ಕೆಳಕಂಡ ನ್ಯಾಯಾಲಯಗಳು, ಯುವ ಅಪರಾಧಿಗಳ ವಿರುದ್ಧ ಈ ಅಧಿನಿಯಮದ ಮೇರೆಗೆ ಬಂಧನಕ್ಕಾಗಿನ ಆದೇಶವನ್ನು ಮತ್ತು ಸಕ್ಷಮ ನ್ಯಾಯಾಲಯವು ಮಾಡಲು ಶಕ್ತಗೊಳಿಸಿದಂಥ ಇತರೆ ಆದೇಶವನ್ನು ಮಾಡಲು ಅನನ್ಯವಾಗಿ ಅಧಿಕಾರವನ್ನು ಹೊಂದಿರತಕ್ಕದ್ದು.–

(ಕ) ಜಿಲ್ಲಾ ಮ್ಯಾಜಿಸ್ಟ್ರೇಟನ ನ್ಯಾಯಾಲಯ ;

(ಖ) ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನ ನ್ಯಾಯಾಲಯ ;

(2) ಈ ಅಧಿನಿಯಮದ ಮೂಲಕ ಸಕ್ಷಮ ನ್ಯಾಯಾಲಯಕ್ಕೆ ಪ್ರಧಾನ ಮಾಡಿದ ಅಧಿಕಾರಗಳನ್ನು ಉಚ್ಚನ್ಯಾಯಾಲಯ ಹಾಗೂ ಸೆಷನ್ಸ್ ನ್ಯಾಯಾಲಯವು ಸಹ ವ್ಯವಹರಣೆಯು, ಅಪೀಲು, ಪುನರೀಕ್ಷಣೆ ಅಥವಾ ಅನ್ಯಥಾ ಇವುಗಳ ಮುಂದೆ ಬಂದಾಗ, ಚಲಾಯಿಸತಕ್ಕದ್ದು.

**8. ಈ ಅಧಿನಿಯಮದ ಮೇರೆಗೆ ಬಂಧನಕ್ಕಾಗಿನ ಆದೇಶವನ್ನು ಮಾಡಲು ಮ್ಯಾಜಿಸ್ಟ್ರೇಟನನ್ನು ಶಕ್ತಗೊಳಿಸಿಲ್ಲದೆ ಇರುವಾಗ ಪ್ರಕ್ರಿಯೆ.–**

(1) ಈ ಅಧಿನಿಯಮದ ಮೇರೆಗೆ ಬಂಧನಕ್ಕಾಗಿನ ಆದೇಶವನ್ನು ಮಾಡಲು ಶಕ್ತಗೊಳಿಸಿಲ್ಲದಿರುವ ಯಾವನೇ ಮ್ಯಾಜಿಸ್ಟ್ರೇಟನು, ಅವನ ಮುಂದೆ ಇರುವ ಅಪರಾಧಿಯು ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿರಿಸಬೇಕಾದ ಯುವಾಪರಾಧಿಯೆಂದು ಅಭಿಪ್ರಾಯ ಪಟ್ಟಾಗ, ಅವನು ಯಾವುದೇ ಆದೇಶವನ್ನು ಮಾಡುವಾಗ, ಅಂಥ ಅಭಿಪ್ರಾಯವನ್ನು ದಾಖಲು ಮಾಡಬಹುದು ಮತ್ತು ಅವನ ವ್ಯವಹರಣೆಗಳನ್ನು ಸಂದರ್ಭಾನುಸಾರ ಅವನು ಅಧೀನನಾಗಿರುವಂಥ ಜಿಲ್ಲಾ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಅಥವಾ ಸೆಷನ್ಸ್ ನ್ಯಾಯಾಲಯಕ್ಕೆ ಒಪ್ಪಿಸಬಹುದು ಮತ್ತು ಆ ಅಪರಾಧಿಯನ್ನು ಅಲ್ಲಿಗೆ ಕಳುಹಿಸಿಕೊಡಬಹುದು.

(2) (1)ನೇ ಉಪ–ಪ್ರಕರಣದ ಮೇರೆಗೆ ಆ ವ್ಯವಹರಣೆಗಳನ್ನು ಒಪ್ಪಿಸಲಾಗಿರುವಂಥ ಸೆಷನ್ಸ್ ನ್ಯಾಯಾಲಯವು ಅಂಥ ವ್ಯವಹರಣೆಗಳನ್ನು ಯಾವುದೇ ಸಕ್ಷಮ ನ್ಯಾಯಾಲಯಕ್ಕೆ ಈ ಅಧಿನಿಯಮದ ಮೇರೆಗೆ ಆದೇಶವನ್ನು ಮಾಡಲು ವರ್ಗಾಯಿಸಬಹುದು.

(3) (1)ನೇ ಉಪ–ಪ್ರಕರಣದ ಮೇರೆಗೆ ಒಪ್ಪಿಸಲಾಗಿರುವಂಥ ವ್ಯವಹರಣೆಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟನ ನ್ಯಾಯಾಲಯ ಅಥವಾ (2)ನೇ ಉಪ–ಪ್ರಕರಣದ ಮೇರೆಗೆ ವ್ಯವಹರಣೆಗಳನ್ನು

ವರ್ಗಾಯಿಸಲಾಗಿರುವಂಥ ಸಕ್ಷಮ ನ್ಯಾಯಾಲಯವು ಅದು ಸೂಕ್ತವೆಂದು ಯೋಚಿಸುವಂಥ ಮತ್ತು ಇನ್ನು ಹೆಚ್ಚಿನ ವಿಚಾರಣೆ ಯಾವುದಾದರೂ ಇದ್ದರೆ, ಅದನ್ನು ಮಾಡಬಹುದು ಮತ್ತು ಅಂಥ ಅಪರಾಧಿಯನ್ನು ಮೂಲತಃ ಅದರ ಮುಂದೆ ತರಲಾಗಿದ್ದಿದ್ದರೆ ಅಥವಾ ಅದು ಅಧಿವಿಚಾರಣೆ ಮಾಡಿದ್ದಿದ್ದರೆ ಅದು ಮಾಡಬಹುದಾಗಿದ್ದಂಥ ಬೋರ್ಸ್ಟಲ್ ಶಾಲೆಯಲ್ಲಿ ಅಪರಾಧಿಯ ಬಂಧನಕ್ಕಾಗಿನ ಅಥವಾ ಅಂಥ ಇತರ ಶಿಕ್ಷೆಯನ್ನು ಕೊಡಬಹುದು ಅಥವಾ ಆದೇಶವನ್ನು ಮಾಡಬಹುದು.

**9. 5ನೇ ಪ್ರಕರಣದ ಮೂಲಕ ಪ್ರಧಾನ ಮಾಡಿದ ಅಧಿಕಾರಗಳ ಮೇಲೆ ಪರಿಮಿತಿ.–**

ಸಂಹಿತೆಯ 106ನೇ ಪ್ರಕರಣ ಅಥವಾ 118ನೇ ಪ್ರಕರಣದ ಮೇರೆಗೆ ಭದ್ರತೆಯನ್ನು ಒದಗಿಸಲು ಆದೇಶಿಸಿದಾಗ, ಹಾಗೆ ಮಾಡಲು ತಪ್ಪಿದ್ದಕ್ಕಾಗಿ ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಟ್ಟ ಯಾವನೇ ಯುವ ಅಪರಾಧಿಯನ್ನು ಅಂಥ ಭದ್ರತೆಯನ್ನು ಒದಗಿಸಿದ ಮೇಲೆ ಅಥವಾ ಸಂಹಿತೆಯ 124ನೇ ಪ್ರಕರಣದ ಮೇರೆಗೆ ಒಂದು ಆದೇಶವನ್ನು ಮಾಡಿದ ಮೇಲೆ ಬಿಡುಗಡೆ ಮಾಡತಕ್ಕದ್ದು.

**10. ಬಂದೀಖಾನೆಯಿಂದ ಬೋರ್ಸ್ಟಲ್ ಶಾಲೆಗೆ ವ್ಯಕ್ತಿಯ ವರ್ಗಾವಣೆ.–**

(1) ಇನ್ಸ್‌ಪೆಕ್ಟರ್ ಜನರಲ್‌ನಿಗೆ ಯಾವುದೇ ಕಾನೂನಿನ ಮೇರೆಗೆ ಕೊಟ್ಟ ಶಿಕ್ಷೆಯ ಪರಿಣಾಮವಾಗಿ ಕಾರಾವಾಸದಲ್ಲಿಟ್ಟ ಅಥವಾ ಭದ್ರತೆಯನ್ನು ಕೊಡಲು ತಪ್ಪಿದ್ದಕ್ಕಾಗಿ ಸಂಹಿತೆಯ 123ನೇ ಪ್ರಕರಣದ ಮೇರೆಗೆ ಮಾಡಿದ ಆದೇಶದ ಮೇರೆಗೆ ಕಾರಾವಾಸವನ್ನು ಅನುಭವಿಸುತ್ತಿರುವ ವ್ಯಕ್ತಿಯು, ಅವನ ಅಪರಾಧಿಕ ಸ್ವಭಾವಗಳು ಅಥವಾ ಪ್ರವೃತ್ತಿಗಳು ಅಥವಾ ಕೆಟ್ಟ ವ್ಯಕ್ತಿಗಳ ಸಹವಾಸದ ಕಾರಣದಿಂದಾಗಿ ಅವನನ್ನು ಬೋರ್ಸ್ಟಲ್ ಶಾಲೆಯಲ್ಲಿ ಅನುಕೂಲಕರವಾಗಿ ಬಂಧನದಲ್ಲಿರಿಸಬಹುದಾದ ಯುವಾಪರಾಧಿಯೆಂದು ಮನದಟ್ಟಾದರೆ, ಇನ್ಸ್‌ಪೆಕ್ಟರ್ ಜನರಲ್‌ನು ಆ ಪ್ರಕರಣವನ್ನು ರಾಜ್ಯ ಸರ್ಕಾರಕ್ಕೆ ವರದಿ ಮಾಡಬಹುದು ಮತ್ತು ರಾಜ್ಯ ಸರ್ಕಾರವು ಅದು ಸರಿಯೆಂದು ಭಾವಿಸಬಹುದಾದ ಅಥವಾ ನಿಯಮಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ ವರದಿಯಲ್ಲಿ ನಮೂದಿಸಲಾದ ಕಾರಣಗಳಿಗಾಗಿ ಆ ವ್ಯಕ್ತಿಯನ್ನು ಬೋರ್ಸ್ಟಲ್ ಶಾಲೆಯಲ್ಲಿ ಬಂಧಿಸಿಡ ಬೇಕೆಂದು ಮನದಟ್ಟು ಮಾಡಿಕೊಂಡರೆ, ಅದು ಬರಹದಲ್ಲಿನ ಆದೇಶದ ಮೂಲಕ ಅಂಥ ವ್ಯಕ್ತಿಯನ್ನು ಬಂದೀಖಾನೆಯಿಂದ, ಈ ಅಧಿನಿಯಮದ ಮೇರೆಗೆ ಸ್ಥಾಪಿಸಲಾದ ಬೋರ್ಸ್ಟಲ್ ಶಾಲೆಗೆ ಅಥವಾ 13ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಭಾರತದಲ್ಲಿನ ಇತರ ಯಾವುದೇ ರಾಜ್ಯದಲ್ಲಿನ ಬೋರ್ಸ್ಟಲ್ ಶಾಲೆಗೆ ವರ್ಗಾಯಿಸಬೇಕೆಂದು ಮತ್ತು ಸಂದರ್ಭಾನುಸಾರ ಮುಕ್ತಾಯವಾಗದೆ ಉಳಿದಿರುವ ಅವನ ಶಿಕ್ಷೆಯ ಅಥವಾ ಭದ್ರತೆಯನ್ನು ಒದಗಿಸಲು ತಪ್ಪಿದ್ದಕ್ಕಾಗಿ ಅವನು ಅನುಭವಿಸಲು ಹೊಣೆಯಾಗಿರುವಂಥ ಕಾರಾವಾಸದ ಅವಧಿಯ ಬದಲಾಗಿ, ಯಾವ ಗರಿಷ್ಠ ಅವಧಿಗಾಗಿ ಅಂಥ ವ್ಯಕ್ತಿಯನ್ನು 5ನೇ ಪ್ರಕರಣದ ಮೇರೆಗೆ ಸಕ್ಷಮ ನ್ಯಾಯಾಲಯವು ಬಂಧನದಲ್ಲಿರಿಸಬೇಕೆಂದು ಆದೇಶಿಸಬಹುದಾಗಿತ್ತೋ ಆ ಗರಿಷ್ಠ ಅವಧಿಯನ್ನು ಮೀರದಿರುವ ಈಗಾಗಲೇ ಅನುಭವಿಸಿದ ಕಾರಾವಾಸದ ಅವಧಿಯ ಜೊತೆಗೆ ಅಂಥ ಅವಧಿಗಾಗಿ ಅಂಥ ಶಾಲೆಯಲ್ಲಿ ಬಂಧನದಲ್ಲಿಡಬೇಕೆಂದು ನಿರ್ದೇಶಿಸಬಹುದು:

ಪರಂತು, ಅಂಥ ವ್ಯಕ್ತಿಯನ್ನು ಸಂದರ್ಭಾನುಸಾರ ಅನುಭವಿಸಿದ ಕಾರಾವಾಸದ ಅವಧಿಯನ್ನು ಒಳಗೊಂಡು ಯಾವ ಅವಧಿಯು ಅಂಥ ವ್ಯಕ್ತಿಯನ್ನು ಶಿಕ್ಷೆಗೆ ಗುರಿಪಡಿಸಲಾಗಿರುವಂಥ ಕಾರಾವಾಸದ ಅವಧಿಯನ್ನು ಅಥವಾ ಭದ್ರತೆಯನ್ನು ಒದಗಿಸಲು ತಪ್ಪಿದ್ದಕ್ಕಾಗಿ ಅನುಭವಿಸಲು ಅವನು ಗುರಿಯಾಗಿರುವಂಥ ಕಾರಾವಾಸದ ಅವಧಿಯನ್ನು ಮೀರುವುದೋ, ಆ ಅವಧಿಗಾಗಿ ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡಬೇಕೆಂದು ನಿರ್ದೇಶಿಸತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದ ಮೇರೆಗೆ ಬೋರ್ಸ್ಟಲ್ ಶಾಲೆಗೆ ವರ್ಗಾವಣೆ ಮಾಡಲಾದ ವ್ಯಕ್ತಿಯನ್ನು, ಅಂಥ ಶಾಲೆಗೆ ವರ್ಗಾವಣೆ ಮಾಡಿದ ಮೇಲೆ 5ನೇ ಪ್ರಕರಣದ ಉಪಬಂಧಗಳ ಮೇರೆಗೆ ಸಕ್ಷಮ ನ್ಯಾಯಾಲಯವು ಬಂಧನದಲ್ಲಿಡಬೇಕೆಂದು ಆದೇಶಿಸಲಾದ ಅಪರಾಧಿಯೆಂಬುದಾಗಿ ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳು ತದನುಸಾರವಾಗಿ ಅಂಥ ವ್ಯಕ್ತಿಗೆ ಅನ್ವಯವಾಗತಕ್ಕದ್ದು.

**11. ತಿದ್ದಲಾಗದವರು ಮುಂತಾದವರನ್ನು ಬಂದೀಖಾನೆಗಳಿಗೆ ವರ್ಗಾಯಿಸುವುದು.–** (1) ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಟ್ಟ ಅಪರಾಧಿಯು ತಪ್ಪಿಸಿಕೊಂಡು ಹೋಗುವಲ್ಲಿ ಅಥವಾ ಇನ್ಸ್‌ಪೆಕ್ಟರ್ ಜನರಲ್‌ನು ರಾಜ್ಯ ಸರ್ಕಾರಕ್ಕೆ ಅವನು ತಿದ್ದಲಾಗದವನಾಗಿರುವುದಾಗಿ ಅಥವಾ ಶಾಲೆಯ ಇತರ ನಿವಾಸಿಗಳ ಮೇಲೆ ದುಷ್ಪ್ರಭಾವವನ್ನು ಬೀರುವನೆಂದು ಅಥವಾ ಬೀರುವ ಸಂಭವವಿದೆಯೆಂದು ಅಥವಾ ಇಪ್ಪತ್ತೊಂದು ವರ್ಷಗಳಿಗಿಂತ ಹೆಚ್ಚು ವಯಸ್ಸಿನವನಾಗಿರುವನೆಂದು ವರದಿ ಮಾಡಿರುವಲ್ಲಿ ಅಥವಾ 15ನೇ ಪ್ರಕರಣದ ಮೇರೆಗೆ ಮಂಜೂರ್ಮಾಡಿದ ಲೈಸೆನ್ಸ್‌ನ್ನು 16ನೇ ಪ್ರಕರಣದ (1)ನೇ ಉಪ–ಪ್ರಕರಣದ ಪರಂತುಕದ (ii)ನೇ ಖಂಡದ ಮೇರೆಗೆ ರಾಜ್ಯ ಸರ್ಕಾರವು ರದ್ದುಪಡಿಸಿರುವಲ್ಲಿ ಅಥವಾ ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಅವನು ಬೋರ್ಸ್ಟಲ್ ಶಾಲೆಯಲ್ಲಿ ತರಬೇತಿಗಾಗಿ ಅನ್ಯಥಾ ತಕ್ಕವನಾಗಿಲ್ಲದಿರುವಲ್ಲಿ ರಾಜ್ಯ ಸರ್ಕಾರವು ಬಂಧನದ ಮುಕ್ತಾಯವಾಗದೆ ಉಳಿದ ಅವಧಿಯನ್ನು ಅದು ನಿರ್ಧರಿಸಬಹುದಾದಂಥ ಕಾರಾವಾಸದ ಯಾವುದೇ ವಿವರಣೆಯ ಕಾರಾವಾಸದ ಅಂಥ ಅವಧಿಗೆ ತಗ್ಗಿಸಬಹುದು. ಆದರೆ ಯಾವುದೇ ಸಂದರ್ಭದಲ್ಲಿ ಈ ಕೆಳಕಂಡ ಮೂರು ಅವಧಿಗಳಲ್ಲಿ ಅತ್ಯಂತ ಕಡಿಮೆ ಅವಧಿಯನ್ನು ಮೀರದಂತೆ ತಗ್ಗಿಸತಕ್ಕದ್ದಲ್ಲ ಎಂದರೆ.–

(ಕ) ಬಂಧನದ ಮುಕ್ತಾಯವಾಗದೆ ಉಳಿದ ಅವಧಿ : ಅಥವಾ

(ಖ) ಯಾವುದರಿಂದಾಗಿ ಆ ಅಪರಾಧಿಯನ್ನು ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡಬೇಕೆಂದು ಆದೇಶಿಸಲಾಯಿತೋ ಅಥವಾ ರಾಜ್ಯ ಸರ್ಕಾರವು ಅಂಥ ಶಾಲೆಗೆ ವರ್ಗಾಯಿಸಬೇಕೆಂದು ಮತ್ತು ಅಲ್ಲಿ ಬಂಧನದಲ್ಲಿಡಬೇಕೆಂದು ಆದೇಶಿಸಿದೆಯೋ ಅದರಿಂದಾಗಿ ಸಂದರ್ಭಾನುಸಾರ ಯಾವ ಅಪರಾಧಕ್ಕಾಗಿ ಅಪರಾಧಿಯನ್ನು ತಪ್ಪಿತಸ್ಥನೆಂದು ರುಜುವಾತುಪಡಿಸಲಾಗಿದೆಯೋ, ಆ ಅಪರಾಧಕ್ಕಾಗಿ ಅಥವಾ ಭದ್ರತೆಯನ್ನು ಒದಗಿಸಲು ತಪ್ಪಿದ್ದಕ್ಕಾಗಿ ಕಾನೂನು ಮೂಲಕ ಉಪಬಂಧಿಸಿದ ಕಾರಾವಾಸದ ಗರಿಷ್ಠ ಅವಧಿ ಅಥವಾ ;

(ಗ) ಅವನ ಬಗ್ಗೆ ಅಧಿವಿಚಾರಣೆ ನಡೆಸಿದಂಥ ನ್ಯಾಯಾಲಯವು ಸಂಹಿತೆಯ ಮೇರೆಗೆ ಶಿಕ್ಷೆ ವಿಧಿಸಲು ಅಧಿಕಾರವನ್ನು ಹೊಂದಿದ್ದ ಕಾರಾವಾಸದ ಗರಿಷ್ಠ ಅವಧಿ ;

(2) ಅಂಥ ಅಪರಾಧಿಯನ್ನು ಸರ್ಕಾರದ ಕಾರ್ಯದರ್ಶಿಯ ಸಹಿಯೊಂದಿಗೆ ವಾರೆಂಟಿನ ಮೂಲಕ ಕರ್ನಾಟಕ ರಾಜ್ಯದಲ್ಲಿನ ಯಾವುದೇ ಬಂದೀಖಾನೆಯಲ್ಲಿ ಬಂಧನದಲ್ಲಿ ಇಡಬಹುದು ಮತ್ತು ಅಂಥ ವಾರಂಟನ್ನು ಜಾರಿಗೊಳಿಸತಕ್ಕದ್ದು ಮತ್ತು ಅಂಥ ಅಪರಾಧಿಗೆ ವಿಧಿಸಿದ ಕಾರಾವಾಸದ ಶಿಕ್ಷೆಯನ್ನು ಅಂಥ ವ್ಯಕ್ತಿಗೆ ಕ್ರಿಮಿನಲ್ ಅಧಿಕಾರ ವ್ಯಾಪ್ತಿ ಹೊಂದಿರುವ ಸಕ್ಷಮ ನ್ಯಾಯಾಲಯವು ಶಿಕ್ಷೆ ವಿಧಿಸಿದ್ದಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಜಾರಿಗೊಳಿಸತಕ್ಕದ್ದು.

**12. ರಾಜ್ಯ ಸರ್ಕಾರವು ವ್ಯಕ್ತಿಯನ್ನು ಯಾವ ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿರಿಸತಕ್ಕದ್ದೆಂಬುದನ್ನು ನಿರ್ಧರಿಸತಕ್ಕದ್ದು ಮತ್ತು ಅದು ಸ್ಥಳಾಂತರಣವನ್ನು ಆದೇಶಿಸಬಹುದು :** (1) ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡಬೇಕೆಂದು ಆದೇಶಿಸಲಾದ ಪ್ರತಿಯೊಬ್ಬ ಯುವ ಅಪರಾಧಿಯನ್ನು ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಹಾಗೆ ಬಂಧನದಲ್ಲಿಡಬೇಕೆಂದು ಆದೇಶಿಸಲಾದ ವ್ಯಕ್ತಿಗಳನ್ನು ಸ್ವೀಕರಿಸುವುದಕ್ಕಾಗಿ ಗೊತ್ತುಪಡಿಸಬಹುದಾದಂಥ ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡತಕ್ಕದ್ದು.

ಪರಂತು, ಅಂಥ ಅಪರಾಧಿಗೆ ಬೋರ್ಸ್ಟಲ್ ಶಾಲೆಯಲ್ಲಿ ಕೂಡಲೇ ಸ್ಥಳಾವಕಾಶವು ಲಭ್ಯವಿಲ್ಲದಿದ್ದರೆ, ಅವನನ್ನು ಬೋರ್ಸ್ಟಲ್ ಶಾಲೆಗೆ ಕಳುಹಿಸುವವರೆಗೆ ಅವನನ್ನು ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ಬಂದೀಖಾನೆಯ ವಿಶೇಷ ವಾರ್ಡಿನಲ್ಲಿ ಅಥವಾ ಇತರ ಸೂಕ್ತ ಭಾಗದಲ್ಲಿ ಬಂಧನದಲ್ಲಿಡಬಹುದು ಮತ್ತು ಹಾಗೆ ಅನುಭವಿಸಿದ ಅದರ ಬಂಧನದ ಅವಧಿಯನ್ನು ಬೋರ್ಸ್ಟಲ್ ಶಾಲೆಯಲ್ಲಿನ ಬಂಧನವೆಂದು ಪರಿಗಣಿಸತಕ್ಕದ್ದು.

(2) ರಾಜ್ಯ ಸರ್ಕಾರವು ಯಾವನೇ ಯುವ ಅಪರಾಧಿಯನ್ನು ಈ ಅಧಿನಿಯಮದ ಮೇರೆಗೆ ಸ್ಥಾಪಿಸಿದ ಯಾವುದೇ ಒಂದು ಬೋರ್ಸ್ಟಲ್ ಶಾಲೆಯಿಂದ ಮತ್ತೊಂದು ಬೋರ್ಸ್ಟಲ್ ಶಾಲೆಗೆ ಅಥವಾ ಭಾರತದಲ್ಲಿನ ಯಾವುದೇ ಇತರ ರಾಜ್ಯದ ಬೋರ್ಸ್ಟಲ್ ಶಾಲೆಗೆ ಸ್ಥಳಾಂತರಿಸಲು ಆದೇಶಿಸಬಹುದು ;

ಪರಂತು, ಬೋರ್ಸ್ಟಲ್ ಶಾಲೆಯಲ್ಲಿ ಅವನ ಬಂಧನದ ಇಡೀ ಅವಧಿಯನ್ನು ಅಂಥ ಸ್ಥಳಾಂತರಣದ ಮೂಲಕ ಹೆಚ್ಚಿಸತಕ್ಕದ್ದಲ್ಲ.

**13. ಅಪರಾಧಿಗಳನ್ನು ಇತರೆ ರಾಜ್ಯದಲ್ಲಿನ ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡಲು ಅಥವಾ ಅಲ್ಲಿಗೆ ಸ್ಥಳಾಂತರಿಸಲು ಆದೇಶಿಸುವ ಅಧಿಕಾರ :** (1) ಯಾವುದೇ ಇತರ ರಾಜ್ಯದಲ್ಲಿನ ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡುವುದಕ್ಕಾಗಿ ಅಥವಾ ಅಲ್ಲಿಗೆ ವರ್ಗಾವಣೆ ಅಥವಾ ಸ್ಥಳಾಂತರಿಸುವುದಕ್ಕಾಗಿನ ಯಾವುದೇ ಆದೇಶವನ್ನು ಅಂಥ ಬೋರ್ಸ್ಟಲ್ ಶಾಲೆಯ ಪ್ರಭಾರದಲ್ಲಿರುವ ಅಧಿಕಾರಿಯ ಪೂರ್ವ ಸಹಮತಿಯಿಂದ ಹೊರತು ಮತ್ತು ಸದರಿ ರಾಜ್ಯದ ಸರ್ಕಾರವು ಅದರಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅಥವಾ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಂಥ ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡುವುದಕ್ಕಾಗಿ ಸಮ್ಮತಿಸಿದ್ದ ಹೊರತು ಅಥವಾ ಅಂಥ ಅಪರಾಧಿಯನ್ನು ಸ್ವೀಕರಿಸಲು ಶಕ್ತಗೊಳಿಸಿದ್ದ ಹೊರತು ಮಾಡತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗೆ ಸ್ಥಾಪಿಸಿದ ಬೋರ್ಸ್ಟಲ್ ಶಾಲೆಯ ಪ್ರಭಾರದಲ್ಲಿರುವ ಅಧಿಕಾರಿಯು ಈ ಬಗ್ಗೆ ರಚಿಸಿದ ನಿಯಮಗಳಿಗೊಳಪಟ್ಟು ಭಾರತದಲ್ಲಿನ ಯಾವುದೇ ಇತರ ರಾಜ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮಿತಿಯ ಮೇರೆಗೆ ಯಾವನೇ ಪ್ರಾಧಿಕಾರಿಯು ಮಾಡಿದ ಯಾವನೇ ವ್ಯಕ್ತಿಯನ್ನು ಅದರಲ್ಲಿ ಬಂಧನದಲ್ಲಿಡುವುದಕ್ಕಾಗಿ ಮಾಡಿದ ಯಾವುದೇ ಆದೇಶವನ್ನು ಜಾರಿಗೊಳಿಸಬಹುದು. ಈ ಉಪಬಂಧದ ಮೇರೆಗೆ ಅಂಥ ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡಲಾದ ವ್ಯಕ್ತಿಯನ್ನು 5ನೇ ಪ್ರಕರಣದ ಉಪಬಂಧಗಳ ಮೇರೆಗೆ ಬಂಧನದಲ್ಲಿಡಬೇಕೆಂದು ಆದೇಶಿಸಿದ ಅಪರಾಧಿ ಎಂಬುದಾಗಿ ಭಾವಿಸತಕ್ಕದ್ದು.

**14. ವೈದ್ಯಕೀಯ ಚಿಕಿತ್ಸೆಗಾಗಿ ರಾಜ್ಯದಲ್ಲಿ ಸಿವಿಲ್ ಆಸ್ಪತ್ರೆಗೆ ಬಂಧನದಲ್ಲಿಟ್ಟ ವ್ಯಕ್ತಿಗಳ ಸ್ಥಳಾಂತರ :** (1) ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಟ್ಟ ಅಪರಾಧಿಯು ಯಾವುದೇ ರೋಗದಿಂದ ನರಳುತ್ತಿದ್ದರೆ ಮತ್ತು ಅವನಿಗೆ ಆ ಶಾಲೆಯಲ್ಲಿ ಯೋಗ್ಯ ವೈದ್ಯಕೀಯ ರಕ್ಷಣೆ ಅಥವಾ ಚಿಕಿತ್ಸೆಯನ್ನು ಕೊಡಲು ಸಾಧ್ಯವಿಲ್ಲವೆಂದು ಇನ್ಸ್‌ಪೆಕ್ಟರ್ ಜನರಲ್‌ಗೆ ಮನದಟ್ಟಾದರೆ ಇನ್ಸ್‌ಪೆಕ್ಟರ್ ಜನರಲ್‌ನು ವೈದ್ಯಕೀಯ ಚಿಕಿತ್ಸೆಯನ್ನು ಪಡೆಯುವ ಉದ್ದೇಶಕ್ಕಾಗಿ ರಾಜ್ಯದಲ್ಲಿನ ಯಾವುದೇ ಸಿವಿಲ್ ಆಸ್ಪತ್ರೆಗೆ ಅಂಥ ಅಪರಾಧಿಯ ಸ್ಥಳಾಂತರಣಕ್ಕಾಗಿ ಮತ್ತು ಅಂಥ ಚಿಕಿತ್ಸೆಯನ್ನು ಪಡೆದ ತರುವಾಯ ಆ ಶಾಲೆಗೆ ಹಿಂದಿರುಗಿಸುವುದಕ್ಕಾಗಿ ವ್ಯವಸ್ಥೆ ಮಾಡಬಹುದು.

(2) ಯಾವ ಅವಧಿಯಲ್ಲಿ ಅಪರಾಧಿಯು (1)ನೇ ಉಪ-ಪ್ರಕರಣದ ಮೇರೆಗೆ ಬೋರ್ಸ್ಟಲ್ ಶಾಲೆಯಿಂದ ಗೈರು ಹಾಜರಾಗಿರುವನೋ ಆ ಅವಧಿಯನ್ನು ಆ ಶಾಲೆಯಲ್ಲಿ ಬಂಧನದ ಅವನ ಅವಧಿಯನ್ನು ಲೆಕ್ಕ ಹಾಕುವ ಅವನ ಉದ್ದೇಶಗಳಿಗಾಗಿ, ಆ ಬಂಧನದ ಭಾಗವೆಂಬುದಾಗಿ ಭಾವಿಸತಕ್ಕದ್ದು.

## ಅಧ್ಯಾಯ – III

## ಲೈಸೆನ್ಸಿನ ಮೇಲೆ ಬಿಡುಗಡೆ

**15. ಲೈಸೆನ್ಸಿನ ಮೇಲೆ ಬಿಡುಗಡೆ ಮಾಡಲು ಅಧಿಕಾರ :–** (1) ನಿಯಮಿಸಿದ ಷರತ್ತುಗಳಿಗೊಳಪಟ್ಟು ಇನ್ಸ್‌ಪೆಕ್ಟರ್ ಜನರಲ್‌ನು ಸಂದರ್ಶಕ ಸಮಿತಿಯ ಶಿಫಾರಸ್ಸಿನ ಮೇಲೆ ಬೋರ್ಸ್ಟಲ್ ಶಾಲೆಯಲ್ಲಿ ಯುವ ಅಪರಾಧಿಯು ಬಂಧನದ ಪ್ರಾರಂಭದಿಂದ ಆರು ತಿಂಗಳುಗಳ ಮುಕ್ತಾಯದ ತರುವಾಯ ಯಾವುದೇ ಕಾಲದಲ್ಲಿ, ಅಪರಾಧಿಯು ಅಪರಾಧವನ್ನು ಮಾಡುವುದಿಲ್ಲವೆಂದು ಮತ್ತು ಉಪಯುಕ್ತ ಮತ್ತು ಉದ್ಯೋಗಶೀಲ ಜೀವನವನ್ನು ನಡೆಸುವ ಯುಕ್ತ ಸಾಧ್ಯತೆಯಿದೆಯೆಂದು ಅವನಿಗೆ ಮನದಟ್ಟಾದರೆ, ಅವನನ್ನು ಬೋರ್ಸ್ಟಲ್ ಶಾಲೆಯಿಂದ ಬಿಡುಗಡೆ ಮಾಡಬಹುದು ಮತ್ತು ಅವನಿಗೆ ನಿಯಮಿಸಿದ ನಮೂನೆಯಲ್ಲಿ ಬರಹದಲ್ಲಿ ಮತ್ತು ನಿಯಮಿಸಿದ ಷರತ್ತುಗಳ ಮೇಲೆ ಇನ್ಸ್‌ಪೆಕ್ಟರ್ ಜನರಲ್‌ನು ಅನುಮೋದಿಸಬಹುದಾದ ಮತ್ತು ಅಪರಾಧಿಯ ಪ್ರಭಾರವನ್ನು ತೆಗೆದುಕೊಳ್ಳಲು ಸಮ್ಮತಿಸುವ.–

(ಕ) ಸರ್ಕಾರದ ಅಧಿಕಾರಿ ;

(ಖ) ಜಾತ್ಯಾತೀತ ಸಂಸ್ಥೆ ;

(ಗ) ಧಾರ್ಮಿಕ ಸಂಘ ಅಥವಾ ;

(ಘ) ಜವಾಬ್ದಾರಿಯುತ ವ್ಯಕ್ತಿ ;

– ಇವರ ಮೇಲ್ವಿಚಾರಣೆ ಮತ್ತು ಅಧಿಕಾರಕ್ಕೊಳಪಟ್ಟು ಜೀವನ ನಡೆಸಲು ಅವನಿಗೆ ಅನುಮತಿಸುವ ಲೈಸೆನ್ಸ್‌ನ್ನು ಬರಹದಲ್ಲಿ ಕೊಡಬಹುದು.

(2) ಇನ್ಸ್‌ಪೆಕ್ಟರ್ ಜನರಲ್‌ನು ನಿಯಮಿಸಿದ ಷರತ್ತುಗಳಿಗೊಳಪಟ್ಟು, ಹಿಂದೆ ಈಗಾಗಲೇ ಲೈಸೆನ್ಸ್‌ನ್ನು ಕೊಟ್ಟಿದ್ದು, ಆದರೆ ಲೈಸೆನ್ಸ್‌ನ್ನು ಆ ತರುವಾಯ 16ನೇ ಪ್ರಕರಣದ ಮೇರೆಗೆ ರದ್ದುಪಡಿಸಲಾಗಿದ್ದ ಯಾವನೇ ಅಪರಾಧಿಯನ್ನು ಬಿಡುಗಡೆ ಮಾಡಬಹುದು ಮತ್ತು ಅವನಿಗೆ ಬರಹದಲ್ಲಿ ಒಂದು ಹೊಸ ಲೈಸೆನ್ಸ್‌ನ್ನು ಕೊಡಬಹುದು ಮತ್ತು ಅಂಥ ಸಂದರ್ಭದಲ್ಲಿ ಈ ಅಧಿನಿಯಮದ ಉಪಬಂಧಗಳು ಅಂಥ ಹೊಸ ಲೈಸೆನ್ಸ್‌ನ್ನು (1)ನೇ ಉಪ–ಪ್ರಕರಣದ ಮೇರೆಗೆ ಮಂಜೂರ್ಮಾಡಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

(3) ಈ ಪ್ರಕರಣದ ಮೇರೆಗಿನ ಲೈಸೆನ್ಸ್ ಅದನ್ನು ಇನ್ನು ಮುಂಚೆ ರದ್ದುಪಡಿಸಿದ ಹೊರತು ಬೋರ್ಸ್ಟಲ್ ಶಾಲೆಯಲ್ಲಿ ಯಾವ ಅವಧಿಗಾಗಿ ಅಪರಾಧಿಯನ್ನು ಬಂಧನದಲ್ಲಿಡಬೇಕೆಂದು ಆದೇಶಿಸಲಾಗಿತ್ತೋ ಆ ಅವಧಿಯ ಮುಕ್ತಾಯದವರೆಗೆ ಜಾರಿಯಲ್ಲಿರತಕ್ಕದ್ದು.

(4) ಯಾವ ಅವಧಿಯಲ್ಲಿ ಅಪರಾಧಿಯು ಈ ಪ್ರಕರಣದ ಮೇರೆಗೆ ಅವನಿಗೆ ಕೊಟ್ಟ ಲೈಸೆನ್ಸಿನ ಮುಂದುವರಿಕೆಯ ಅವಧಿಯಲ್ಲಿ, ಬೋರ್ಸ್ಟಲ್ ಶಾಲೆಯಿಂದ ಗೈರು ಹಾಜರಾಗಿದ್ದನೋ, ಆ ಅವಧಿಯನ್ನು ಅಂಥ ಶಾಲೆಯಲ್ಲಿನ ಅವನ ಬಂಧನದ ಅವಧಿಯನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ ಅಂಥ ಅವಧಿಯ ಭಾಗವೆಂಬುದಾಗಿ ಭಾವಿಸತಕ್ಕದ್ದು.

**16. ಲೈಸೆನ್ಸ್‌ನ್ನು ರದ್ದುಪಡಿಸುವುದು :** (1) ನಿಯಮಿಸಲಾದ ಷರತ್ತುಗಳಿಗೊಳಪಟ್ಟು, ಇನ್ಸ್‌ಪೆಕ್ಟರ್ ಜನರಲ್‌ನು ಯಾವುದೇ ಕಾಲದಲ್ಲಿ 20ನೇ ಪ್ರಕರಣದ ಮೇರೆಗೆ ತನಿಖಾ ಸಮಿತಿಯು ಒಪ್ಪಿಸಿದ ವರದಿಯನ್ನು ಪರಿಶೀಲಿಸಿದ ತರುವಾಯ 15ನೇ ಪ್ರಕರಣದ ಮೇರೆಗೆ ಕೊಟ್ಟ ಲೈಸೆನ್ಸ್‌ನ್ನು ರದ್ದುಗೊಳಿಬಹುದು ಮತ್ತು ಅಪರಾಧಿಯನ್ನು ಯಾವ ಮೇಲ್ವಿಚಾರಣೆ ಮತ್ತು ಅಧಿಕಾರದಲ್ಲಿ ಲೈಸೆನ್ಸಿನ ಮೂಲಕ ಇರಲು ಅನುಮತಿಸಲಾಗಿದೆಯೋ ಆ ಸಂಸ್ಥೆ, ಸಂಘ ಅಥವಾ ವ್ಯಕ್ತಿಯು ಮಾಡಿಕೊಂಡ ಕೋರಿಕೆಯ ಸಂದರ್ಭದಲ್ಲಿ ಅದನ್ನು ರದ್ದುಪಡಿಸತಕ್ಕದ್ದು ಮತ್ತು ಅಂಥ ರದ್ದಿಯಾತಿಯಾದ ಮೇಲೆ ಅಪರಾಧಿಯನ್ನು ಬೋರ್ಸ್ಟಲ್ ಶಾಲೆಯಲ್ಲಿ ಅಂಥ ಶಾಲೆಯಲ್ಲಿ ಬಂಧಿಸಿಡಲು ಆದೇಶ ಮಾಡಲಾಗಿದ್ದಂಥ ಅವಧಿಯು ಮುಗಿಯುವವರೆಗೆ ಬಂಧಿಸಿಡತಕ್ಕದ್ದು:

ಪರಂತು, ತನಿಖಾ ಸಮಿತಿಯು ಅಪರಾಧಿಯ ವರ್ತನೆಯು ಅವನನ್ನು ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡಲು ಆಯೋಗ್ಯನನ್ನಾಗಿಸುವಂಥಾದ್ದು ಆಗಿದೆಯೆಂದು ವರದಿ ಮಾಡಿದರೆ, ಇನ್ಸ್‌ಪೆಕ್ಟರ್

ಜನರಲ್‌ನು ತನಿಖಾ ಸಮಿತಿಯ ವರದಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು.–

(i) ಈ ಉಪ–ಪ್ರಕರಣದಲ್ಲಿ ಉಪಬಂಧಿಸಿದಂತೆ ಲೈಸೆನ್ಸ್‌ನ್ನು ರದ್ದುಪಡಿಸಲು ಇನ್ಸ್‌ಪೆಕ್ಟರ್ ಜನರಲ್‌ನನ್ನು ನಿರ್ದೇಶಿಸಬಹುದು ; ಅಥವಾ

(ii) ತಾನೇ ಆ ಲೈಸನ್ಸ್‌ನ್ನು ರದ್ದು ಪಡಿಸಬಹುದು ಮತ್ತು ಅಪರಾಧಿಯ ಬಂಧನದ ಮುಕ್ತಾಯವಾಗದೆ ಉಳಿದ ಅವಧಿಯನ್ನು 11ನೇ ಪ್ರಕರಣದ ಮೇರೆಗೆ ಉಪಬಂಧಿಸಲಾದ ಕಾರಾವಾಸದ ಅವಧಿಗೆ ತಗ್ಗಿಸಬಹುದು.

(2) ಯಾರ ಅಧೀನದಲ್ಲಿ ಅಪರಾಧಿಯು ಲೈಸೆನ್ಸಿನ ಮೂಲಕ ಇರಲು ಅನುಮತಿಸಲಾಗಿತ್ತೋ ಆ ಯಾವುದೇ ಸಂಸ್ಥೆ, ಸಂಘ ಅಥವಾ ವ್ಯಕ್ತಿಯ ಮೇಲ್ವಿಚಾರಣೆಯಿಂದ ಅವನು ತಾನೇ ಸ್ಥಳಾಂತರಣ ಹೊಂದಿದರೆ ಅವನು ಹಾಗೆ ಸ್ಥಳಾಂತರಣ ಹೊಂದಿದಂಥ ದಿನಾಂಕದಿಂದ ಅವನ ಲೈಸೆನ್ಸ್ ರದ್ದುಪಡಿಸಲಾಗಿರುವುದಾಗಿ ಭಾವಿಸತಕ್ಕದ್ದು.

(3) (2)ನೇ ಉಪ–ಪ್ರಕರಣದ ಮೇರೆಗೆ ಲೈಸೆನ್ಸ್ ರದ್ದಾದ ಮೇಲೆ, ಯಾವ ದಿನಾಂಕದಂದು ಅಪರಾಧಿಯು ತಾನೇ ಸ್ಥಳಾಂತರಣ ಹೊಂದಿದನೋ ಆ ದಿನಾಂಕದಿಂದ ಪ್ರಾರಂಭವಾಗಿ ಅವನನ್ನು ದಸ್ತಗಿರಿ ಮಾಡುವ ದಿನಾಂಕದವರೆಗೆ 18ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಅವನನ್ನು ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡಲು ಆದೇಶಿಸಲಾಗಿದ್ದಂಥ ಅವಧಿಯನ್ನು, ಲೆಕ್ಕ ಹಾಕುವಲ್ಲಿ ಬಿಟ್ಟುಬಿಡತಕ್ಕದ್ದು.

**17. ತರುವಾಯದ ಮೇಲ್ವಿಚಾರಣೆ.–** (1) ಇನ್ಸ್‌ಪೆಕ್ಟರ್ ಜನರಲ್‌ನು ಮತ್ತು ತನಿಖಾ ಸಮಿತಿಯು ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡಲಾದ ಯಾವನೇ ಅಪರಾಧಿಯ ವರ್ತನೆ ಅಥವಾ ಸುಧಾರಣೆಯು ಬಂಧನದ ಅವಧಿಯ ಮುಕ್ತಾಯವಾದ ತರುವಾಯ ಮತ್ತಷ್ಟು ಅವಧಿಗಾಗಿ ಮೇಲ್ವಿಚಾರಣೆಯಲ್ಲಿ ಅವನು ಇರುವುದು ವಿಹಿತವಾಗಿರತಕ್ಕದ್ದು ಆಗಿದೆ ಎಂದು ವರದಿ ಮಾಡಿದಾಗ, ರಾಜ್ಯ ಸರ್ಕಾರವು ಅಪರಾಧಿಯನ್ನು ಅವನ ಬಂಧನದ ಅವಧಿಯು ಮುಗಿದ ತರುವಾಯ ಇನ್ಸ್‌ಪೆಕ್ಟರ್ ಜನರಲ್‌ನು, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಿಗೆ ಒಳಪಟ್ಟು, ನಿರ್ದೇಶಿಸಬಹುದಾದಂಥ ಪ್ರಾಧಿಕಾರ, ಸಂಘ ಅಥವಾ ವ್ಯಕ್ತಿಯ ಮೇಲ್ವಿಚಾರಣೆಯಲ್ಲಿ ಒಂದು ವರ್ಷಕ್ಕೆ ಮೀರದ ಇನ್ನೂ ಹೆಚ್ಚಿನ ಅವಧಿಗಾಗಿ ಇರತಕ್ಕದ್ದೆಂದು ನಿರ್ದೇಶಿಸಬಹುದು.

(2) ರಾಜ್ಯ ಸರ್ಕಾರವು, 20ನೇ ಪ್ರಕರಣದ ಮೇರೆಗೆ ಅದಕ್ಕೆ ಕಳುಹಿಸಿದ ತನಿಖಾ ಸಮಿತಿಯ ವರದಿಯನ್ನು ಪರ್ಯಾಲೋಚಿಸಿದ ತರುವಾಯ ಅಪರಾಧಿಯನ್ನು ವರದಿಯೊಂದಿಗೆ ಜೊತೆಗೆ ಸಕ್ಷಮ ನ್ಯಾಯಾಲಯದ ಮುಂದೆ ಅಪರಾಧಿಯನ್ನು ಹಾಜರುಪಡಿಸಬೇಕೆಂದು ನಿರ್ದೇಶಿಸಬಹುದು ಮತ್ತು ಆ ನ್ಯಾಯಾಲಯವು ವರದಿಯ ನಿಷ್ಪಕ್ಷಪಾತೆಯ ಬಗ್ಗೆ ಸ್ವತಃ ಮನದಟ್ಟು ಮಾಡಿಕೊಂಡ ತರುವಾಯ, (1)ನೇ ಪ್ರಕರಣಕ್ಕೆ ಅನುಸಾರವಾಗಿ ಮೇಲ್ವಿಚಾರಣೆಯಲ್ಲಿರುವ ಅಪರಾಧಿಯನ್ನು.–

(ಕ) ತಾನು ಸೂಕ್ತವೆಂದು ಯೋಚಿಸುವಂಥ ಅವಧಿಗೆ ಬೊರ್ಸ್ಟಲ್ ಶಾಲೆಯಲ್ಲಿ ಪುನಃ ಬಂಧನದಲ್ಲಿಡತಕ್ಕದ್ದೆಂದು ; ಅಥವಾ

(ಖ) ನ್ಯಾಯಾಲಯಕ್ಕೆ ಅಪರಾಧಿಯ ವರ್ತನೆಯು ಅವನನ್ನು ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡಲು ಆಯೋಗ್ಯವಾಗಿದೆಯೆಂದು ಮನದಟ್ಟಾದರೆ ಅದು ನಿರ್ದೇಶಿಸಬಹುದಾದಂಥ ವಿವರಣೆಯ ಕಾರಾವಾಸವನ್ನು ಅಂಥ ಅವಧಿಗಾಗಿ ಅನುಭವಿಸತಕ್ಕದ್ದೆಂದು ನಿರ್ದೇಶಿಸಬಹುದು:

ಪರಂತು, ಈ ಪ್ರಕರಣದ ಮೇರೆಗಿನ ಮೇಲ್ವಿಚಾರಣೆ, ಬಂಧನ ಮತ್ತು ಕಾರಾವಾಸದ ಒಟ್ಟು ಅವಧಿಯು ಒಂದು ವರ್ಷವನ್ನು ಮೀರತಕ್ಕದ್ದಲ್ಲ.

**18. ಬಂಧನದ ಅವಧಿ.–** ಯಾವನೇ ವ್ಯಕ್ತಿಯನ್ನು, ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ; ಅವನಿಗೆ ಇಪ್ಪತ್ಮೂರು ವರ್ಷಗಳ ವಯಸ್ಸು, ತುಂಬಿದ ತರುವಾಯ ಅಥವಾ ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ರಾಜ್ಯ ಸರ್ಕಾರವು ಹಾಗೆ ನಿರ್ದೇಶಿಸಿದರೆ ಅವನಿಗೆ ಇಪ್ಪತ್ತೈದು ವರ್ಷಗಳ ವಯಸ್ಸು ತುಂಬಿದ ತರುವಾಯ ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡತಕ್ಕದ್ದಲ್ಲ.

**19. ಬೋರ್ಸ್ಟಲ್ ಶಾಲೆಯಿಂದ ವಿಮೋಚನೆ.–** ರಾಜ್ಯ ಸರ್ಕಾರವು ಯಾವುದೇ ಕಾಲದಲ್ಲಿ ಬೋರ್ಸ್ಟಲ್ ಶಾಲೆಯಲ್ಲಿ ಬಂಧಿಸಿಟ್ಟ ಯಾವನೇ ವ್ಯಕ್ತಿಯನ್ನು ಅಂಥ ಶಾಲೆಯಿಂದ ನಿರುಪಾಧಿಕವಾಗಿಯಾಗಲಿ ಅಥವಾ ವಿಧಿಸಲು ಅದು ಸೂಕ್ತವೆಂದು ಭಾವಿಸುವಂಥ ಷರತ್ತಿನ ಮೇಲೆ ವಿಮೋಚನೆಗೊಳಿಸುವಂತೆ ಆದೇಶಿಸಬಹುದು.

**20. ಪರಿವೀಕ್ಷಣೆ ಮೇಲೆ ವಿಮೋಚನೆಗೊಳಿಸಿದ ಅಪರಾಧಿಗಳ ವಿರುದ್ಧ ಮಾಡಿದ ದೂರುಗಳ ಬಗ್ಗೆ ತನಿಖಾ ಸಮಿತಿಯು ತನಿಖೆ ನಡೆಸತಕ್ಕದ್ದು ಇತ್ಯಾದಿ.–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ತನಿಖಾ ಸಮಿತಿಯನ್ನು ನೇಮಕ ಮಾಡಬಹುದು.

(2) ಇನ್ಸ್‌ಪೆಕ್ಟರ್ ಜನರಲ್‌ನು, ಬರಹದಲ್ಲಿನ ಆದೇಶದ ಮೂಲಕ.–

(ಕ) 15ನೇ ಪ್ರಕರಣದ ಮೇರೆಗೆ ಲೈಸೆನ್ಸಿನ ಮೇಲೆ ವಿಮೋಚನೆ ಮಾಡಲಾದ ಅಥವಾ 17ನೇ ಪ್ರಕರಣದ ಮೇರೆಗೆ ಮೇಲ್ವಿಚಾರಣೆಯಲ್ಲಿಟ್ಟಿರುವ ಮತ್ತು ಅವನನ್ನು ಯಾರ ಮೇಲ್ವಿಚಾರಣೆಯಲ್ಲಿ ಇರಲು ಅನುಮತಿಸಲಾಗಿದೆಯೋ ಅಥವಾ ಉಳಿಯಲು ನಿರ್ದೇಶಿಸಲಾಗಿದೆಯೋ, ಆ ಪ್ರಾಧಿಕಾರಿ, ಸಂಸ್ಥೆ, ಸಂಘ ಅಥವಾ ವ್ಯಕ್ತಿಯು ಅವನು ದುರ್ವರ್ತನೆಯುಳ್ಳವನೆಂದು ವರದಿ ಮಾಡಿರುವ ; ಅಥವಾ

(ಖ) 15ನೇ ಪ್ರಕರಣದ ಮೇರೆಗೆ ಮಂಜೂರ್ಮಾಡಿದ ಲೈಸೆನ್ಸ್‌ನ ಯಾವುದೇ ಷರತ್ತನ್ನು ಉಲ್ಲಂಘಿಸಿರುವ ಯಾವನೇ ಅಪರಾಧಿಯನ್ನು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ಸ್ಥಳದಲ್ಲಿ ತನಿಖಾ ಸಮಿತಿಯ ಮುಂದೆ ಹಾಜರಾಗಲು ಅಗತ್ಯಪಡಿಸಬಹುದು.

(3) ತನಿಖಾ ಸಮಿತಿಯು ಅಪರಾಧಿಯನ್ನು ಪರೀಕ್ಷಿಸತಕ್ಕದ್ದು ಮತ್ತು ಅದು ಅವನ ವರ್ತನೆಯ ಬಗ್ಗೆ ಅದು ಸೂಕ್ತವೆಂದು ಯೋಚಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ ಇನ್ಸ್‌ಪೆಕ್ಟರ್

ಜನರಲ್‌ನಿಗೆ ಅದರ ವರದಿಯನ್ನು ಒಪ್ಪಿಸತಕ್ಕದ್ದು. ತನಿಖಾ ಸಮಿತಿಯು ಅಂಥ ಅಪರಾಧಿಯ ವರ್ತನೆಯು ಅವನು ಬೋರ್ಸ್ಟಲ್ ಶಾಲೆಯಲ್ಲಿ ಮತ್ತಷ್ಟು ಬಂಧನದಲ್ಲಿಡಲು ತಕ್ಕದಾಗಿಲ್ಲವೆಂದು ವರದಿ ಮಾಡಿದರೆ ಮತ್ತು ಒಬ್ಬ ಅಪರಾಧಿಯನ್ನು, 17ನೇ ಪ್ರಕರಣದ ಮೇರೆಗೆ ಅಪರಾಧಿಯನ್ನು ಮೇಲ್ವಿಚಾರಣೆಯಲ್ಲಿರಲು ನಿರ್ದೇಶಿಸಲಾಗಿರುವ ಪ್ರತಿಯೊಂದು ಪ್ರಕರಣದಲ್ಲಿ, ಇನ್ಸ್‌ಪೆಕ್ಟರ್ ಜನರಲ್‌ನು ರಾಜ್ಯ ಸರ್ಕಾರಕ್ಕೆ ತನಿಖಾ ಸಮಿತಿಯ ವರದಿಯ ಪ್ರತಿಯನ್ನು ಕಳುಹಿಸತಕ್ಕದ್ದು.

(4) ಅಪರಾಧಿಯನ್ನು, ಈ ಪ್ರಕರಣದ ಮೇರೆಗಿನ ವ್ಯವಹರಣೆಗಳ ಅವಧಿಯಲ್ಲಿ, ಬೋರ್ಸ್ಟಲ್ ಶಾಲೆಯಲ್ಲಿ ಅಥವಾ ಇನ್ಸ್‌ಪೆಕ್ಟರ್ ಜನರಲ್‌ನು; ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದೇಶಿಸಬಹುದಾದಂಥ ಬಂದೀಖಾನೆಯ ವಿಶೇಷ ವಾರ್ಡಿನಲ್ಲಿ ಅಥವಾ ಅದರ ಇತರ ಸೂಕ್ತ ಭಾಗದಲ್ಲಿ ಬಂಧನದಲ್ಲಿಡತಕ್ಕದ್ದು.

(5) ಅಪರಾಧಿಯು (2)ನೇ ಉಪ–ಪ್ರಕರಣದ ಮೇರೆಗೆ ಮಾಡಿದ ಆದೇಶದ ಅನುಸಾರವಾಗಿ ತನಿಖಾ ಸಮಿತಿಯ ಮುಂದೆ ಹಾಜರಾಗಲು ತಪ್ಪಿದರೆ ಅಥವಾ (4)ನೇ ಉಪ–ಪ್ರಕರಣದ ಮೇರೆಗೆ ಬಂಧನದಲ್ಲಿರುವಾಗ ತಪ್ಪಿಸಿಕೊಂಡು ಹೋದರೆ ಅವನನ್ನು ಇನ್ಸ್‌ಪೆಕ್ಟರ್ ಜನರಲ್‌ನ ಅಥವಾ ಅವನು ಈ ಬಗ್ಗೆ ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯ ಕೋರಿಕೆಯ ಮೇರೆಗೆ, ವಾರಂಟಿಲ್ಲದೆ ಮತ್ತು ಮ್ಯಾಜಿಸ್ಟ್ರೇಟನ ಯಾವುದೇ ಆದೇಶವಿಲ್ಲದೆ ಯಾವನೇ ಪೊಲೀಸ್ ಅಧಿಕಾರಿಯ ಮೂಲಕ ದಸ್ತಗಿರಿ ಮಾಡಬಹುದು, ಸಂದರ್ಭಾನುಸಾರ ತನಿಖಾ ಸಮಿತಿಯ ಮುಂದೆ ಹಾಜರುಪಡಿಸಬಹುದು ಅಥವಾ (4)ನೇ ಉಪ–ಪ್ರಕರಣದ ಮೇರೆಗೆ ಬಂಧನದ ಅಭಿರಕ್ಷೆಯಲ್ಲಿ ಕಳುಹಿಸಬಹುದು.

(6) (2)ನೇ ಉಪ–ಪ್ರಕರಣದ ಮೇರೆಗೆ ಇನ್ಸ್‌ಪೆಕ್ಟರ್ ಜನರಲ್‌ನು ಮಾಡಿದಂಥ ಆದೇಶದ ದಿನಾಂಕದಿಂದ ಪ್ರಾರಂಭವಾಗುವ ಮತ್ತು 16ನೇ ಪ್ರಕರಣ ಅಥವಾ 17ನೇ ಪ್ರಕರಣದ ಮೇರೆಗೆ ಆದೇಶವನ್ನು ಮಾಡಿದಂಥ ದಿವಸದಂದು ಕೊನೆಗೊಳ್ಳುವ ಅವಧಿಯನ್ನು ಬೋರ್ಸ್ಟಲ್ ಶಾಲೆಯಲ್ಲಿನ ಅವನ ಬಂಧನದ ಒಟ್ಟು ಅವಧಿಯನ್ನು ಲೆಕ್ಕಹಾಕುವಲ್ಲಿ ಅಥವಾ 17ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಒಂದು ವರ್ಷದ ಅವಧಿಯನ್ನು ಲೆಕ್ಕ ಹಾಕುವಲ್ಲಿ ಹೊರತುಪಡಿಸತಕ್ಕದ್ದು.

**21. ಬೋರ್ಸ್ಟಲ್ ಶಾಲೆಯಿಂದ ತಪ್ಪಿಸಿಕೊಳ್ಳುವ ಅಥವಾ ಮೇಲ್ವಿಚಾರಣೆಯಿಂದ ತಪ್ಪಿಸಿಕೊಳ್ಳುವ ಅಪರಾಧಿಯ ದಸ್ತಗಿರಿ:** ಯಾವನೇ ಅಪರಾಧಿಯು, ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಯಲ್ಲಿ ಬೋರ್ಸ್ಟಲ್ ಶಾಲೆಯಿಂದ ತಪ್ಪಿಸಿಕೊಂಡಿರುವ ಅಥವಾ 14ನೇ ಪ್ರಕರಣದ ಮೇರೆಗೆ ಚಿಕಿತ್ಸೆಗಾಗಿ ಅವನನ್ನು ಸ್ಥಳಾಂತರಿಸಲಾರದಂಥ ಸಿವಿಲ್ ಆಸ್ಪತ್ರೆಯಿಂದ ತಪ್ಪಿಸಿಕೊಂಡಿರುವ ಅಥವಾ 15ನೇ ಪ್ರಕರಣದ ಮೇರೆಗೆ ಲೈಸೆನ್ಸಿನ ಮೂಲಕ ಯಾರ ಮೇಲ್ವಿಚಾರಣೆಯಲ್ಲಿ ಉಳಿಯಲು ಅವನನ್ನು ನಿರ್ದೇಶಿಸಲಾಗಿದೆಯೋ ಅಥವಾ ಇರಲು ಅನುಮತಿಸಲಾಗಿದೆಯೋ ಆ ಯಾವನೇ ಪ್ರಾಧಿಕಾರಿ, ಸಂಸ್ಥೆ, ಸಂಘ ಅಥವಾ ವ್ಯಕ್ತಿಯ ಮೇಲ್ವಿಚಾರಣೆಯಿಂದ ತಪ್ಪಿಸಿಕೊಂಡಿರುವ ಅಥವಾ 19ನೇ ಪ್ರಕರಣದ ಮೇರೆಗೆ ವಿಧಿಸಿದ ಯಾವುದೇ ಷರತ್ತನ್ನು ಉಲ್ಲಂಘನೆ ಮಾಡಿರುವ ಯಾವನೇ ಅಪರಾಧಿಯನ್ನು ವಾರಂಟಿಲ್ಲದೆ ಮತ್ತು ಮ್ಯಾಜಿಸ್ಟ್ರೇಟನ ಆದೇಶವಿಲ್ಲದೆ ಯಾವನೇ ಪೊಲೀಸ್ ಅಧಿಕಾರಿಯು ದಸ್ತಗಿರಿ ಮಾಡಬಹುದು. ಬೋರ್ಸ್ಟಲ್ ಶಾಲೆಗೆ

ಅಥವಾ ಸಿವಿಲ್ ಆಸ್ಪತ್ರೆಗೆ ಮತ್ತು ಸಂದರ್ಭಾನುಸಾರ ಅಂಥ ಪ್ರಾಧಿಕಾರಿ, ಸಂಸ್ಥೆ, ಸಂಘ ಅಥವಾ ವ್ಯಕ್ತಿ ಬಳಿ ಕಳುಹಿಸಬಹುದು.

## ಅಧ್ಯಾಯ – IV
## ಬೋರ್ಸ್ಟಲ್ ಶಾಲೆಗಳ ನಿಯಂತ್ರಣ ಮತ್ತು ವ್ಯವಸ್ಥಾಪನೆ

**22. ಬೋರ್ಸ್ಟಲ್ ಶಾಲೆಗಳ ವ್ಯವಸ್ಥಾಪನೆ.–** (1) ಇನ್ಸ್‌ಪೆಕ್ಟರ್ ಜನರಲ್‌ನ ಸಾಮಾನ್ಯ ನಿಯಂತ್ರಣ ಮತ್ತು ಅಧೀಕ್ಷಣೆಗೆ ಒಳಪಟ್ಟು ಮತ್ತು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಿಗೆ ಒಳಪಟ್ಟು, ಪ್ರತಿಯೊಂದು ಬೋರ್ಸ್ಟಲ್ ಶಾಲೆಯ ನಿಯಂತ್ರಣ ಮತ್ತು ವ್ಯವಸ್ಥಾಪನೆಯು ರಾಜ್ಯ ಸರ್ಕಾರವು ನೇಮಕ ಮಾಡಿದ ಸೂಪರಿಂಟೆಂಡೆಂಟ್‌ನಲ್ಲಿ ನಿಹಿತವಾಗಿರತಕ್ಕದ್ದು.

**23. ಸಂದರ್ಶಕ ಸಮಿತಿಗಳ ರಚನೆ, ಅಧಿಕಾರಗಳು ಮತ್ತು ಕರ್ತವ್ಯಗಳು.–** (1) (3)ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ನೇಮಕಗೊಂಡ ಪ್ರತಿಯೊಂದು ಸಂದರ್ಶಕ ಸಮಿತಿಯು, ಯಾರ ಅನುಕ್ರಮ ಅಧಿಕಾರ ವ್ಯಾಪ್ತಿಯಲ್ಲಿ ಬೋರ್ಸ್ಟಲ್ ಶಾಲೆಯು ಇರುವುದೋ ಆ ಸೆಷನ್ಸ್ ನ್ಯಾಯಾಧೀಶ, ಜಿಲ್ಲಾ ಮ್ಯಾಜಿಸ್ಟ್ರೇಟ್, ಜಿಲ್ಲಾ ಶಿಕ್ಷಣ ಅಧಿಕಾರಿ ಮತ್ತು ರಾಜ್ಯ ಸರ್ಕಾರವು ನೇಮಕ ಮಾಡಿದ ನಾಲ್ವರು ಅಧಿಕಾರೇತರ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(2) ಅಧಿಕಾರೇತರ ಸದಸ್ಯರು ಎರಡು ವರ್ಷಗಳ ಅವಧಿಗೆ ಪದಧಾರಣ ಮಾಡತಕ್ಕದ್ದು ಆದರೆ ಅಂಥ ಅವಧಿಯು ಮುಕ್ತಾಯವಾದ ಮೇಲೆ ಮರುನೇಮಕಾತಿಗಾಗಿ ಅರ್ಹರಾಗಿರತಕ್ಕದ್ದು.

(3) (ಕ) ನಿಯಮಿಸಬಹುದಾದಂಥ ಸಂದರ್ಭಗಳಲ್ಲಿ ವೈಯಕ್ತಿಕವಾಗಿಯಾಗಲೀ ಅಥವಾ ಸಾಮೂಹಿಕವಾಗಿಯಾಗಲಿ ಬೋರ್ಸ್ಟಲ್ ಶಾಲೆಗೆ ಸಂದರ್ಶನ ಕೊಡುವುದು ;

(ಖ) ಅದರಲ್ಲಿನ ತರಬೇತಿಯ ಸುಧಾರಣೆಗಾಗಿ ಅದು ಅವಶ್ಯವೆಂದು ಪರ್ಯಾಲೋಚಿಸುವಂಥ ಸೂಚನೆಗಳನ್ನು ಕೊಡುವುದು ಮತ್ತು ಕಾಲಕಾಲಕ್ಕೆ ರಾಜ್ಯ ಸರ್ಕಾರಕ್ಕ ಅಥವಾ ಇನ್ಸ್‌ಪೆಕ್ಟರ್ ಜನರಲ್‌ನಿಗೆ, ಅವರ ಅಭಿಪ್ರಾಯದಲ್ಲಿ, ಅವರ ಗಮನಕ್ಕೆ ತರಬೇಕಾದಂಥ ಯಾವುದೇ ವಿಷಯದ ಬಗ್ಗೆ ಮತ್ತು ವಾರ್ಷಿಕವಾಗಿ ಆ ಶಾಲೆಯ ಪ್ರಗತಿಯ ಬಗ್ಗೆ ವರದಿ ಮಾಡುವುದು.

(ಗ) ನಿವಾಸಿಗಳನ್ನು, ಅವರು ಬಂದ ತರುವಾಯ ಕೂಡಲೇ ಸಂದರ್ಶಿಸುವುದು ಮತ್ತು ಪ್ರತಿಯೊಬ್ಬರೂ ಪಡೆಯಬೇಕಾದಂಥ ವಿಶೇಷ ತರಬೇತಿಯ ಬಗ್ಗೆ ಸೂಚನೆಗಳು ಯಾವುದಾದರೂ ಇದ್ದರೆ ಅವುಗಳನ್ನು ಕೊಡುವುದು ;

(ಘ) ಸೂಪರಿಂಟೆಂಡೆಂಟನು, ಅವರ ಮುಂದೆ ಇಟ್ಟ 15ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಲೈಸೆನ್ಸಿನ ಮೇಲೆ ಬಿಡುಗಡೆ ಮಾಡುವ ಪ್ರಕರಣಗಳನ್ನು ಪರ್ಯಾಲೋಚಿಸುವುದು ;

(ಙ) ಯಾವ ನಿವಾಸಿಗಳ ನಿಯಂತ್ರಣ ಮತ್ತು ಬಂಧನವು ಇನ್ನೇನು ಮುಕ್ತಾಯವಾಗುವುದೋ ಆ ನಿವಾಸಿಗಳ ಬಗ್ಗೆ ಅವಶ್ಯಕವಾಗಬಹುದಾದಂಥ ಕ್ರಮವನ್ನು ಪರ್ಯಾಲೋಚಿಸುವುದು ;

– ಸಂದರ್ಶಕ ಸಮಿತಿ ಮತ್ತು ಅದರ ಸದಸ್ಯರ ಕರ್ತವ್ಯವಾಗಿರತಕ್ಕದ್ದು.

(4) ಸಂದರ್ಶಕ ಸಮಿತಿಯ ಪ್ರತಿಯೊಬ್ಬ ಸದಸ್ಯರು ಈ ಅಧಿನಿಯಮದ ಮೇರೆಗೆ ಈ ಬಗ್ಗೆ ರಚಿಸಿದ ನಿಯಮಗಳಿಗೆ ಒಳಪಟ್ಟು ಬೋರ್ಸ್ಟ್‌ಲ್ ಸೂಪರಿಂಟೆಂಡೆಂಟ್‌ನಿಂದ ಮಾಹಿತಿಯನ್ನು ಕೇಳಲು ಬೋರ್ಸ್ಟ್‌ಲ್ ಶಾಲೆಯ ದಾಖಲೆಗಳನ್ನು ಪರೀಕ್ಷಿಸಲು ಮತ್ತು ಅವನ ಕರ್ತವ್ಯಗಳ ಯುಕ್ತ ನಿರ್ವಹಣೆಗಾಗಿ ಅವನು ಅವಶ್ಯವೆಂದು ಭಾವಿಸುವಂಥ ಕ್ರಮವನ್ನು ಕೈಗೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

**24. ನಿವಾಸಿಗಳ ವರ್ಗೀಕರಣ.–** (1) ಬೋರ್ಸ್ಟ್‌ಲ್ ಶಾಲೆಯ ನಿವಾಸಿಗಳನ್ನು ಸೂಪರಿಂಟೆಂಡೆಂಟನು, ಅವನು ಉದ್ಯೋಗಶೀಲತೆ ಮತ್ತು ಒಳ್ಳೆಯ ನಡತೆಗನುಸಾರವಾಗಿ ನಾಲ್ಕು ಗ್ರೇಡುಗಳಾಗಿ ವಿಭಾಗಿಸತಕ್ಕದ್ದು, ಎಂದರೆ ;–

(ಕ) ದಂಡನೆಯ ಗ್ರೇಡು

(ಖ) ಸಾಮಾನ್ಯ ಗ್ರೇಡು

(ಗ) ತಾರಾ ಗ್ರೇಡು ಮತ್ತು

(ಘ) ವಿಶೇಷ ತಾರಾ ಗ್ರೇಡು

(2) ಪ್ರತಿಯೊಂದು ಗ್ರೇಡಿನ ವಿಶೇಷ ಹಕ್ಕುಗಳು ಯಾವುದೇ ಹಿಂದಿನ ಗ್ರೇಡು ಯಾವುದಾದರೂ ಇದ್ದರೆ ಅವುಗಳಿಗಿಂತ ಹೆಚ್ಚಿನದಾಗಿರತಕ್ಕದ್ದು.

(3) ಪ್ರತಿಯೊಬ್ಬ ನಿವಾಸಿಯನ್ನು, ಬೋರ್ಸ್ಟ್‌ಲ್ ಶಾಲೆಯಲ್ಲಿ ಸ್ವೀಕರಿಸಿದ ಮೇಲೆ ಅವನನ್ನು ಸಾಮಾನ್ಯ ಗ್ರೇಡಿನಲ್ಲಿಡತಕ್ಕದ್ದು.

(4) ಸಂದರ್ಶನ ಸಮಿತಿಯ ಸಾಮಾನ್ಯ ಅನುದೇಶಗಳಿಗೆ ಒಳಪಟ್ಟು ಸೂಪರಿಂಟೆಂಡೆಂಟನ್ನು (5)ನೇ ಉಪ–ಪ್ರಕರಣದ ಮತ್ತು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳು ಯಾವುದಾದರೂ ಇದ್ದರೆ, ಅವುಗಳ ಉಪಬಂಧಗಳಿಗನುಸಾರವಾಗಿ ಯಾವನೇ ನಿವಾಸಿಯನ್ನು ಒಂದು ಗ್ರೇಡಿನಿಂದ ಇನ್ನೊಂದಕ್ಕೆ ಬಡ್ತಿ ಕೊಡಬಹುದು ಅಥವಾ ಇಳಿಸಬಹುದು.

(5) ಬಡ್ತಿಗಳು ಮತ್ತು ಇಳಿಸುವಿಕೆಗಳನ್ನು ನಿವಾಸಿಗಳ ನಿಕಟ ವೈಯಕ್ತಿಕ ಪರಿವೀಕ್ಷಣೆಯ ಮೂಲಕ ನಿಯಂತ್ರಿಸತಕ್ಕದ್ದು ಮತ್ತು ಅವು ವಿಶೇಷವಾಗಿ ಅವರ ಸಾಮಾನ್ಯ ನಡವಳಿಕೆ, ಶಿಸ್ತು ಮತ್ತು ಲಕ್ಷ್ಯ ಶಿಕ್ಷಣಕ್ಕೆ, ಸಾಹಿತ್ಯಿಕ ಮತ್ತು ಔದ್ಯಮಿಕ ಇವೆರಡೂ ಒಳಪಡುವುದರ ಮೇಲೆ ಅವಲಂಬಿತವಾಗಿರತಕ್ಕದ್ದು.

**25, ಅಪರಾಧಗಳಿಗಾಗಿ ದಂಡನೆ :–** (1) ಕರ್ನಾಟಕ ಬಂದೀಖಾನೆಗಳ ಅಧಿನಿಯಮ, 1963 ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳಿಗಾಗಿ ಬೋರ್ಸ್ಟ್‌ಲ್ ಶಾಲೆಯ ನಿವಾಸಿಗೆ ವಿಧಿಸಬಹುದಾದಂಥ ದಂಡನೆಗಳು ಈ ಕೆಳಕಂಡ ರೂಪಗಳಲ್ಲಿರತಕ್ಕದ್ದು ಮತ್ತು ಯಾವುದೇ ಇತರ ರೀತಿಯಲ್ಲಿರತಕ್ಕದ್ದಲ್ಲ.

(i) ವಿಧ್ಯುಕ್ತ ಎಚ್ಚರಿಕೆ;

(ii) ಹೆಚ್ಚಿನ ಕವಾಯತು ;

(iii) ಆ ಗ್ರೇಡಿನ ಯಾವುದೇ ವಿಶೇಷ ಹಕ್ಕುಗಳನ್ನು ಕಸಿದುಕೊಳ್ಳುವುದು ;

(iv) ಗ್ರೇಡನ್ನು ಇಳಿಸುವುದು ;

(2) ಯಾವುದೇ ದಂಡನೆಯನ್ನು ಯಾವನೇ ನಿವಾಸಿಗೆ ಸೂಪರಿಂಟೆಂಡೆಂಟನು ಅಥವಾ ಅವನ ಗೈರುಹಾಜರಿಯಲ್ಲಿ ಸೂಪರಿಂಟೆಂಡೆಂಟನ ಪ್ರಕಾರ್ಯಗಳನ್ನು ಚಲಾಯಿಸುತ್ತಿರುವ ಅಧಿಕಾರಿ ಅಲ್ಲದೆ ಬೋರ್ಸ್ಟಲ್ ಶಾಲೆಯ ಅಧಿಕಾರಿಯು ವಿಧಿಸತಕ್ಕದ್ದಲ್ಲ.

**26. ನಿಷೇಧಿತ ವಸ್ತುಗಳನ್ನು ತರುವುದು ಅಥವಾ ಸ್ಥಳಾಂತರಿಸುವುದಕ್ಕಾಗಿ ದಂಡ.–** (1) ಯಾರೇ ಆಗಲಿ, ಈ ಅಧಿನಿಯಮದ ಮೇರೆಗಿನ ಯಾವುದೇ ನಿಯಮಕ್ಕೆ ತದ್ವಿರುದ್ಧವಾಗಿ ಯಾವುದೇ ನಿಷೇಧಿತ ವಸ್ತುವನ್ನು.–

(ಕ) ಯಾವುದೇ ಬೋರ್ಸ್ಟಲ್ ಶಾಲೆಗೆ ತಂದರೆ ಅಥವಾ ಅಲ್ಲಿಂದ ಸ್ಥಳಾಂತರಿಸಿದರೆ ಅಥವಾ ಯಾವುದೇ ರೀತಿಯಲ್ಲಾಗಲಿ ಅದರೊಳಕ್ಕೆ ತರಲು ಅಥವಾ ಅದರಿಂದ ಸ್ಥಳಾಂತರಿಸಲು ಪ್ರಯತ್ನಿಸಿದರೆ, ಅಥವಾ

(ಖ) ಅಂಥ ಶಾಲೆಯ ಪರಿಮಿತಿಗಳ ಹೊರಗೆ ಯಾವನೇ ನಿವಾಸಿಗೆ ಸರಬರಾಜು ಮಾಡಿದರೆ ಅಥವಾ ಸರಬರಾಜು ಮಾಡಲು ಪ್ರಯತ್ನಿಸಿದರೆ ; ಅಥವಾ

(ಗ) ಬೋರ್ಸ್ಟಲ್ ಶಾಲೆಯ ಅಧಿಕಾರಿಯಾಗಿದ್ದು ತಿಳಿದೂ ತಿಳಿದೂ ಯಾವನೇ ನಿವಾಸಿಯು ಸ್ವಾಧೀನ ಹೊಂದಲು ಅಥವಾ ಬೋರ್ಸ್ಟಲ್ ಶಾಲೆಯ ಪರಿಮಿತಿಗಳ ಹೊರಗೆ ಯಾವನೇ ನಿವಾಸಿಗೆ ಸರಬರಾಜು ಮಾಡಲು ಯಾವುದೇ ಬೋರ್ಸ್ಟಲ್ ಶಾಲೆಗೆ ಯಾವುದೇ ಅಂಥ ವಸ್ತುವನ್ನು ತರಲು ಅಥವಾ ಅದರಿಂದ ಸ್ಥಳಾಂತರಿಸಲು ಅವಕಾಶ ಮಾಡಿಕೊಟ್ಟರೆ, ಅಥವಾ

(ಘ) ಯಾವನೇ ನಿವಾಸಿಯೊಂದಿಗೆ ಸಂಪರ್ಕ ಹೊಂದಿದರೆ ಅಥವಾ ಸಂಪರ್ಕ ಹೊಂದಲು ಪ್ರಯತ್ನಿಸಿದರೆ ಅವನು ಅಪರಾಧಿಯೆಂದು ನಿರ್ಣೀತನಾದ ಮೇಲೆ, ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಯಾರೇ ಅಗಲಿ (1)ನೇ ಉಪ–ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ದುಷ್ಪ್ರೇರಿಸಿದರೆ ಅವನು ಅಪರಾಧಿಯೆಂದು ನಿರ್ಣೀತನಾದ ಮೇಲೆ ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಎರಡು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**27. ಕೆಲಸದ ವೇಳೆಗಳ ಪರಿಮಿತಿ.–** ಬೋರ್ಸ್ಟಲ್ ಶಾಲೆಯ ಯಾವನೇ ನಿವಾಸಿಯನ್ನು ಒಂದು ದಿವಸಕ್ಕೆ ಎಂಟು ಗಂಟೆಗಳಿಗಿಂತ ಹೆಚ್ಚಾಗಿ ಕೆಲಸ ಮಾಡುವಂತೆ ಮಾಡತಕ್ಕದ್ದಲ್ಲ ;

ಪರಂತು, 25ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ದಂಡನೆಯಾಗಿ ವಿಧಿಸಿದ ಹೆಚ್ಚಿನ ಕವಾಯತನ್ನು ಈ ಪ್ರಕರಣದ ಉದ್ದೇಶಕ್ಕಾಗಿ ಕೆಲಸವೆಂಬುದಾಗಿ ಭಾವಿಸತಕ್ಕದ್ದಲ್ಲ.

## ಅಧ್ಯಾಯ – V

## ಸಂಕೀರ್ಣ

**28. ಅಪೀಲುಗಳು ಮತ್ತು ಪುನರೀಕ್ಷಣೆ.–** (1) ಸಂಹಿತೆಯ ಮೇರೆಗೆ ಅಪೀಲು ಮತ್ತು ಪುನರೀಕ್ಷಣೆಯ ಉದ್ದೇಶಗಳಿಗಾಗಿ, ಈ ಅಧಿನಿಯಮದ 5ನೇ ಪ್ರಕರಣದ ಮೇರೆಗೆ ಬಂಧನದ ಆದೇಶವನ್ನು, ಅದೇ ಅವಧಿಗಾಗಿ ಕಾರಾವಾಸದ ಶಿಕ್ಷೆಯೆಂಬುದಾಗಿ ಭಾವಿಸತಕ್ಕದ್ದು.

(2) ಈ ಅಧಿನಿಯಮದ ಯಾವುದೇ ಉಪಬಂಧದ ಮೇರೆಗೆ ಇನ್ಸ್‌ಪೆಕ್ಟರ್ ಜನರಲ್‌ನ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ನಿಯಮಿಸಿದ ಷರತ್ತುಗಳಿಗೆ ಒಳಪಟ್ಟು ರಾಜ್ಯ ಸರ್ಕಾರಕ್ಕೆ ಅಪೀಲನ್ನು ಮಾಡಿಕೊಳ್ಳಬಹುದು ಮತ್ತು ಅಂಥ ಅಪೀಲಿನಲ್ಲಿ ರಾಜ್ಯ ಸರ್ಕಾರದ ಆದೇಶಗಳು ಅಂತಿಮವಾಗಿರತಕ್ಕದ್ದು.

**29. ಅನರ್ಹತೆಗಳನ್ನು ತೆಗೆದುಹಾಕುವುದು :** ರಾಜ್ಯ ಸರ್ಕಾರವು ಇನ್ಸ್‌ಪೆಕ್ಟರ್ ಜನರಲ್ ಮತ್ತು ಸಂದರ್ಶಕ ಸಮಿತಿಯ ಅಥವಾ ಅನ್ಯಥಾ ಶಿಫಾರಸ್ಸಿನ ಮೇಲೆ ಅಥವಾ ಅನ್ಯಥಾ ಅಂಥ ಬಂಧನದ ಕಾರಣದಿಂದಾಗಿ ಬೋರ್ಸ್ಟ್‌ಲ್ ಶಾಲೆಯಲ್ಲಿ ಬಂಧನದಲ್ಲಿಡಬೇಕೆಂದು ಆದೇಶಿಸಿದ ಅಪರಾಧಿಯು ಅನುಭವಿಸಿದ ಯಾವುದೇ ಅನರ್ಹತೆಯನ್ನು ತೆಗೆದುಹಾಕಬಹುದು.

**30. ವಯಸ್ಸಿನ ಬಗ್ಗೆ ಪೂರ್ವಭಾವನೆ ಮತ್ತು ಅದರ ನಿರ್ಧಾರಣೆ.–** (1) ಸಕ್ಷಮ ನ್ಯಾಯಾಲಯಕ್ಕೆ ಈ ಅಧಿನಿಯಮದ ಯಾವುದೇ ಉಪಬಂಧದ ಮೇರೆಗೆ ಅದರ ಮುಂದೆ ತರಲಾದ ವ್ಯಕ್ತಿಯು ಯುವ ಅಪರಾಧಿಯಾಗಿದ್ದಾನೆಂದು ಕಂಡುಬಂದಲ್ಲಿ ಅಂಥ ನ್ಯಾಯಾಲಯವು ಆ ವ್ಯಕ್ತಿಯ ವಯಸ್ಸಿನ ಬಗ್ಗೆ ಯುಕ್ತ ವಿಚಾರಣೆಯನ್ನು ಮಾಡತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಸಿದ್ಧವಿರಬಹುದಾದಂಥ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಅವನ ವಯಸ್ಸನ್ನು ಆದಷ್ಟು ಮಟ್ಟಿಗೆ ಸರಿಯಾಗಿ ನಿರೂಪಿಸಿ ಆ ವ್ಯಕ್ತಿಯು ಯುವ ಅಪರಾಧಿಯೇ ಹೇಗೆ ಅಥವಾ ಅಲ್ಲವೇ ಎಂಬ ನಿರ್ಣಯವನ್ನು ದಾಖಲು ಮಾಡತಕ್ಕದ್ದು.

(2) ಸಕ್ಷಮ ನ್ಯಾಯಾಲಯದ ಯಾವುದೇ ಆದೇಶವನ್ನು ಯಾವ ವ್ಯಕ್ತಿಗೆ ಸಂಬಂಧಿಸಿದಂತೆ ಆ ಆದೇಶವನ್ನು ಮಾಡಲಗಿದೆಯೋ ಆ ವ್ಯಕ್ತಿಯು, ಯುವ ಅಪರಾಧಿಯಾಗಿಲ್ಲವೆಂಬ ಯಾವುದೇ ತರುವಾಯದ ರುಜುವಾತಿನ ಮಾತ್ರದಿಂದಲೇ ಅಸಿಂಧುವಾಗಿರುವುದಾಗಿ ಭಾವಿಸತಕ್ಕದ್ದಲ್ಲ ಮತ್ತು ಸಕ್ಷಮ ನ್ಯಾಯಾಲಯದ ಮುಂದೆ ಹಾಗೆ ತರಲಾದ ವ್ಯಕ್ತಿಯ ವಯಸ್ಸೆಂದು, ಆ ನ್ಯಾಯಾಲಯವು ದಾಖಲ್ಮಾಡಿದ ವಯಸ್ಸು ಈ ಅಧಿನಿಯಮದ ಉದ್ದೇಶಗಳಿಗಾಗಿ ಆ ವ್ಯಕ್ತಿಯ ನಿಜವಾದ ವಯಸ್ಸೆಂಬುದಾಗಿ ಭಾವಿಸತಕ್ಕದ್ದು.

**31. ನಿಯಮ ರಚನಾಧಿಕಾರಿ:** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಪೂರ್ವ ಪ್ರಕಟಣೆಯ ತರುವಾಯ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಕ್ಕಾಗಿ ಉಪಬಂಧಿಸಬಹುದು ಎಂದರೆ ;–

(ಕ) ಈ ಅಧಿನಿಯಮದ ಮೇರೆಗೆ ಸ್ಥಾಪಿಸಿದ ಯಾವುದೇ ಬೋರ್ಸ್ಟಲ್ ಶಾಲೆಯ ವಿನಿಯಮದ ನಿಯಂತ್ರಣ ಮತ್ತು ವ್ಯವಸ್ಥಾಪನೆ ;

(ಖ) ಅಂಥ ಶಾಲೆಗಳಲ್ಲಿ ಅಧಿಕಾರಿಗಳ ನೇಮಕಾತಿ, ಅಧಿಕಾರಗಳು ಮತ್ತು ಕರ್ತವ್ಯಗಳು ;

(ಗ) ಸಂದರ್ಶಕ ಸಮಿತಿಗಳ ರಚನೆ, ಅಧಿಕಾರ ಮತ್ತು ಕರ್ತವ್ಯಗಳು ;

(ಘ) ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡಬೇಕೆಂದು ಆದೇಶಿಸಿದ ಯುವ ಅಪರಾಧಿಗಳ ವರ್ಗೀಕರಣ, ನಿಯಂತ್ರಣ, ಶಿಸ್ತು, ತರಬೇತಿ, ಶಿಕ್ಷಣ ಮತ್ತು ಉಪಚಾರ ಮತ್ತು ಅಂಥ ಅಪರಾಧಿಗಳನ್ನು ಅಂಥ ಶಾಲೆಗೆ ಅವರನ್ನು ಕಳುಹಿಸುವುದಕ್ಕಾಗಿ ವ್ಯವಸ್ಥೆಗಳನ್ನು ಮಾಡುವವರೆಗೆ ತಾತ್ಕಾಲಿಕ ಬಂಧನಕ್ಕಾಗಿ ;

(ಙ) ಅಂಥ ಶಾಲೆಗಳಲ್ಲಿ ಬಂಧನದಲ್ಲಿಡಲಾದ ಅಪರಾಧಿಗಳೊಡನೆ ಸಂದರ್ಶನ ಮತ್ತು ಅವರೊಂದಿಗೆ ಸಂಪರ್ಕಗಳ ಬಗ್ಗೆ ನಿಯಂತ್ರಣ ;

(ಚ) ಅಂಥ ಶಾಲೆಯಲ್ಲಿ ಬಂಧನದಲ್ಲಿಡಲಾದ ಅಪರಾಧಿಗಳಿಗೆ ಯಾವುದೇ ನಿರ್ದಿಷ್ಟ ಪಡಿಸಲಾದ ವಸ್ತುಗಳನ್ನು ಅಥವಾ ಅಂಥ ಬಗೆಯ ವಸ್ತುಗಳ ಸರಬರಾಜಿನ ಬಗ್ಗೆ ಅಥವಾ ಸ್ವಾಧೀನದ ಬಗ್ಗೆ ಪರಿಬಂಧ ಅಥವಾ ನಿಷೇಧ ;

(ಛ) ಅಪರಾಧಿಗಳನ್ನು ಅಥವಾ ಯಾವುದೇ ವರ್ಗ ಅಥವಾ ವರ್ಗಗಳ ಅಪರಾಧಿಗಳನ್ನು ಈ ಅಧಿನಿಯಮದ ಮೂಲಕ ನಿಗದಿಪಡಿಸಿದ ಪರಿಮಿತಿಯೊಳಗೆ ಅಂಥ ಶಾಲೆಯಲ್ಲಿ ಬಂಧನದಲ್ಲಿಡಬೇಕೆಂದು ಆದೇಶಿಸಬಹುದಾದಂಥ ಅವಧಿ ;

(ಜ) ಅಂಥ ಶಾಲೆಯಲ್ಲಿ ಬಂಧನದಲ್ಲಿಡಬೇಕೆಂದು ಆದೇಶ ಮಾಡಲಾಗದ ಅಪರಾಧಿಗಳ ವರ್ಗ ಅಥವಾ ವರ್ಗಗಳ (ಯಾವುದಾದರೂ ಇದ್ದರೆ) ಅವು,

(ಝ) ಇತರ ರಾಜ್ಯಗಳಲ್ಲಿನ ಬೋರ್ಸ್ಟಲ್ ಶಾಲೆಗಳಿಗೆ ಅಪರಾಧಿಗಳನ್ನು ಸ್ಥಳಾಂತರಿಸುವುದು ಮತ್ತು ಭಾರತದಲ್ಲಿನ ಇತರ ರಾಜ್ಯಗಳಿಂದ ವರ್ಗಾವಣೆ ಮಾಡಿದ ಅಪರಾಧಿಗಳನ್ನು, ಈ ಅಧಿನಿಯಮದ ಮೇರೆಗೆ ಸ್ಥಾಪಿಸಿದ ಬೋರ್ಸ್ಟಲ್ ಶಾಲೆಯಲ್ಲಿ ಸ್ವೀಕರಿಸುವುದು ಮತ್ತು ಬಂಧನದಲ್ಲಿಡುವುದು,

(ಞ) 15ನೇ ಪ್ರಕರಣದ ಮೇರೆಗೆ ಮಂಜೂರ್ಮಾಡಿದ ಲೈಸೆನ್ಸ್‌ಗಳ ನಮೂನೆ ಮತ್ತು ಅದರ ಷರತ್ತುಗಳು,

(ಟ) ಅಪರಾಧಿಗಳ ಬಂಧನದ ಅವಧಿಯು ಮುಕ್ತಾಯವಾದ ತರುವಾಯ ಅವರ ಮೇಲ್ವಿಚಾರಣೆ;

(ಠ) ತಿದ್ದಲಾಗದ ಅಪರಾಧಿಗಳನ್ನು ಬೋರ್ಸ್ಟಲ್ ಶಾಲೆಯಿಂದ ಬಂದೀಖಾನೆಗೆ ವರ್ಗಾಯಿಸುವುದು ;

(ಡ) 19ನೇ ಪ್ರಕರಣದ ಮೇರೆಗೆ ಅಪರಾಧಿಯನ್ನು ಯಾವ ಷರತ್ತುಗಳ ಮೇಲೆ ವಿಮೋಚನೆ ಮಾಡಬಹುದೋ ಆ ಷರತ್ತುಗಳು ;

(ಢ) ತನಿಖಾ ಸಮಿತಿಗಳ ರಚನೆ, ಪ್ರಕ್ರಿಯೆ, ಅಧಿಕಾರಗಳು ಮತ್ತು ಕರ್ತವ್ಯಗಳು ;

(ಣ) ದಸ್ತಗಿರಿ ಮಾಡಲಾದ ಅಥವಾ ಬಂಧನಕ್ಕೆ ಕಳುಹಿಸಲಾದ ಅಥವಾ ಅಧಿ ವಿಚಾರಣೆಗೆ ಒಪ್ಪಿಸಲಾದ ಒಬ್ಬ ಯುವ ಅಪರಾಧಿಯನ್ನು ಬಂಧನದಲ್ಲಿಡುವ ರೀತಿ ;

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಟ್ಟ ಅಥವಾ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡು ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದಲ್ಲ. ಆದಾಗ್ಯೂ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯುಂಟುಮಾಡತಕ್ಕದ್ದಲ್ಲ.

**32. ನಿರಸನ ಮತ್ತು ಉಳಿಸುವಿಕೆಗಳು.–** ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಮೈಸೂರು ಬೋರ್ಸ್ಟಲ್ ಶಾಲೆಗಳ ಅಧಿನಿಯಮ, 1943 (ಮೈಸೂರು ಅಧಿನಿಯಮ 1943ರ XLVI), ಹೈದ್ರಾಬಾದ್ ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಹೈದರಾಬಾದ್ ಬೋರ್ಸ್ಟಲ್ ಶಾಲೆಗಳ ಅಧಿನಿಯಮ, 1956 (ಹೈದರಾಬಾದ್ ಅಧಿನಿಯಮ, 1956 XXV) ಮುಂಬೈ ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಮುಂಬೈ ಬೋರ್ಸ್ಟಲ್ ಶಾಲೆಗಳ ಅಧಿನಿಯಮ, 1929 (ಮುಂಬೈ ಅಧಿನಿಯಮ, 1929ರ XXVIII) ಮತ್ತು ಮದ್ರಾಸ್ ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಮದ್ರಾಸ್ ಬೋರ್ಸ್ಟಲ್ ಶಾಲೆಗಳ ಅಧಿನಿಯಮ, 1926 (ಮದ್ರಾಸ್ ಅಧಿನಿಯಮ 1926ರ V) ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899 (ಕರ್ನಾಟಕ ಅಧಿನಿಯಮ, 1899ರ III)ರ 6ನೇ ಪ್ರಕರಣವು ಅಂಥ ನಿರಸನಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮದ 8ನೇ ಪ್ರಕರಣ ಮತ್ತು 24ನೇ ಪ್ರಕರಣಗಳು ಸದರಿ ಅಧಿನಿಯಮಿತಿಗಳನ್ನು ಈ ಅಧಿನಿಯಮದ ಮೂಲಕ ನಿರಸನಗೊಳಿಸಿದ್ದಿದ್ದರೆ ಮತ್ತು ಪುನರ್ ಅಧಿನಿಯಮಿತಿಗೊಳಿಸಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

**ಗೃಹ ಸಚಿವಾಲಯ**

**ಅಧಿಸೂಚನೆ**

**ಬೆಂಗಳೂರು: ದಿನಾಂಕ 3ನೇ ಡಿಸೆಂಬರ್, 1969**

** **ಜಿ.ಎಸ್.ಆರ್. 438:–** ಕರ್ನಾಟಕ ಬೋರ್ಸ್ಟಲ್ ಶಾಲೆಗಳ ಅಧಿನಿಯಮ, 1963 (ಕರ್ನಾಟಕ ಅಧಿನಿಯಮ 1964ರ 24)ದ 31ನೇ ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸುತ್ತದೆ. ಸದರಿ ನಿಯಮಗಳ ಕರಡನ್ನು ಸದರಿ ಪ್ರಕರಣದ (1)ನೇ ಉಪಕರಣದ ಮೂಲಕ ಅಗತ್ಯಪಡಿಸಿದಂತೆ 1969ರ ಆಗಸ್ಟ್ 28ನೇ ದಿನಾಂಕದ ಕರ್ನಾಟಕ ರಾಜ್ಯಪತ್ರದ ಭಾಗ IV ವಿಭಾಗ 2ಸಿ(i)ರಲ್ಲಿ ಪ್ರಕಟಿಸಿದ ಅಧಿಸೂಚನೆ ಸಂಖ್ಯೆ ಜಿಎಸ್ಆರ್ 300 (ಹೆಚ್‌ಡಿ 8 ಪಿಆರ್‌ಎಚ್ 66) 1969ರ ಆಗಸ್ಟ್ 18ನೇ ದಿನಾಂಕದಂದು ಈ ಹಿಂದೆಯೇ ಪ್ರಕಟಿಸಲಾಗಿತ್ತು. ಎಂದರೆ,–

**1. ಹೆಸರು :–** ಈ ನಿಯಮಗಳನ್ನು ಕರ್ನಾಟಕ ಬೋರ್ಸ್ಟಲ್ ಶಾಲೆಗಳ ನಿಯಮಗಳು 1969 ಎಂದು ಕರೆಯತಕ್ಕದ್ದು.

**2. ಪರಿಭಾಷೆಗಳು :–** ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು.–

(i) **'ಅಧಿನಿಯಮ'** ಎಂದರೆ ಕರ್ನಾಟಕ ಬೋರ್ಸ್ಟಲ್ ಶಾಲೆಗಳ ಅಧಿನಿಯಮ, 1963

(ii) **'ನಮೂನೆ'** ಎಂದರೆ ಈ ನಿಯಮಗಳಿಗೆ ಲಗತ್ತಿಸಲಾದ ನಮೂನೆ ;

(iii) **'ಸೂಪರಿಂಟೆಂಡೆಂಟ್'** ಎಂದರೆ ಬೋರ್ಸ್ಟಲ್ ಶಾಲೆಯ ಸೂಪರಿಂಟೆಂಡೆಂಟ್ ;

(iv) **'ಶಾಲೆ'** ಎಂದರೆ ಬೋರ್ಸ್ಟಲ್ ಶಾಲೆ.

---

** 4-6-1971ನೇ ದಿನಾಂಕದ ಅಧಿಸೂಚನೆಯ ಮೂಲಕ ತಿದ್ದುಪಡಿಯಾದಂತೆ.

**3. ಸೂಪರಿಂಟೆಂಡೆಂಟ್ ಮತ್ತು ಇತರ ಅಧಿಕಾರಿಗಳ ನೇಮಕಾತಿ:** ರಾಜ್ಯ ಸರ್ಕಾರವು ಸೂಪರಿಂಟೆಂಡೆಂಟ್ ಮತ್ತು ಅದು ಸೂಕ್ತವೆಂದು ಭಾವಿಸುವಂಥ ಇತರ ಅಧಿಕಾರಿಗಳನ್ನು ನೇಮಕ ಮಾಡತಕ್ಕದ್ದು.

**4. ಕೆಲವು ವ್ಯಕ್ತಿಗಳನ್ನು ಶಾಲೆಯಲ್ಲಿ ಬಂಧನದಲ್ಲಿಡಲು ಆದೇಶಿಸತಕ್ಕದ್ದಲ್ಲ :** ಭಾರತ ದಂಡ ಸಂಹಿತೆಯ 354, 366, 376, 377, 493, 497 ಮತ್ತು 498ನೇ ಪ್ರಕರಣಗಳ ಮೇರೆಗಿನ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಕಂಡುಬಂದ ಯುವಾಪರಾಧಿಗಳನ್ನು ಶಾಲೆಯಲ್ಲಿ ಬಂಧನದಲ್ಲಿಡಲು ಆದೇಶಿಸತಕ್ಕದ್ದಲ್ಲ.

**5. ಇನ್ಸ್‌ಪೆಕ್ಟರ್ ಜನರಲ್ಲನಿಂದ ಒಂದು ಬೋರ್ಸ್ಟಲ್ ಶಾಲೆಯಿಂದ ಮತ್ತೊಂದಕ್ಕೆ ವರ್ಗಾವಣೆ.–** ಇನ್ಸ್‌ಪೆಕ್ಟರ್ ಜನರಲ್ಲನು ಒಂದು ಶಾಲೆಯಲ್ಲಿ ಬಂಧನದಲ್ಲಿಟ್ಟ ಯುವಾಪರಾಧಿಯನ್ನು ಶಿಸ್ತಿನ ಕಾರಣಗಳ ಮೇಲೆ ಮತ್ತೊಂದು ಶಾಲೆಗೆ ವರ್ಗಾಯಿಸಬಹುದು.

**6. ಸೇರಿಸಿಕೊಂಡಮೇಲೆ ಪರೀಕ್ಷೆ:** ಸೇರಿಸಿಕೊಂಡಮೇಲೆ ಸೂಪರಿಂಟೆಂಡೆಂಟನು ಯುವಾಪರಾಧಿಯನ್ನು ಮಾನಸಿಕ ಪರೀಕ್ಷೆಗೆ ಒಳಪಡಿಸತಕ್ಕದ್ದು, ಅವನು ಶಾಲೆಯ ವೈಯಕ್ತಿಕ ದಾಖಲೆಯಲ್ಲಿ ಅವನ ನಿರ್ಣಯಗಳನ್ನು ದಾಖಲು ಮಾಡತಕ್ಕದ್ದು. ಸೂಪರಿಂಟೆಂಡೆಂಟನು ಯಾವನೇ ಮನಶಾಸ್ತ್ರಜ್ಞ, ಅವನು ಲಭ್ಯವಾಗಿದ್ದರೆ ಅವನ ನೆರವನ್ನು ಪಡೆದುಕೊಳ್ಳಬಹುದು.

**7. ವೈದ್ಯಕೀಯ ಪರೀಕ್ಷೆ :** ಶಾಲೆಯ ವೈದ್ಯಾಧಿಕಾರಿಯು, ಪ್ರವೇಶದ ತರುವಾಯ ಆದಷ್ಟು ಬೇಗನೆ ಮತ್ತು ಆ ತರುವಾಯ ಒಂದು ತಿಂಗಳಿಗಿಂತ ಹೆಚ್ಚಿಲ್ಲದ ಮಧ್ಯಂತರಗಳಲ್ಲಿ, ಆ ಶಾಲೆಯ ಪ್ರತಿಯೊಬ್ಬ ನಿವಾಸಿಯನ್ನು ಸವಿವರವಾದ ವೈದ್ಯಕೀಯ ಪರೀಕ್ಷೆಗೆ ಒಳಪಡಿಸತಕ್ಕದ್ದು ಮತ್ತು ಇನ್ಸ್‌ಪೆಕ್ಟರ್ ಜನರಲ್ಲನು ಕಾಲಕಾಲಕ್ಕೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಅವನ ನಿರ್ಣಯಗಳನ್ನು ದಾಖಲು ಮಾಡತಕ್ಕದ್ದು. ಅವನು ನಿವಾಸಿಯ ಆರೋಗ್ಯಕ್ಕೆ ಬಾಧಕವನ್ನುಂಟು ಮಾಡುವ ಯಾವುದೇ ಮಹತ್ವದ ವಿಷಯವನ್ನು ವಿಳಂಬವಿಲ್ಲದೆ ಅವಶ್ಯವೆಂದು ಕಂಡು ಬರಬಹುದಾದಂಥ ಕ್ರಮಕ್ಕಾಗಿ ಸೂಪರಿಂಟೆಂಡೆಂಟನ ಗಮನಕ್ಕೆ ತರತಕ್ಕದ್ದು.

**8. ಬೋರ್ಸ್ಟಲ್ ತರಬೇತಿಗಾಗಿ ಅನರ್ಹನಾದ ನಿವಾಸಿಯ ಬಗ್ಗೆ ವರದಿ :** ಸೂಪರಿಂಟೆಂಡೆಂಟನು ವಿಳಂಬವಿಲ್ಲದೆ ವೈದ್ಯಕೀಯ ಅಧಿಕಾರಿಯ ಅಭಿಪ್ರಾಯದಲ್ಲಿ ಬೋರ್ಸ್ಟಲ್ ತರಬೇತಿಗಾಗಿ ಅನರ್ಹನಾಗಿರುವ ಯಾವನೇ ನಿವಾಸಿಯ ಪ್ರಕರಣವನ್ನು ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲ್ಲನಿಗೆ ವರದಿಯನ್ನು ಮಾಡತಕ್ಕದ್ದು, ಇನ್ಸ್‌ಪೆಕ್ಟರ್ ಜನರಲ್ಲನು ಆ ತರುವಾಯ ಅವನನ್ನು ಬಂದೀಖಾನೆಗೆ ವರ್ಗಾಯಿಸಬೇಕೆ ಹೇಗೆ ಎಂಬ ಬಗ್ಗೆ ತೀರ್ಮಾನಿಸಬಹುದು.

**9. ನಿವಾಸಿಗಳ ಬಗ್ಗೆ ಗೃಹ ವ್ಯವಸ್ಥೆ ಮತ್ತು ವರ್ಗೀಕರಣ ಮತ್ತು ಶುಶ್ರೂಷೆ :**

(1) ಪ್ರತಿಯೊಂದು ಶಾಲೆಯಲ್ಲಿ ಗೃಹಗಳನ್ನಾಗಿ ವಿಭಜಿಸತಕ್ಕದ್ದು.

(2) ಪ್ರತಿಯೊಂದು ಗೃಹವು ಸರಿಸುಮಾರು ಒಂದೇ ಸಂಖ್ಯೆಯ ನಿವಾಸಿಗಳನ್ನು ಹೊಂದಿರತಕ್ಕದ್ದು, ಒಂದೇ ಗೃಹದಲ್ಲಿ ಅತ್ಯುತ್ತಮ ಅಥವಾ ಅತಿಕೆಟ್ಟ ನಿವಾಸಿಗಳು ಕೇಂದ್ರೀಕೃತವಾಗದಂತೆ ಖಚಿತಪಡಿಸಿಕೊಳ್ಳಲು ಎಚ್ಚರವಹಿಸಬೇಕು.

(3) ಪ್ರತಿಯೊಂದು ಗೃಹವು, ಒಬ್ಬ ಹೌಸ್ ಮಾಸ್ಟರ್ ಅಥವಾ ಶಾಲಾ ಉಪಾಧ್ಯಾಯನನ್ನು ಹೊಂದಿರತಕ್ಕದ್ದು, ಒಬ್ಬ ಸಣ್ಣ ಅಧಿಕಾರಿಯು ಪ್ರತಿಯೊಬ್ಬ ಹೌಸ್ ಮಾಸ್ಟರ್ ಅಥವಾ ಉಪಾಧ್ಯಾಯನಿಗೆ ಸಹಾಯ ಮಾಡಬಹುದು.

**10. ಹೌಸ್ ಮಾಸ್ಟರ್ ಅಥವಾ ಉಪಾಧ್ಯಾಯನ ಜವಾಬ್ದಾರಿಗಳು :** ಮನೆ ಹೌಸ್‌ಮಾಸ್ಟರ್ ಅಥವಾ ಉಪಾಧ್ಯಾಯ ಮತ್ತು ಅವನ ಸಹಾಯಕನು ಸೂಪರಿಂಟೆಂಡೆಂಟನಿಗೆ ,–

(ಕ) ಆ ಗೃಹದ ನೀತಿಮಟ್ಟ ಮತ್ತು ಸಾಮಾನ್ಯ ನಡವಳಿಕೆ ;

(ಖ) ಆ ಗೃಹದ ಪ್ರತಿಯೊಬ್ಬ ನಿವಾಸಿಯ ತರಬೇತಿ ;

(ಗ) ವಾರ್ಡು, ಕೊಠಡಿಗಳು, ಬಟ್ಟೆಬರೆ ಮತ್ತು ಹಾಸಿಗೆಗಳ ಸ್ವಚ್ಛತೆ ಮತ್ತು ಅವುಗಳನ್ನು ಸುಸ್ಥಿತಿ ಮತ್ತು ದುರಸ್ತಿಯಲ್ಲಿ ಇಟ್ಟುಕೊಳ್ಳುವುದು ಮತ್ತು

(ಘ) ನಿವಾಸಿಗಳಲ್ಲಿ ಆಹಾರದ ಸರಿಯಾದ ಹಂಚಿಕೆ ;

– ಇವುಗಳಿಗಾಗಿ ಜವಾಬ್ದಾರನಾಗಿರತಕ್ಕದ್ದು ;

**11. ಗುಂಪಿನ ಮೇಲ್ವಿಚಾರಕ :** (1) ಪ್ರತಿಯೊಂದು ಗೃಹವನ್ನು ಗುಂಪುಗಳಾಗಿ ವಿಭಜಿಸತಕ್ಕದ್ದು, ಒಂದೇ ಗುಂಪಿನಲ್ಲಿ ಅತ್ಯುತ್ತಮ ಅಥವಾ ಅತಿ ಕೆಟ್ಟ ನಿವಾಸಿಗಳು ಕೇಂದ್ರೀಕೃತವಾಗದಂತೆ ನೋಡಿಕೊಳ್ಳಲು ಎಚ್ಚರವಹಿಸಬೇಕು.

(2) ಪ್ರತಿಯೊಂದು ಗುಂಪು, ಒಬ್ಬ ಮೇಲ್ವಿಚಾರಕನ ಅಧೀನದಲ್ಲಿ ಇರತಕ್ಕದ್ದು ; ಅವನನ್ನು ಪ್ರತಿ ಗುಂಪಿನವರಿಂದ ಹೌಸ್ ಮಾಸ್ಟರನು ಅಥವಾ ಉಪಾಧ್ಯಾಯನು ಆಯ್ಕೆ ಮಾಡತಕ್ಕದ್ದು. ಮೇಲ್ವಿಚಾರಕನು ಒಂದು ವಿಭಿನ್ನತಾ ಗುರುತನ್ನು ಧರಿಸತಕ್ಕದ್ದು.

**12. ಮುಖ್ಯ ಮೇಲ್ವಿಚಾರಕ :** ಸೂಪರಿಂಟೆಂಡೆಂಟನು, ಪ್ರತಿಯೊಂದು ಗೃಹಕ್ಕಾಗಿ ಮೇಲ್ವಿಚಾರಕರ ಪೈಕಿ ಒಬ್ಬ ಮುಖ್ಯ ಮೇಲ್ವಿಚಾರಕನನ್ನು ಆಯ್ಕೆ ಮಾಡತಕ್ಕದ್ದು, ಮುಖ್ಯ ಮೇಲ್ವಿಚಾರಕನು ಗುಂಪಿನ ಮೇಲ್ವಿಚಾರಕರ ಜೊತೆಗೆ ಅಧಿಕವಾಗಿ ಇರತಕ್ಕದ್ದು ಮತ್ತು ಅವನು ಎದೆಯ ಎಡಭಾಗದಲ್ಲಿ ಒಂದು ವಿಶೇಷ ಬಿಲ್ಲೆಯನ್ನು ಧರಿಸತಕ್ಕದ್ದು.

**13. ಸಾಮಾನ್ಯ ದರ್ಜೆ :** ಪ್ರತಿಯೊಬ್ಬ ನಿವಾಸಿಯು, ಶಾಲೆಯಲ್ಲಿ ಅವನನ್ನು ಸ್ವೀಕರಿಸಿದ ಮೇಲೆ ಅವನನ್ನು ಇಟ್ಟಿರುವಂಥ ಸಾಮಾನ್ಯ ದರ್ಜೆಯಲ್ಲಿ ಕನಿಷ್ಠ ಪಕ್ಷ ಆರು ತಿಂಗಳುಗಳು ಇರತಕ್ಕದ್ದು, ಅವನನ್ನು ಅಂಥ ಅವಧಿಯಲ್ಲಿ ಅವನ ದೈಹಿಕ ಸ್ಥಿತಿಗೆ ಯೋಗ್ಯವಾದ ದೈಹಿಕ ದುಡಿಮೆಯಲ್ಲಿ

ನಿಯೋಜಿಸಿಕೊಳ್ಳತಕ್ಕದ್ದು, ಅವನ ಶೀಲ, ಮಾನಸಿಕ ಪ್ರವೃತ್ತಿ ಮತ್ತು ವಿಶೇಷ ತರಬೇತಿಗಾಗಿ ಯೋಗ್ಯತೆ ಇವುಗಳಿಗೆ ವಿಶೇಷವಾಗಿ ಸಂಬಂಧಿಸಿದಂತೆ ಸಿಬ್ಬಂದಿಯು ಅವನನ್ನು ಜಾಗರೂಕತೆಯಿಂದ ಪರೀವೀಕ್ಷಿಸತಕ್ಕದ್ದು. ಒಳ್ಳೆಯ ನಡವಳಿಕೆಗೆ ಒಳಪಟ್ಟು ಅವನಿಗೆ ಆಟಗಳಲ್ಲಿ ಭಾಗವಹಿಸಲು ಅನುಮತಿ ಕೊಡತಕ್ಕದ್ದು.

**14. ನಕ್ಷತ್ರ ದರ್ಜೆಗೆ ಬಡ್ತಿ :** (1) ಸಾಮಾನ್ಯ ದರ್ಜೆಯಲ್ಲಿನ ಪ್ರತಿಯೊಬ್ಬ ನಿವಾಸಿಯ ನಡತೆ ಮತ್ತು ದುಡಿಮೆಯ ಬಗ್ಗೆ ದೈನಿಕ ದಾಖಲೆಯನ್ನಿಡತಕ್ಕದ್ದು.

(2) ಈ ಉದ್ದೇಶಕ್ಕಾಗಿ ಒಂದು ರಿಜಿಸ್ಟರನ್ನು ಇಡತಕ್ಕದ್ದು, ಅದರಲ್ಲಿ ಪ್ರತಿಯೊಬ್ಬ ನಿವಾಸಿಗೆ ದಿವಸ, ದಿವಸಕ್ಕೆ ಕೊಟ್ಟ ಅಂಕಗಳ ಸಂಖ್ಯೆಯನ್ನು ದಾಖಲು ಮಾಡತಕ್ಕದ್ದು ಪ್ರತಿಯೊಂದು ದಿನವಸಕ್ಕಾಗಿ ಈ ಕೆಳಕಂಡಂತೆ ಅಂಕಗಳನ್ನು ಕೊಡತಕ್ಕದ್ದು.

| | ಅಂಕಗಳು |
|---|---|
| ತುಂಬಾ ಉತ್ತಮ | 3 |
| ಉತ್ತಮ | 2 |
| ಸಾಧಾರಣ | 1 |
| ಕೆಟ್ಟ | ಇಲ್ಲ |

ಆ ರಿಜಿಸ್ಟರನ್ನು ಸೂಪರಿಂಟೆಂಡೆಂಟನು ವಾರಕ್ಕೊಂದು ಸಲ ಪರೀಕ್ಷಿಸತಕ್ಕದ್ದು.

(3) 28 ಕೆಲಸದ ದಿವಸಗಳ ತಿಂಗಳಿಗಾಗಿ ಪೂರ್ಣ ಅಂಕಗಳನ್ನು 84ರಂತೆ ಲೆಕ್ಕ ಹಾತಕ್ಕದ್ದು, ಸೂಪರಿಂಟೆಂಡೆಂಟನು ಮಾಸಿಕ ಗರಿಷ್ಟವನ್ನು 100 ಅಂಕಗಳನ್ನಾಗಿ ಮಾಡುವ ಹಾಗೆ ಸದರಿ ಅಂಕಗಳಿಗೆ ಅರ್ಹ ಪ್ರಕರಣಗಳಲ್ಲಿ 16 ಅಂಕಗಳನ್ನು ಸೇರಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(4) ಸಾಮಾನ್ಯ ದರ್ಜೆಯಲ್ಲಿನ ನಿವಾಸಿಯು ನಕ್ಷತ್ರ ದರ್ಜೆಗೆ ಅವನಿಗೆ ಬಡ್ತಿ ಕೊಡುವುದಕ್ಕೆ ಮುಂಚೆ ಕನಿಷ್ಟ ಪಕ್ಷ 500 ಅಂಕಗಳನ್ನು ಗಳಿಸಲು ಅಗತ್ಯವಿರತಕ್ಕದ್ದು, ಸಾಮಾನ್ಯ ದರ್ಜೆಯಲ್ಲಿ ಆರು ತಿಂಗಳುಗಳಿಗಿಂತ ಹೆಚ್ಚು ಇರಲು ಅವನನ್ನು ಅಗತ್ಯಪಡಿಸಿದ್ದರೆ, ಬಡ್ತಿಗಾಗಿ ಅವನು ಪಡೆದುಕೊಳ್ಳಬೇಕಾದ ಅಂಕಗಳ ಸಂಖ್ಯೆಯನ್ನು ಸದರಿ ಅಧಿನಿಯಮದ 24ನೇ ಪ್ರಕರಣದ (5)ನೇ ಉಪಪ್ರಕರಣದ ಉಪಬಂಧಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಸೂಪರಿಂಟೆಂಡೆಂಟನು ಅವಶ್ಯವೆಂದು ಪರ್ಯಾಲೋಚಿಸ ಬಹುದಾದಂಥ ಸಂಖ್ಯೆಯಿಂದ ಹೆಚ್ಚಿಸತಕ್ಕದ್ದು.

**15. ನಕ್ಷತ್ರ ದರ್ಜೆ:** ನಕ್ಷತ್ರ ದರ್ಜೆಗೆ ಬಡ್ತಿ ಹೊಂದಿದ ನಿವಾಸಿಯನ್ನು ಅವನ ವೈಯಕ್ತಿಕ ಅಭಿರುಚಿ ಮತ್ತು ಸಾಮರ್ಥ್ಯಕ್ಕೆ ಸೂಕ್ತವಾದ ವೃತ್ತಿಯಲ್ಲಿ ಇರಿಸತಕ್ಕದ್ದು.

**16. ವಿಶೇಷ ನಕ್ಷತ್ರ ದರ್ಜೆ :** ನಕ್ಷತ್ರ ದರ್ಜೆಯಲ್ಲಿನ ನಿವಾಸಿಯನ್ನು ವಿಶೇಷ ನಕ್ಷತ್ರ ದರ್ಜೆಗೆ ನಿವಾಸಿಯ ಸಾಮಾನ್ಯ ನಡವಳಿಕೆ ಮತ್ತು ದಕ್ಷತೆಯನ್ನು ಸೂಕ್ಷ್ಮವಾಗಿ ಪರಿವೀಕ್ಷಣೆಮಾಡಿದ ತರುವಾಯ ಸೂಪರಿಂಟೆಂಡೆಂಟನಿಗೆ ಅವನನ್ನು ವಿಶೇಷ ನಂಬಿಕೆಯ ಸ್ಥಾನದಲ್ಲಿ ನಿರಪಾಯವಾಗಿ ಇಡಬಹುದೆಂದು ಮನದಟ್ಟಾದರೆ ಬಡ್ತಿ ಕೊಡಬಹುದು. ವಿಶೇಷ ನಕ್ಷತ್ರ ದರ್ಜೆಗೆ ಬಡ್ತಿ ಹೊಂದಿದ ನಿವಾಸಿಯನ್ನು ಪೆರೇಡುಗಳಲ್ಲಿ, ಕಾರ್ಯಾಗಾರಗಳಲ್ಲಿ, ಆಟದ ಮೈದಾನಗಳಲ್ಲಿ ಅಥವಾ ವಿವಿಧ ಖಾತೆಗಳಲ್ಲಿ ಆಡಳಿತಕ್ಕೆ ಅವನು ಸಹಾಯ ಮಾಡಬಹುದಾದ ಇತರ ಸನ್ನಿವೇಶಗಳು ಇತರ ನಿವಾಸಿಗಳ ಮೇಲೆ ಅಧಿಕಾರವನ್ನು ಹೊಂದಿರಲು ಇರಿಸಬಹುದು. ಅಂಥ ನಿವಾಸಿಗಳು ವಿವಿಧ ಖಾತೆಗಳಲ್ಲಿ ಮೇಲ್ವಿಚಾರಕರಾಗಿಯೂ ಸಹ ಕಾರ್ಯ ನಿರ್ವಹಿಸಬಹುದು. ವಿಶೇಷ ನಕ್ಷತ್ರ ದರ್ಜೆಯಲ್ಲಿನ ನಿವಾಸಿಗಳು ವಿಭಿನ್ನವಾದ ಉಡುಪನ್ನು ಧರಿಸತಕ್ಕದ್ದು.

**17. ಬ್ಯಾಡ್ಜ್ ಹಣ :–** (ಕ) ನಕ್ಷತ್ರ ದರ್ಜೆಯಲ್ಲಿನ ನಿವಾಸಿಯು ಪ್ರತಿಯೊಂದು ತ್ರೈಮಾಸಿಕಕ್ಕಾಗಿ ಎರಡು ರೂಪಾಯಿಯಂತೆ ಮತ್ತು ವಿಶೇಷ ನಕ್ಷತ್ರ ದರ್ಜೆಯಲ್ಲಿನ ನಿವಾಸಿಯು ಪ್ರತಿ ತ್ರೈಮಾಸಿಕಕ್ಕಾಗಿ ಆರು ರೂಪಾಯಿಗಳಂತೆ ಆದರ್ಶ ನಡತೆ ಮತ್ತು ಕೆಲಸಕ್ಕಾಗಿ ಬ್ಯಾಡ್ಜ್ ಹಣವನ್ನು ಗಳಿಸಲು ಅರ್ಹನಾಗಿರತಕ್ಕದ್ದು.

(ಖ) ಎಲ್ಲ ಬ್ಯಾಡ್ಜ್ ಹಣವು ನಿವಾಸಿಯ ಲೆಕ್ಕಕ್ಕೆ ಪ್ರಾಪ್ತವಾಗಲು ಅವಕಾಶ ಮಾಡಿಕೊಡತಕ್ಕದ್ದು ಮತ್ತು ಅದನ್ನು ಅವನು ಬಿಡುಗಡೆ ಹೊಂದಿದ ಮೇಲೆ ಅವನಿಗೆ ಸಂದಾಯ ಮಾಡತಕ್ಕದ್ದು. ಆ ಮೊಬಲಗನ್ನು ನಿವಾಸಿಯ ಲೆಕ್ಕಕ್ಕೆ ತಿಂಗಳ ಕೊನೆಯಲ್ಲಿ ಜಮೆ ಮಾಡತಕ್ಕದ್ದು ಮತ್ತು ಆ ನಮೂದುಗಳನ್ನು ಸೂಪರಿಂಟೆಂಡೆಂಟನು ದೃಢೀಕರಿಸತಕ್ಕದ್ದು.

(ಗ) ಬ್ಯಾಡ್ಜ್ ಹಣವನ್ನು ನಿವಾಸಿಯು ನಡತೆಯ ಯಾವ ತಿಂಗಳಲ್ಲಿ ಆದರ್ಶವಾಗಿರುವುದು ಮುಂದುವರಿಯುವುದಿಲ್ಲವೋ ಆ ತಿಂಗಳಿಗಾಗಿ ಕೊಡತಕ್ಕದ್ದಲ್ಲ.

(ಘ) ಬ್ಯಾಡ್ಜ್ ಹಣವು, ಬಡ್ತಿಯ ದಿನಾಂಕದ ನಿಕಟೋತ್ತರದ ತಿಂಗಳಿನ ಒಂದರಂದು ಅದು, ಮೊದಲನೆಯ ದಿವಸವಾಗಿದ್ದ ಹೊರತು ಪ್ರಾಪ್ತವಾಗಲು ಅವಕಾಶ ಮಾಡಿಕೊಡತಕ್ಕದ್ದು.

(ಙ) ಕೆಳಗಿನ ದರ್ಜೆಯಿಂದ ಮೇಲಿನ ದರ್ಜೆಗೆ ಬಡ್ತಿ ಹೊಂದಿದ ನಿವಾಸಗಳಿಗೆ ಬಡ್ತಿಯ ದಿನಾಂಕದ ನಿಕಟೋತ್ತರದ ತಿಂಗಳಿಗೆ ಮೊದಲನೆ ದಿವಸದಿಂದ ಹೆಚ್ಚುವರಿ ಬ್ಯಾಡ್ಜ್ ಹಣವನ್ನು ಗಳಿಸಲು ಅನುಮತಿಸತಕ್ಕದ್ದು.

(ಡಿ) ಬ್ಯಾಡ್ಜ್ ಹಣವನ್ನು ಸೂಪರಿಂಟೆಂಡೆಂಟನು ಅನುಮೋದಿಸಿದ ಉದ್ದೇಶಗಳಿಗೆ ನಿವಾಸಿಯು ವೆಚ್ಚ ಮಾಡಬಹುದು ಅಥವಾ ಅದನ್ನು ಸ್ಥಳೀಯ ಉಳಿತಾಯ ಬ್ಯಾಂಕಿನಲ್ಲಿ ಹೂಡಬಹುದು.

**18. ಕ್ರೀಡೆಗಳು ಮೊದಲಾದವುಗಳಲ್ಲಿ ಪಾಲ್ಗೊಳ್ಳಲು ನಿವಾಸಿಗಳಿಗೆ ಅನುಮತಿ:** ಸೂಪರಿಂಟೆಂಡೆಂಟನು ಅವನು ಸೂಕ್ತವೆಂದು ಪರ್ಯಾಲೋಚಿಸುವಷ್ಟರ ಮಟ್ಟಿಗೆ ನಕ್ಷತ್ರ ಮತ್ತು ವಿಶೇಷ ನಕ್ಷತ್ರ ದರ್ಜೆಗಳಲ್ಲಿನ ನಿವಾಸಿಗಳಿಗೆ ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲ್ಲನ ಪೂರ್ವ

ಮಂಜೂರಾತಿಯೊಂದಿಗೆ ಜಿಲ್ಲೆಯಲ್ಲಿ, ಜಿಲ್ಲೆಯ ಹೊರಗಡೆ ನಡೆಸುವ ಆಟಗಳಲ್ಲಿ ಪಾಲ್ಗೊಳ್ಳಲು ಸ್ಕೌಟ್ ಶಿಬಿರಗಳಿಗೆ ಹೋಗಲು ಮತ್ತು ವ್ಯಾಯಾಮ ಕ್ರೀಡೆಗಳಲ್ಲಿ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ಸ್ಪರ್ಧಿಸಲು ಅನುಮತಿಸತಕ್ಕದ್ದು.

**19. ನಿವಾಸಿಗಳಿಂದ ಅಭ್ಯಾಸನಡಿಗೆ :** ನಕ್ಷತ್ರ ಮತ್ತು ವಿಶೇಷ ನಕ್ಷತ್ರ ದರ್ಜೆಯಲ್ಲಿನ ನಿವಾಸಿಗಳನ್ನು ತಿಂಗಳಿಗೊಮ್ಮೆ ಅಭ್ಯಾಸ ನಡಿಗೆಗಳಲ್ಲಿ ಕರೆದುಕೊಂಡು ಹೋಗತಕ್ಕದ್ದು.

**20. ದಂಡನೆ ದರ್ಜೆಯ ಕೆಲಸ :** ದಂಡನೆ ದರ್ಜೆಯಲ್ಲಿನ ನಿವಾಸಿಯನ್ನು ಕಠಿಣವಾದ ಕೆಲಸದಲ್ಲಿ ನಿಯೋಜಿಸತಕ್ಕದ್ದು.

**21. ದಂಡನೆ ದರ್ಜೆಗೆ ಇಳಿಸುವುದು :** ಸೂಪರಿಂಟೆಂಡೆಂಟನು ದುರ್ನಡತೆಗಾಗಿ ಅಥವಾ ಶಾಲೆಯಲ್ಲಿ ಕೆಟ್ಟ ಪ್ರಭಾವವನ್ನು ಬೀರಿದುದಕ್ಕಾಗಿ ಯಾವನೇ ನಿವಾಸಿಯನ್ನು, ಅವನು ಅವಶ್ಯವೆಂದು ಪರ್ಯಾಲೋಚಿಸುವಂಥ ಅವಧಿಗಾಳಿಗಾಗಿ ದಂಡನೆ ದರ್ಜೆಗೆ ಇಳಿಸಬಹುದು, ಆದರೆ ಯಾವನೇ ನಿವಾಸಿಯನ್ನು ಇನ್ಸ್‌ಪೆಕ್ಟರ್ ಜನರಲ್ಲನ ನಿರ್ದಿಷ್ಟ ಮಂಜೂರಾತಿಯಿಂದಲ್ಲದೆ ಮೂರು ತಿಂಗಳುಗಳಿಗಿಂತ ಹೆಚ್ಚಿನ ಅವಧಿಗಾಗಿ ದಂಡನೆ ದರ್ಜೆಯಲ್ಲಿ ಇಡತಕ್ಕದ್ದಲ್ಲ. ಸೂಪರಿಂಟೆಂಡೆಂಟನು ಅವಶ್ಯವಿದ್ದರೆ ನಿವಾಸಿಯನ್ನು ಅವನ ಮೂಲ ದರ್ಜೆಗೆ ಹಂತ ಹಂತವಾಗಿ ಪುನಃ ತರಬಹುದು, ಸೂಪರಿಂಟೆಂಡೆಂಟನು ಅವನ ರೋಜು ಪುಸ್ತಕದಲ್ಲಿ, ಅವನು ಆದೇಶದ ಮೂಲಕ ದರ್ಜೆಯಲ್ಲಿ ಇಳಿಸುವ ಪ್ರತಿಯೊಂದು ಪ್ರಕರಣದ ವಿವರಗಳು, ಅಂಥ ಆದೇಶಕ್ಕಾಗಿನ ಕಾರಣಗಳು ಮತ್ತು ಆ ಇಳಿಸುವಿಕೆಯು ಜಾರಿಯಲ್ಲಿರಬೇಕಾದಂಥ ಅವಧಿಯನ್ನು ನಮೂದಿಸತಕ್ಕದ್ದು.

**22. ವಿಶೇಷಾಧಿಕಾರಗಳು :** (1) ನಿವಾಸಿಯು, ಅವನನ್ನು ಸ್ವೀಕರಿಸಿದ ಮೇಲೆ ಸರ್ಕಾರದ ಖರ್ಚಿನಲ್ಲಿ ಅವನ ಕುಟುಂಬದ ಯಾವನೇ ಸದಸ್ಯ ಅಥವಾ ಸ್ನೇಹಿತನಿಗೆ ಒಂದು ಪತ್ರವನ್ನು ಬರೆಯಲು ಅನುಮತಿಸತಕ್ಕದ್ದು.

(2) ಆ ತರುವಾಯ, ಶಾಲೆಯಲ್ಲಿ ಅವನ ಬಂಧನದ ಪ್ರತಿ ಹದಿನೈದು ದಿವಸಗಳ ಅವಧಿಯಲ್ಲಿ, ಸರ್ಕಾರದ ಖರ್ಚಿನಲ್ಲಿ ಒಂದು ಅವನ ಖರ್ಚಿನಲ್ಲಿ ಒಂದು ಎರಡು ಪತ್ರಗಳನ್ನು ಬರೆಯಲು ಅನುಮತಿಸತಕ್ಕದ್ದು.

(3) ನಿವಾಸಿಯನ್ನು ಅವನ ಬಂಧುಗಳು ಅಥವಾ ಸ್ನೇಹಿತರೊಂದಿಗೆ ಪ್ರತಿ ಹದಿನೈದು ದಿವಸಗಳಲ್ಲಿ ಸಂದರ್ಶಿಸಲು ಅನುಮತಿಸತಕ್ಕದ್ದು.

**23. ಪತ್ರ ವ್ಯವಹಾರ ಮತ್ತು ಸಂದರ್ಶನಗಳ ಬಗ್ಗೆ ವ್ಯವಸ್ಥೆ :** (1) ಸೂಪರಿಂಟೆಂಡೆಂಟನು, ಅವನ ವಿವೇಚಾನುಸಾರ ವಿಶೇಷ ಭೇಟಿಗಳಿಗೆ ಅವಕಾಶ ಕೊಡಬಹುದು, ಬಂಧನದ ಆದೇಶದ ವಿರುದ್ಧ ಯಾವುದೇ ಅಪೀಲಿಗೆ ಸಂಬಂಧಿಸಿದಂತೆ ಸಂದರ್ಶನಕ್ಕಾಗಿ ಅಧಿಪ್ರೇರಿತ ಕಾನೂನು ಸಲಹೆಗಾರರಿಗೆ ಪ್ರತಿಯೊಂದು ಸೌಲಭ್ಯವನ್ನು ಕೊಡತಕ್ಕದ್ದು.

(2) ಸೂಪರಿಂಟೆಂಡೆಂಟನು ಪತ್ರದ ರವಾನೆಯು ಆಕ್ಷೇಪಣೀಯವೆಂದು ಅವನು ಮನದಟ್ಟು ಮಾಡಿಕೊಂಡ ಹೊರತು ಯಾವುದೇ ಪತ್ರವನ್ನು ನಿವಾಸಿಗೆ ಕೊಡತಕ್ಕದ್ದಲ್ಲ ಅಥವಾ ಅವನು ಕಳುಹಿಸತಕ್ಕದ್ದಲ್ಲ.

(3) ನಿವಾಸಿಗಳ ಮರಣ ಅಥವಾ ತೀವ್ರ ಕಾಯಿಲೆಯ ಬಗ್ಗೆ ತಿಳುವಳಿಕೆಯನ್ನು ತಂದೆ / ತಾಯಿಗೆ, ಅವರ ವಿಳಾಸವು ತಿಳಿಸಿದ್ದರೆ, ಅಥವಾ ತಿಳಿದಿಲ್ಲದಿದ್ದರೆ ವಿಳಾಸ ತಿಳಿದಿರುವ ಅವನ ಅತಿ ಸಮೀಪ ಸಂಬಂಧಿಗಳು ಅಥವಾ ಸ್ನೇಹಿತನಿಗೆ ತಿಳಿಸತಕ್ಕದ್ದು. ಸೂಪರಿಂಟೆಂಡೆಂಟನು ನಿವಾಸಿಗಳ ಆರೋಗ್ಯಕ್ಕೆ ಕ್ಷೇಮಾಭಿವೃದ್ಧಿ ಮತ್ತು ಪ್ರಗತಿಯ ಬಗ್ಗೆ ನಿವಾಸಿಗಳ ತಂದೆ / ತಾಯಿ / ಅಥವಾ ಅತಿ ಸಮೀಪದ ಸಂಬಂಧಿಗಳು ಅಥವಾ ಸ್ನೇಹಿತನು ಮಾಡಿದ ಯಾವುದೇ ವಿಚಾರಣೆಗಳಿಗೆ ಉತ್ತರ ಕೊಡತಕ್ಕದ್ದು.

(4) ಸೇರಿಸಿಕೊಂಡ ಮೇಲೆ ನಿವಾಸಿಗಳ ಕುಟುಂಬಕ್ಕೆ ಸರ್ಕಾರದ ಖರ್ಚಿನಲ್ಲಿ ಒಂದು ಮುದ್ರಿತ ಕಾರ್ಡನ್ನು ಕಳುಹಿಸತಕ್ಕದ್ದು. ಈ ಕಾರ್ಡನ್ನು ;

(i) ನಿವಾಸಿಯ ಆ ಸಂಸ್ಥೆಯಲ್ಲಿನ ಸಂಖ್ಯೆ ಮತ್ತು ವಿಳಾಸ ;

(ii) ನಿವಾಸಿಗಳ ವಿಶೇಷ ಅಧಿಕಾರಗಳ ಬಗೆಗಿನ ನಿಯಮಗಳ ಸಂಕ್ಷಿಪ್ತ ಸಾರಾಂಶ.

– ಇವುಗಳ ಬಗ್ಗೆ ಮಾಹಿತಿಯನ್ನು ಒಳಗೊಂಡಿರತಕ್ಕದ್ದು.

5. ಮೊದಲು ಸೇರಿದ ಮೇಲೆ, ನಿವಾಸಿಯನ್ನು, ಅವನನ್ನು ಸಂದರ್ಶಿಸಲು ಬರುವ ಸಂಭವವಿರುವ ವ್ಯಕ್ತಿಗಳ ಪಟ್ಟಿಯನ್ನು ಮತ್ತು ಅವನ ಅವಧಿಯಲ್ಲಿ ಯಾರೊಂದಿಗೆ ಅವನು ಪತ್ರ ವ್ಯವಹಾರವನ್ನು ಮಾಡುವ ಸಂಭವವಿರಬಹುದೋ ಆ ವ್ಯಕ್ತಿಗಳ ಪಟ್ಟಿಯನ್ನು ಕೊಡಲು ಕೇಳಬಹುದು.

6. ಸಂದರ್ಶನದ ಅವಧಿಯು ಸಾಮಾನ್ಯವಾಗಿ ಇಪ್ಪತ್ತು ನಿಮಿಷಗಳವರೆಗೆ ಇರಬಹುದು ಅದನ್ನು ಸೂಪರಿಂಟೆಂಡೆಂಟನ ವಿವೇಚನಾನುಸಾರ ವಿಸ್ತರಿಸಬಹುದು.

7. ಭಾನುವಾರಗಳಂದು ಮತ್ತು ಶಾಲೆಯ ರಜಾ ದಿವಸಗಳಂದು ಸಂದರ್ಶನವನ್ನು ಮಂಜೂರು ಮಾಡತಕ್ಕದ್ದಲ್ಲ. ಆದರೆ ಸೂಪರಿಂಟೆಂಡೆಂಟನು ಅವನ ವಿವೇಚನಾನುಸಾರ ಸಮುಚಿತ ರಿಜಿಸ್ಟರಿನಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಅತಿ ವಿಶೇಷ ಸಂದರ್ಭಗಳಲ್ಲಿ ಭಾನುವಾರಗಳು ಮತ್ತು ಶಾಲಾ ರಜಾ ದಿವಸಗಳಂದು ಸಂದರ್ಶನಗಳಿಗೆ ಅವಕಾಶಕೊಡಬಹುದು. ಸಂದರ್ಶನದ ವೇಳೆಗಳನ್ನು ಶಾಲೆಯ ಮುಂದಿನ ಗೇಟಿನ ಮೇಲೆ ತಿಳಿಸತಕ್ಕದ್ದು.

8. ಸಂದರ್ಶನಗಳನ್ನು ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಶಾಲಾ ಪ್ರಾಧಿಕಾರಿಗಳಿಗೆ ಕೇಳಿಸುವ ಮತ್ತು ಕಾಣಿಸುವಷ್ಟು ಸಮೀಪದಲ್ಲಿ ನಡೆಸತಕ್ಕದ್ದು. ಕರ್ತವ್ಯದ ಮೇಲಿರುವ ಅಧಿಕಾರಿಗೆ ಆಕ್ಷೇಪಣೀಯವಾದ ವಿಷಯಗಳನ್ನು ಚರ್ಚಿಸಿದರೆ ಸಂದರ್ಶನವನ್ನು ನಿಲ್ಲಿಸುವ ಹಕ್ಕು ಇರುತ್ತದೆ.

9. ನಿವಾಸಿಗಳ ಶರೀರವನ್ನು ಸಂದರ್ಶನಕ್ಕೆ ಮುಂದೆ ಮತ್ತು ಆ ತರುವಾಯ ಆದ್ಯಂತ ಶೋಧಿಸತಕ್ಕದ್ದು.

**24. ಶಿಸ್ತು ಖುದ್ದು ಮೇಲ್ವಿಚಾರಣೆ ಇವುಗಳ ಬಗ್ಗೆ ಉಪಬಂಧಗಳು :**

(1) ಸೂಪರಿಂಟೆಂಡೆಂಟನು ಶಾಲೆಯ ಮೇಲೆ ನಿಕಟ ಮತ್ತು ನಿರಂತರ ಖುದ್ದು ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು. ಅವನು ನಿವಾಸಿಗಳು ಕೆಲಸ ಮಾಡುವ ಅಥವಾ ವಾಸಿಸುವ ಶಾಲೆಯ ಎಲ್ಲಾ ಭಾಗಗಳಿಗೆ ಪ್ರತಿ ದಿವಸ ಭೇಟಿ ಕೊಡತಕ್ಕದ್ದು ಮತ್ತು ಅವುಗಳನ್ನು ಪರಿಶೀಲಿಸತಕ್ಕದ್ದು ಮತ್ತು ಆಸ್ಪತ್ರೆಯಲ್ಲಿ ಒಳರೋಗಿಯಾಗಿರುವ ಪ್ರತಿಯೊಬ್ಬ ನಿವಾಸಿಯ ಬಗ್ಗೆ ವಿಶೇಷ ಗಮನವನ್ನು ಕೊಡತಕ್ಕದ್ದು.

(2) ಸೂಪರಿಂಟೆಂಡೆಂಟನು ಕನಿಷ್ಠ ಪಕ್ಷ ಹದಿನೈದು ದಿವಸಗಳಿಗೊಮ್ಮೆ ರಾತ್ರಿಯಲ್ಲಿ ಶಾಲೆಗೆ ಭೇಟಿ ಕೋಡತಕ್ಕದ್ದು ಮತ್ತು ಪ್ರತಿಯೊಂದು ಸರಿಯಾಗಿದೆ ಎಂದು ಅವನು ಮನದಟ್ಟು ಮಾಡಿಕೊಳ್ಳತಕ್ಕದ್ದು.

**25. ನಿವಾಸಿಯ ಮೇಲೆ ಬಲಪ್ರಯೋಗದ ಪರಿಬಂಧ.–** (1) ನಿವಾಸಿಯೊಂದಿಗೆ ವ್ಯವಹರಿಸುವಲ್ಲಿ, ಯಾವನೇ ಅಧಿಕಾರಿಯು ಅವಶ್ಯವಾದುದಕ್ಕಿಂತ ಹೆಚ್ಚಿನ ಬಲವನ್ನು ಪ್ರಯೋಗಿಸತಕ್ಕದ್ದಲ್ಲ, ಯಾವನೇ ಅಧಿಕಾರಿಯು ನಿವಾಸಿಯನ್ನು ಪ್ರಚೋದಿಸುವ ಅಥವಾ ಕಿರುಕುಳ ಕೊಡುವ ರೀತಿಯಲ್ಲಿ ವರ್ತಿಸತಕ್ಕದ್ದಲ್ಲ.

(2) ಸೂಪರಿಂಟೆಂಡೆಂಟನಿಗೆ ನಿವಾಸಿಯ ನಡವಳಿಕೆಯು, ಅವನ ಸ್ವಂತ ತರಬೇತಿಯ ಹಿತದಲ್ಲಿ ಅಥವಾ ಇತರ ನಿವಾಸಿಗಳ ಒಳಿತಿಗಾಗಿ ಅವನನ್ನು ಸಾಮಾನ್ಯ ಸಮುದಾಯ ಜೀವನದಿಂದ ತಾತ್ಕಾಲಿಕವಾಗಿ ಸ್ಥಳಾಂತರಿಸಬೇಕೆಂದು ಮನದಟ್ಟಾದರೆ ಅವನು ಸೀಮಿತ ಅವಧಿಗಾಗಿ ನಿವಾಸಿಯನ್ನು ಅವನ ಗೃಹದಿಂದ ಸ್ಥಳಾಂತರಿಸಲು ಆದೇಶ ಮಾಡಬಹುದು. ಹಾಗೆ ಸ್ಥಳಾಂತರಿತನಾದ ನಿವಾಸಿಗೆ, ಸಹವಾಸ ಮತ್ತು ವಿಶೇಷ ಅಧಿಕಾರಗಳ ಬಗ್ಗೆ ಸೂಪರಿಂಟೆಂಡೆಂಟನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಪರಿಬಂಧಗಳ ಮೇರೆಗೆ ಪ್ರತ್ಯೇಕ ಕೋಣೆಯಲ್ಲಿ ಸ್ಥಳಾವಕಾಶವನ್ನು ಮಾಡಿಕೊಡಬಹುದು.

**26. ಅಪರಾಧಗಳ ಬಗ್ಗೆ ತನಿಖೆ.–** ಶಿಸ್ತಿನ ಬಗೆಗಿನ ಪ್ರತಿಯೊಂದು ಅಪರಾಧವನ್ನು ಸೂಪರಿಂಟೆಂಡೆಂಟನಿಗೆ ವರದಿ ಮಾಡತಕ್ಕದ್ದು. ಅವನು ಅದನ್ನು ಸಾಧ್ಯವಾದಷ್ಟು ಬೇಗ ತನಿಖೆ ಮಾಡತಕ್ಕದ್ದು.

**27. ತಿದ್ದಲಾಗದ ನಿವಾಸಿಯ ಬಗ್ಗೆ ವರದಿ.–** ಸೂಪರಿಂಟೆಂಡೆಂಟನು ನಿವಾಸಿಯು ತಿದ್ದಲಾಗದವನು ಅಥವಾ ಆ ಶಾಲೆಯ ಇತರ ನಿವಾಸಿಗಳ ಮೇಲೆ ಕೆಟ್ಟ ಪ್ರಭಾವವನ್ನು ಬೀರುವ ಸಂಭವವಿದೆ ಎಂದು, ಅಥವಾ ತಪ್ಪಿಸಿಕೊಂಡ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿದ್ದಾನೆಂದು ಅಥವಾ ಯಾವುದೇ ಅಪರಾಧವನ್ನು ಮಾಡಿದ್ದಾನೆಂದು ಅಭಿಪ್ರಾಯ ಪಟ್ಟರೆ, ಅವನು ಆ ಪ್ರಕರಣವನ್ನು ಇನ್ಸ್‌ಪೆಕ್ಟರ್ ಜನರಲ್ಲನಿಗೆ ವರದಿ ಮಾಡತಕ್ಕದ್ದು.

**28. ದೈನಿಕ ಕಾರ್ಯಕ್ರಮ ಮತ್ತು ಕೆಲಸದ ವೇಳೆಗಳು.–** (1) ಎಲ್ಲಾ ನಿವಾಸಿಗಳು, ವೈದ್ಯಕೀಯವಾಗಿ ಅವರು ಅರ್ಹರಾಗಿದ್ದರೆ ಪ್ರತಿಯೊಂದು ಕೆಲಸದ ದಿವಸದಲ್ಲಿ ಎಂಟು ಗಂಟೆಗಳವರೆಗೆ ಡ್ರಿಲ್ಲು, ಅಧ್ಯಯನ ಮತ್ತು ಕೆಲಸದಲ್ಲಿ ತೊಡಗುವಂತೆ ಅಗತ್ಯಪಡಿಸತಕ್ಕದ್ದು ;

(2) ಶಾಲೆಯಲ್ಲಿ ಈ ಕೆಳಕಂಡ ದೈನಂದಿನ ಕಾರ್ಯಕ್ರಮವನ್ನು ಪಾಲಿಸತಕ್ಕದ್ದು ;

| | |
|---|---|
| ಪೂರ್ವಾಹ್ನ 5–30 ರಿಂದ ಪೂರ್ವಾಹ್ನ 6ರವರೆಗೆ | ಉಡುಪು ಧರಿಸುವುದು, ಧ್ಯಾನ, ಬೀಗ ತೆಗೆಯುವುದು, ಎಣಿಸುವುದು, ಶೋಧನೆ ಮತ್ತು ಬೆರಾಕುಗಳನ್ನು ಬಿಡುವುದು ಇವುಗಳಿಗಾಗಿನ ತಯಾರಿ |
| ಪೂರ್ವಾಹ್ನ 6 ರಿಂದ 6–30 ರವರೆಗೆ | ಪಾಯಿಖಾನೆಗೆ ಹೋಗುವುದು, ಸ್ನಾನ, ಬೆಳಗಿನ ಪ್ರಾರ್ಥನೆ |
| ಪೂರ್ವಹ್ನ 6–30 ರಿಂದ 7–30 ರವರೆಗೆ | ಕವಾಯತು ಮತ್ತು ದೈಹಿಕ ತರಬೇತಿ |
| ಪೂರ್ವಾಹ್ನ 7–30 ರಿಂದ 8 ರವರೆಗೆ | ಬೆಳಗಿನ ಲಘು ಉಪಹಾರ (ಗಂಜಿ) |
| ಪೂರ್ವಾಹ್ನ 8 ರಿಂದ 11–30 ರವರೆಗೆ | ಕಾರ್ಯಾಗಾರಗಳು, ಕೃಷಿ ತರಬೇತಿ, ಶೈಕ್ಷಣಿಕ ತರಗತಿಗಳು |
| ಪೂರ್ವಾಹ್ನ 11–30 ರಿಂದ ಅಪರಾಹ್ನ 1 ರವರೆಗೆ | ಮಧ್ಯಾಹ್ನದ ಊಟ ಮತ್ತು ವಿಶ್ರಾಂತಿ |
| ಅಪರಾಹ್ನ 1 ರಿಂದ 3–30 ರವರೆಗೆ | ಕಾರ್ಯಾಗಾರಗಳು, ಕೃಷಿ ಮತ್ತು ಇತರ ತರಬೇತಿ |
| ಅಪರಾಹ್ನ 3–30 ರಿಂದ 4–30 ರವರೆಗೆ | ಮನರಂಜನೆ ಮತ್ತು ಆಟಗಳು |
| ಅಪರಾಹ್ನ 4–30 ರಿಂದ 5–30 ರವರೆಗೆ | ತೊಳೆದುಕೊಳ್ಳುವುದು, ಸಾಮಾಜಿಕ ಶಿಕ್ಷಣ |
| ಅಪರಾಹ್ನ 5–30 ರಿಂದ 6 ರವರೆಗೆ | ಸಂಜೆ ಊಟ |
| ಅಪರಾಹ್ನ 6 ರಿಂದ 9–30 ರವರೆಗೆ | ವೃತ್ತ ಪತ್ರಿಕೆಗಳು, ಪುಸ್ತಕಗಳು, ರೇಡಿಯೋ ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಲಾಕಪ್ ಶೋಧ, ಧ್ಯಾನ |
| ಅಪರಾಹ್ನ 9–30 ಕ್ಕೆ | ನಿದ್ರೆ |

ಸೂಪರಿಂಟೆಂಡೆಂಟನು, ಋತುಮಾನ ಪರಿಸ್ಥಿತಿಗಳಿಗನುಗುಣವಾಗಿ, ಅವನು ಅವಶ್ಯವೆಂದು ಪರ್ಯಾಲೋಚಿಸುವಷ್ಟರ ಮಟ್ಟಿಗೆ ಅಪರಾಹ್ನ 3–30ರ ತರುವಾಯ ಸಂಜೆಯ ಕಾರ್ಯಕ್ರಮಗಳನ್ನು ಮಾರ್ಪಾಟು ಮಾಡಬಹುದು.

**20. ವಿದ್ಯಾಭ್ಯಾಸ.** ನಿವಾಸಿಗೆ, ಅವನದೇ ಆದ ಭಾಷೆಯಲ್ಲಿ ವಿದ್ಯಾಭ್ಯಾಸವನ್ನು ಕೊಡತಕ್ಕದ್ದು ಮತ್ತು ಅದು ಸಾಮಾನ್ಯವಾಗಿ ಓದುವುದು, ಬರೆಯುವುದು ಲೆಕ್ಕ ಮತ್ತು ಸಾಮಾನ್ಯ ಜ್ಞಾನ ಇವುಗಳಿಗೆ ಸೀಮಿತವಾಗಿರತಕ್ಕದ್ದು.

(2) ನಿವಾಸಿಯು ಅವನು ಸೇರಿಕೊಂಡ ದಿನಾಂಕದಿಂದ ಸೂಪರಿಂಟೆಂಡೆಂಟನು ನಿಗದಿಪಡಿಸಿದ ಅವಧಿಗಳಲ್ಲಿ ಶಾಲೆಗೆ ಹಾಜರಾಗತಕ್ಕದ್ದು

(3) ನಿವಾಸಿಯು ಪಬ್ಲಿಕ್ ಪರೀಕ್ಷೆಗಾಗಿ ಅಧ್ಯಯನ ಮಾಡುತ್ತಿರುವ ವಿಶೇಷ ಸಂದರ್ಭಗಳಲ್ಲಿ ಅವನಿಗೆ ದಿವಸಕ್ಕೆ ಗರಿಷ್ಟ ಐದು ಗಂಟೆಗಳವರೆಗೆ ಶಾಲೆಗೆ ಹಾಜರಾಗಲು ಅಮುಮತಿಸಬಹುದು. ಪ್ರತಿಯೊಬ್ಬ ನಿವಾಸಿಯನ್ನು ಪ್ರತಿ ಆರು ತಿಂಗಳುಗಳು ಕೊನೆಗೊಳ್ಳುವಾಗ ಹೌಸ್ ಮಾಸ್ಟರ್ ಅಥವಾ ಉಪಾಧ್ಯಾಯನು ಪರೀಕ್ಷಿಸತಕ್ಕದ್ದು ಮತ್ತು ಪಡೆದುಕೊಂಡ ಅಂಕಗಳನ್ನು ಮತ್ತು ತರಗತಿಯಲ್ಲಿ ಅವನ ಸ್ಥಾನವನ್ನು ಶಾಲೆಯ ವೈಯಕ್ತಿಕ ದಾಖಲೆಯಲ್ಲಿ ದಾಖಲು ಮಾಡತಕ್ಕದ್ದು.

(4) ಬೋರ್ಸ್ಟಲ್ ಮಟ್ಟದ ಶಿಕ್ಷಣವನ್ನು ತೃಪ್ತಿಕರವಾಗಿ ಮುಗಿಸಿರುವ ಅಥವಾ ಸೇರುವುದಕ್ಕೆ ಮುಂಚೆ ಮಾಧ್ಯಮಿಕ ಅಥವಾ ಪ್ರೌಢಶಾಲಾ ತರಗತಿಗಳಲ್ಲಿ ಅಧ್ಯಯನ ಮಾಡಿರುವ ಬುದ್ಧಿವಂತ ನಿವಾಸಿಗಳಿಗೆ, ಲಭ್ಯವಿರುವ ಸಿಬ್ಬಂದಿಯ ನೆರವಿನೊಂದಿಗೆ ಅವರ ಶಿಕ್ಷಣವನ್ನು ಅಭಿವೃದ್ಧಿಗೊಳಿಸಲು ಸೌಲಭ್ಯಗಳನ್ನು ಕೊಡಬಹುದು.

(5) ಶೈಕ್ಷಣಿಕ ತರಗತಿಗಳನ್ನು, ಶಿಕ್ಷಣ ಇಲಾಖೆಯ ಅಧಿಕಾರಿಯು ವಾರ್ಷಿಕವಾಗಿ ಪರಿಶೀಲಿಸತಕ್ಕದ್ದು.

(6) ಶಾಲೆಯಿಂದ ಬಿಡುಗಡೆಯಾದ ನಿವಾಸಿಗೆ ಅವನು ಸೂಕ್ತ ಉದ್ಯೋಗವನ್ನು ಕಂಡುಕೊಳ್ಳಲು ಅವನಿಗೆ ನೆರವಾಗಲು ನಮೂನೆ – IIರಲ್ಲಿ ಪ್ರಮಾಣಪತ್ರವನ್ನು ಕೊಡತಕ್ಕದ್ದು.

(7) ಸೂಪರಿಂಟೆಂಡೆಂಟನ ಅಭಿಪ್ರಾಯದಲ್ಲಿ ಆ ಉದ್ದೇಶಕ್ಕಾಗಿ ಸಾಕಷ್ಟು ಶಿಕ್ಷಣ ಪಡೆದಿರುವ ಮೇಲ್ವಿಚಾರಕರನ್ನು ಆ ಉಪಾಧ್ಯಾಯರಿಗೆ ನೆರವಾಗಲು ಆ ತರಗತಿಗಳಲ್ಲಿ ನಿಯೋಜಿಸಿಕೊಳ್ಳಬಹುದು.

**30. ಸಾಕ್ಷರತೆಯನ್ನು ಪಡೆಯಲು ವಿಫಲವಾಗುವುದು.–** ನಿವಾಸಿಯು ಶಿಕ್ಷಣದಲ್ಲಿನ ಬೋಧನೆಯಿಂದ ಪ್ರಯೋಜನವನ್ನು ಪಡೆಯಲು, ವಿಫಲವಾದಾಗ ಸೂಪರಿಂಟೆಂಡೆಂಟನು ತರಗತಿಗಳಿಗೆ ಹಾಜರಾಗುವುದರಿಂದ ಅಂಥ ನಿವಾಸಿಗೆ ವಿನಾಯಿತಿ ಕೊಡಬಹುದು ಮತ್ತು ಅವನ ವೇಳೆಯನ್ನು ಇತರ ಸೂಕ್ತ ಕೆಲಸದಲ್ಲಿ ಸೂಕ್ತವಾಗಿ ಉಪಯೋಗಿಸಿಕೊಳ್ಳಬಹುದು.

**31. ಗ್ರಂಥಾಲಯ.–** (1) ಪ್ರತಿಯೊಂದು ಶಾಲೆಯಲ್ಲಿ, ನಿವಾಸಿಗಳ ಉಪಯೋಗಕ್ಕಾಗಿ, ಇನ್ಸ್‌ಪೆಕ್ಟರ್ ಜನರಲ್ಲನು ಅನುಮೋದಿಸಿದ ಇಂಗ್ಲೀಷ್ ಮತ್ತು ದೇಶ ಭಾಷೆಯ ಪುಸ್ತಕಗಳು ಮತ್ತು ನಿಯತಕಾಲಿಕೆಗಳನ್ನು ಒಳಗೊಂಡಿರುವ ಗ್ರಂಥಾಲಯವನ್ನು ಒದಗಿಸತಕ್ಕದ್ದು.

(2) ನಿವಾಸಿಗಳಿಗೆ ತಿಳಿದಿರುವ ಭಾಷೆಗಳಲ್ಲಿನ ವೃತ್ತಪತ್ರಿಕೆಗಳು, ಸಾಪ್ತಾಯಿಕ ಮತ್ತು ಮಾಸಿಕ ನಿಯತಕಾಲಿಕೆಗಳನ್ನು ಸಹ ಒದಗಿಸುವುದು.

**32. ಶಿಕ್ಷಣ ಮಟ್ಟ.–** 10ನೇ ತರಗತಿಯವರೆಗೆ (ಎಸ್.ಎಸ್.ಎಲ್.ಸಿ.) ಮತ್ತು ಅದನ್ನು ಒಳಗೊಂಡಂತೆ ಶಿಕ್ಷಣ ಇಲಾಖೆಯು ಕಾಲಕಾಲಕ್ಕೆ ಅನುಮೋದಿಸುವ ಪಠ್ಯಕ್ರಮದ ಪ್ರಕಾರ ಶೈಕ್ಷಣಿಕ ಕಾರ್ಯಕ್ರಮಗಳಿಗಾಗಿನ ಕನಿಷ್ಠ ಮಟ್ಟಗಳು ಇರತಕ್ಕದ್ದು.

**33. ವೃತ್ತಿ ತರಬೇತಿ :** ನಿವಾಸಿಗಳು ಬಹಳ ವಿಶೇಷ ಕಾರಣಗಳಿಗಾಗಿ ಹೊರತು ಅವರ ಕೆಲಸವನ್ನು ಬದಲಾಯಿಸಲು ಅವಕಾಶ ಕೊಡತಕ್ಕದ್ದಲ್ಲ. ಒಂದು ರೀತಿಯ ತರಬೇತಿಯಿಂದ ಇನ್ನೊಂದು ರೀತಿಯ ತರಬೇತಿಗಾಗಿನ ಯಾವುದೇ ವರ್ಗಾವಣೆಯನ್ನು ಸೂಪರಿಂಟೆಂಡೆಂಟನು ಅನುಮೋದಿಸತಕ್ಕದ್ದು.

**34. ವೃತ್ತಿ ಶಿಕ್ಷಣ :** ಪ್ರತಿಯೊಬ್ಬ ನಿವಾಸಿಗೆ ಪ್ರತಿ ದಿವಸ ಐದು ಗಂಟೆಗಳಷ್ಟು ವೃತ್ತಿ ಶಿಕ್ಷಣವನ್ನು ಕೊಡತಕ್ಕದ್ದು. ಅದು ಆ ವಿಷಯದ ತತ್ವದಲ್ಲಿ ಪ್ರತಿ ವಾರ ಕನಿಷ್ಟ ಪಕ್ಷ ಎರಡು ಗಂಟೆಗಳ ಶಿಕ್ಷಣವನ್ನು, ಒಳಗೊಂಡಿರತಕ್ಕದ್ದು. ಪ್ರತಿಯೊಬ್ಬ ಶಿಕ್ಷಕನು ಆರು ತಿಂಗಳಿಗೊಮ್ಮೆ ಶಾಲೆಯ ವೈಯಕ್ತಿಕ ಪ್ರಗತಿ ದಾಖಲೆಯಲ್ಲಿ ಅಂಕಗಳನ್ನು ಕೊಡುವ ಮೂಲಕ ಅವನ ಪ್ರಭಾರದಲ್ಲಿರುವ ಪ್ರತಿಯೊಬ್ಬ ನಿವಾಸಿಯ ಪ್ರಗತಿಯನ್ನು ದಾಖಲು ಮಾಡತಕ್ಕದ್ದು.

**35. ಪ್ರಥಮ ಚಿಕಿತ್ಸೆ ಇತ್ಯಾದಿಗಳಲ್ಲಿ ತರಬೇತಿ.–** (1) ವೃತ್ತಿ ತರಬೇತಿ ಮತ್ತು ವಿದ್ಯಾಭ್ಯಾಸಕ್ಕಾಗಿ ಹಂಚಿಕೆ ಮಾಡಿದ ಅವಧಿಗಳ ಪೈಕಿ ಆಂಬ್ಯುಲೆನ್ಸ್ ಪ್ರಥಮ ಚಿಕಿತ್ಸೆಯಲ್ಲಿ ತರಬೇತಿಯನ್ನು ಕೊಡುವುದಕ್ಕಾಗಿ ವಾರಕ್ಕೆ ಎರಡು ಗಂಟೆಗಳನ್ನು ಉಪಯೋಗಿಸಿಕೊಳ್ಳತಕ್ಕದ್ದು ಮತ್ತು ಪ್ರಥಮ ಚಿಕಿತ್ಸೆ ಮತ್ತು ಆಂಬ್ಯುಲೆನ್ಸ್‌ನಲ್ಲಿನ ಸ್ಕೌಟಿಂಗ್ ಶಿಕ್ಷಣವನ್ನು ಶಾಲೆಯ ವೈದ್ಯಕೀಯ ಪ್ರಾಧಿಕಾರಿಗಳು ಕೊಡತಕ್ಕದ್ದು.

(2) ಸ್ಕೌಟ್ ತರಬೇತಿಗಾಗಿ ಆಯ್ಕೆ ಮಾಡಿದ ನಿವಾಸಿಗಳಿಗೆ ಸರ್ಕಾರದ ಖರ್ಚಿನಲ್ಲಿ ಸ್ಕೌಟ್ ಸಮವಸ್ತ್ರವನ್ನು ಒದಗಿಸತಕ್ಕದ್ದು.

(3) ಸೂಪರಿಂಟೆಂಡೆಂಟನು, ಉಪಾಧ್ಯಾಯರು ಮತ್ತು ಶಿಕ್ಷಕರ ಪೈಕಿ ನಿವಾಸಿಗಳಿಗೆ ದಕ್ಷತೆಯಿಂದ ತರಬೇತಿಯನ್ನು ಕೊಡಲು ಅವರಿಗೆ ಸಾಧ್ಯವಾಗುವಂತೆ ಸ್ಕೌಟಿಂಗ್‌ನಲ್ಲಿ ತರಬೇತಿಯ ಕ್ರಮವನ್ನು ಪಡೆಯಲು ಸೂಕ್ತ ವ್ಯಕ್ತಿಗಳನ್ನು ಆಯ್ಕೆ ಮಾಡತಕ್ಕದ್ದು. ಹಾಗೆ ಆಯ್ಕೆಗೊಂಡ ಉಪಾಧ್ಯಾಯರು ಅಥವಾ ಶಿಕ್ಷಕರಿಗೆ ಸರ್ಕಾರದ ಖರ್ಚಿನಲ್ಲಿ ಸ್ಕೌಟ್ ಸಮವಸ್ತ್ರವನ್ನು ಒದಗಿಸತಕ್ಕದ್ದು.

(4) ಶಾಲೆಯ ಹೊರಗಡೆ ಶಿಬಿರಗಳಲ್ಲಿ ಮತ್ತು ಸ್ಕೌಟ್ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಅನುಮತಿ ಪಡೆದ ನಿವಾಸಿಗಳಿಗೆ ಆ ಉದ್ದೇಶಕ್ಕಾಗಿ ಒಂದು ವರ್ಷದಲ್ಲಿ ಹತ್ತು ದಿವಸಗಳನ್ನು ಮೀರದ ರಜೆಯನ್ನು ಮಂಜೂರು ಮಾಡಬಹುದು.

(5) ನಿವಾಸಿಗಳಿಗೆ, ಸೂಪರಿಂಟೆಂಡೆಂಟನು ನಿಗದಿಪಡಿಸಬಹುದಾದಂಥ ಕಾಲದಲ್ಲಿ ಅಗ್ನಿ ಶಾಮಕ ಇಲಾಖೆ, ರಾಷ್ಟ್ರೀಯ ಕೇಡೆಟ್ ಕೋರ್ ಮತ್ತು ಗೃಹ ರಕ್ಷಕದಳ ಇವುಗಳಿಂದ ತರಬೇತಿ ಪಡೆದ ಸಿಬ್ಬಂದಿಯು ವಾರಕ್ಕೆ ಒಂದು ಸಲ ಅಗ್ನಿಶಾಮಕ, ರಕ್ಷಣಾ ಕೆಲಸ, ರಾಷ್ಟ್ರೀಯ ಕೇಡೆಟ್ ಕೋರ್ ಮತ್ತು ಗೃಹ ರಕ್ಷಣಾ ದಳದಲ್ಲಿನ ತರಬೇತಿಯನ್ನು ಕೊಡಬಹುದು. (ಅಧಿಸೂಚನೆ ಸಂಖ್ಯೆ 14–6–71ರ ಮೇರೆಗೆ ತಿದ್ದುಪಡಿ ಮಾಡಲಾಗಿದೆ).

**36. ಕ್ರೀಡೆಗಳು ಮತ್ತು ಆಟಗಳು.–** (1) ಸೂಪರಿಂಟೆಂಡೆಂಟನು, ವಾರ್ಷಿಕ ಕ್ರೀಡೆಗಳನ್ನು ನಡೆಸುವುದಕ್ಕಾಗಿ ಮತ್ತು ಬಹುಮಾನಗಳ ವಿತರಣೆಗಾಗಿ ವ್ಯವಸ್ಥೆ ಮಾಡತಕ್ಕದ್ದು.

(2) ನಿವಾಸಿಗಳಿಗೆ ಹೊರಗಿನ ಸ್ಥಳಗಳ ಪಂಗಡಗಳ ವಿರುದ್ಧ ಪಂದ್ಯಗಳನ್ನು ಆಡಲು ಮತ್ತು ಜಿಲ್ಲಾ ಕ್ರೀಡೆಗಳು ಮತ್ತು ಟೂರ್ನಮೆಂಟುಗಳಲ್ಲಿ ಸ್ಪರ್ಧಿಸಲು ಅವಕಾಶ ಕೊಡಬಹುದು. ಪಾಲ್ಗೊಳ್ಳುವವರಿಗಾಗಿ ಸಮವಸ್ತ್ರವನ್ನು ಸರ್ಕಾರದ ಖರ್ಚಿನಲ್ಲಿ ಒದಗಿಸಬಹುದು.

**37. ನೈತಿಕ ಶಿಕ್ಷಣ.–** ಇನ್ಸ್‌ಪೆಕ್ಟರ್ ಜನರಲ್ಲನು ನೇಮಕ ಮಾಡಿದ ಶಿಕ್ಷಕನು ನಿವಾಸಿಗಳಿಗೆ ಸಾಮಾನ್ಯ ನೀತಿ ಮತ್ತು ಸಾಮಾಜಿಕ ಆರೋಗ್ಯದ ಬಗ್ಗೆ ನೈತಿಕ ಶಿಕ್ಷಣವನ್ನು ಕೊಡಬಹುದು.

**38. ಸಾಂಸ್ಕೃತಿಕ ಚಟುವಟಿಕೆಗಳು.–** ಶೈಕ್ಷಣಿಕ ಮೌಲ್ಯದ ಮತ್ತು ನೀತಿಗಳನ್ನು ಬೋಧಿಸುವ ಚಲನಚಿತ್ರಗಳನ್ನು ಶಾಲೆಯಲ್ಲಿ ಪ್ರದರ್ಶಿಸಬಹುದು. ನಿವಾಸಿಗಳ ಮನಸ್ಸಿಗೆ ಹತ್ತುವಂತೆ ಒಳ್ಳೆಯ ನೀತಿಯನ್ನು ಒತ್ತಿ ಹೇಳಲು ಉದ್ದೇಶಿಸಿದ ನಾಟಕಗಳನ್ನು ಅವರಿಂದ ಆಡಿಸಬಹುದು. ಅವಶ್ಯ ಸೌಲಭ್ಯಗಳನ್ನು ಕೊಡುವುದರ ಮೂಲಕ ವರ್ಣಚಿತ್ರ, ರೇಖಾ ಚಿತ್ರ, ಮರದ ಕೆತ್ತನೆ, ಚಿತ್ತಾರದ ಕೆಲಸ ಮುಂತಾದವುಗಳಂಥ ಆಟದ ಸಹಜ ಕಲಾ ಪ್ರತಿಭೆಯನ್ನು ನಿವಾಸಿಗಳು ಅಭಿವೃದ್ಧಿ ಪಡಿಸಿಕೊಳ್ಳಲು ಅವಕಾಶ ಕೊಡಬಹುದು. (ಅಧಿಸೂಚನೆ ದಿನಾಂಕ 4–6–71 ಇದರ ಮೂಲಕ ತಿದ್ದುಪಡಿ ಮಾಡಲಾಗಿದೆ).

**39. ನ್ಯಾಯಾಲಯಗಳು ತೀರ್ಪಿನ ಪ್ರತಿಗಳು ಇತ್ಯಾದಿಗಳನ್ನು ಸೂಪರಿಂಟೆಂಡೆಂಟನಿಗೆ ಕಳುಹಿಸತಕ್ಕದ್ದು.–** ಅಧಿನಿಯಮದ 5ನೇ ಪ್ರಕರಣದ ಮೇರೆಗೆ ಬಂಧನದ ಆದೇಶಗಳನ್ನು ಮಾಡಲು ಅಧಿಕೃತಗೊಳಿಸಿದ ನ್ಯಾಯಾಲಯಗಳು, ಶಾಲಾ ಸೂಪರಿಟೆಂಡೆಂಟನಿಗೆ, ಸಾಧ್ಯವಾದಷ್ಟು ಬೇಗ, ತೀರ್ಪಿನ ಒಂದು ಪ್ರತಿಯನ್ನು ಮತ್ತು ನಮೂನೆ IIIರಲ್ಲಿ ಅಪರಾಧಿಯ ಹುಟ್ಟು, ಪೂರ್ವ ವೃತ್ತಾಂತ, ವೃತ್ತಿ, ವಯಸ್ಸು ಇವುಗಳ ಬಗ್ಗೆ ಪರಿವೀಕ್ಷಣಾ ಅಧಿಕಾರಿಯಿಂದ ಪಡೆದ ಸವಿವರ ಮಾಹಿತಿಯನ್ನು ಕಳುಹಿಸತಕ್ಕದ್ದು.

**40. ಸಭೆಯ ಅಧ್ಯಕ್ಷ ಮತ್ತು ಕೋರಂ.–** ಸೆಷನ್ಸ್ ನ್ಯಾಯಾಧೀಶನು ಸಂದರ್ಶನ ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು ಮತ್ತು ಅವನು ಗೈರುಹಾಜರಿಯಲ್ಲಿ ಸಭೆಯಲ್ಲಿ ಹಾಜರಿರುವ ಸದಸ್ಯರು ಅವರ ಪೈಕಿ ಒಬ್ಬನನ್ನು ಆ ಸಭೆಯ ಅಧ್ಯಕ್ಷನೆಂದು ಕಾರ್ಯನಿರ್ವಹಿಸಲು ಆಯ್ಕೆ ಮಾಡತಕ್ಕದ್ದು. ಸಂದರ್ಶಕ ಸಮಿತಿಯ ಪ್ರತಿಯೊಂದು ಸಭೆಗಾಗಿ ಕೋರಂ ಮೂರು ಆಗಿರತಕ್ಕದ್ದು. (ಅಧಿಸೂಚನೆ ದಿನಾಂಕ 4–6–71ರ ಮೂಲಕ ತಿದ್ದುಪಡಿ ಮಾಡಲಾಗಿದೆ).

**40–ಕ. ಸಂದರ್ಶಕ ಸಮಿತಿಯ ಅಧಿಕಾರೇತರ ಸದಸ್ಯರು.–** ಸಮಾಜ ಸೇವಾ ಕ್ಷೇತ್ರದಲ್ಲಿ ಇರುವಂಥ ಮತ್ತು ಬೋರ್ಸ್ಟಲ್ ಶಾಲೆಗಳ ಸ್ಥಾಪನೆ ಮತ್ತು ಆಡಳಿತದಲ್ಲಿ ಮತ್ತು ಬೋರ್ಸ್ಟಲ್ ಶಾಲೆಯಿಂದ ಬಿಡುಗಡೆ ಮಾಡಿದ ಯುವಾಪರಾಧಿಗಳ ಪುನರ್ವಸತಿಯಲ್ಲಿ ಆಸಕ್ತಿಯನ್ನು ಹೊಂದಿರುವ ವ್ಯಕ್ತಿಗಳನ್ನು ಸಂದರ್ಶಕ ಸಮಿತಿಯ ಅಧಿಕಾರೇತರ ಸದಸ್ಯರನ್ನಾಗಿ ನೇಮಕ ಮಾಡಬಹುದು.

**41. ಸಂದರ್ಶಕ ಸಮಿತಿಯ ವ್ಯವಹರಣೆಗಳು.–** ಸಂದರ್ಶಕ ಸಮಿತಿಯ ಪ್ರತಿಯೊಂದು ಸಭೆಯ ವ್ಯವಹರಣೆಗಳು ಮತ್ತು ಅವರು ಸಂದರ್ಶಿಸಿದ ಕಾಲದಲ್ಲಿ ಸಂದರ್ಶಕ ಸಮಿತಿಯ ಸದಸ್ಯರು ದಾಖಲು ಮಾಡಿದ ಷರಾಗಳನ್ನು ಒಳಗೊಂಡು ಒಂದು ಪ್ರತಿಯನ್ನು ಸೂಪರಿಂಟೆಂಡೆಂಟನು ಯಾವುದೇ ವಿವರಣೆಯನ್ನು ಕೊಡಲು ಅಥವಾ ಅನ್ಯಥಾ ಇಚ್ಛಿಸಬಹುದಾದಂಥ ಷರಾಗಳೊಡನೆ ಇನ್ಸ್‌ಪೆಕ್ಟರ್ ಜನರಲ್ಲನಿಗೆ ಕಳುಹಿಸತಕ್ಕದ್ದು.

**42. ಸೂಪರಿಂಟೆಂಡೆಂಟನ ಕರ್ತವ್ಯಗಳು.–** (1) ಸೂಪರಿಂಟೆಂಡೆಂಟನು, ಅಧಿನಿಯಮ ಮತ್ತು ಈ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿರುವಂಥ ಸಂದರ್ಶಕ ಸಮಿತಿಯ ಪ್ರತಿಯೊಂದು ನಿರ್ಣಯವನ್ನು ಜಾರಿಗೊಳಿಸತಕ್ಕದ್ದು. ಸೂಪರಿಂಟೆಂಡೆಂಟನ ಅಭಿಪ್ರಾಯದಲ್ಲಿ ಯಾವುದೇ ನಿರ್ಣಯವು ಅಧಿನಿಯಮ ಅಥವಾ ಈ ನಿಯಮಗಳಿಗೆ ಅಸಂಗತವಾಗಿದ್ದರೆ ಅಥವಾ ಯಾವುದೇ ಅಂಥ ನಿರ್ಣಯವನ್ನು ಜಾರಿಗೊಳಿಸುವುದು ವಿಹಿತವಾಗಿಲ್ಲದಿದ್ದರೆ, ಅವನು ಅಂಥ ನಿರ್ಣಯದ ಬಗ್ಗೆ ಇನ್ಸ್‌ಪೆಕ್ಟರ್ ಜನರಲ್ಲನ ಆದೇಶಗಳನ್ನು ಪಡೆಯತಕ್ಕದ್ದು. ಇನ್ಸ್‌ಪೆಕ್ಟರ್ ಜನರಲ್ಲನು ಅವನೊಡನೆ ಒಪ್ಪಿಕೊಂಡರೆ ಸೂಪರಿಂಟೆಂಡೆಂಟನು ಇನ್ಸ್‌ಪೆಕ್ಟರ್ ಜನರಲ್ಲನ ಆದೇಶಗಳೊಂದಿಗೆ ಅವನ ಅಭಿಪ್ರಾಯಗಳನ್ನು ಸಂದರ್ಶಕ ಸಮಿತಿಯ ಅಧ್ಯಕ್ಷನಿಗೆ ತಿಳಿಸತಕ್ಕದ್ದು. ಇನ್ಸ್‌ಪೆಕ್ಟರ್ ಜನರಲ್ಲನು ಭಿನ್ನಾಭಿಪ್ರಾಯವನ್ನು ತಳೆದರೆ ಮತ್ತು ಆ ನಿರ್ಣಯವನ್ನು ಜಾರಿಗೊಳಿಸಲು ಅವನಿಗೆ ನಿರ್ದೇಶಿಸಿದರೆ, ಅವನು ಹಾಗೆ ಮಾಡತಕ್ಕದ್ದು.

(2) ಸೂಪರಿಂಟೆಂಡೆಂಟನು.–

(ಕ) (i) ಅಧಿನಿಯಮದ 15ನೇ ಪ್ರಕರಣದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ನಿವಾಸಿಗಳ ಪ್ರಕರಣಗಳನ್ನು ;

(ii) ಮಾನಸಿಕ ನ್ಯೂನತೆಯಿಂದಾಗಿ ಬೋರ್ಸ್ಟಲ್ ತರಬೇತಿಗಾಗಿ ಅನರ್ಹರಾಗಿರುವ ಎಲ್ಲಾ ನಿವಾಸಿಗಳ ಪ್ರಕರಣಗಳನ್ನು ;

– ಸಂದರ್ಶಕ ಸಮಿತಿಯ ಗಮನಕ್ಕೆ ತರತಕ್ಕದ್ದು, ಮತ್ತು

(ಖ) ಅವನು ಪ್ರತಿಯೊಂದು ಪ್ರಕರಣದ ಗುಣಾವಗುಣಗಳ ಬಗ್ಗೆ ಸಂದರ್ಶಕ ಸಮಿತಿಗೆ ಸಲಹೆ ಮಾಡತಕ್ಕದ್ದು.

**43. ಬಿಟ್ಟುಬಿಡಲಾಗಿದೆ.**

**44. ತಂದೆ/ ತಾಯಿ ಅಥವಾ ಪಾಲಕ ಅಥವಾ ಸ್ನೇಹಿತನಿಗೆ ನಿವಾಸಿಯ ಬಿಡುಗಡೆಯ ಬಗ್ಗೆ ನೋಟೀಸು:–** ಶಾಲೆಯ ನಿವಾಸಿಯನ್ನು ಅಧಿನಿಯಮದ 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸಿನ ಮೇಲೆ ಬಿಡುಗಡೆ ಮಾಡಲು ಉದ್ದೇಶಿಸಿದಾಗ ಅಥವಾ ಅಂಥ ಶಾಲೆಯಿಂದ ವಿಮೋಚನೆಗೊಳಿಸಲು ಉದ್ದೇಶಿಸಿದಾಗಲೆಲ್ಲ ಸೂಪರಿಂಟೆಂಡೆಂಟನು, ಅಂಥ ಬಿಡುಗಡೆ ಅಥವಾ ವಿಮೋಚನೆಯ ದಿನಾಂಕಕ್ಕೆ ಸಾಕಷ್ಟು ಮುಂಚಿತವಾಗಿ, ಅಂಥ ನಿವಾಸಿಯನ್ನು ಅಂಥ ಬಿಡುಗಡೆ ಅಥವಾ ವಿಮೋಚನೆಯ ದಿನಾಂಕದಂದು ಶಾಲೆಯ ಆವರಣದಲ್ಲಿ ಸ್ವೀಕರಿಸಲು ನಿವಾಸಿಯ ತಂದೆ / ತಾಯಿ ಅಥವಾ ಪಾಲಕ ಅಥವಾ ಸ್ನೇಹಿತನಿಗೆ ನೋಟೀಸನ್ನು ಕಳುಹಿಸತಕ್ಕದ್ದು:

ಪರಂತು, ನಿವಾಸಿಯನ್ನು ಸ್ವೀಕರಿಸಲು ಆ ಶಾಲೆಯ ಆವರಣದಲ್ಲಿ ಅಂಥ ತಂದೆ / ತಾಯಿ, ಪಾಲಕ ಅಥವಾ ಸ್ನೇಹಿತನು ಹಾಜರಾಗಲು ತಪ್ಪಿದಾಗ ನಿವಾಸಿಯ ಗಮ್ಯ ಸ್ಥಾನಕ್ಕೆ ಹೋಗಲು ಶಾಲೆಯ ಸದಸ್ಯರು ಇರತಕ್ಕದ್ದು.

**45. 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸಿನ ನಮೂನೆ :** ಕರ್ನಾಟಕ ಬೋರ್ಸ್ಟಲ್ ಶಾಲೆಗಳ ಅಧಿನಿಯಮ, 1963ರ 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮಂಜೂರು ಮಾಡಿದ ಲೈಸೆನ್ಸು ನಮೂನೆ IV ರಲ್ಲಿ ಇರತಕ್ಕದ್ದು.

**46. ಪ್ರಾರಂಭಿಕ ವಿಚಾರಣೆ.–** ಅಧಿನಿಯಮದ 15ನೇ ಪ್ರಕರಣದ (1ನೇ ಉಪಪ್ರಕರಣದ ಮೇರೆಗೆ ಲೈಸೆನ್ಸಿನ ಮೇಲೆ ಬಿಡುಗಡೆಗಾಗಿ ಸಂದರ್ಶಕ ಸಮಿತಿಯು ಶಿಫಾರಸ್ಸು ಮಾಡಲು ಉದ್ದೇಶಿಸಿದ ನಿವಾಸಿಯ ಪ್ರಕರಣದಲ್ಲಿ, ಸೂಪರಿಂಟೆಂಡೆಂಟನು ಸಂದರ್ಶಕ ಸಮಿತಿಯ ಪ್ರತಿಯೊಂದು ಸಭೆಗೆ ಮುಂಚೆ ಆರು ವಾರಗಳಿಗೆ ಕಡಿಮೆ ಇಲ್ಲದಂತೆ ಆ ಜಿಲ್ಲೆಯ ಜಿಲ್ಲಾ ಪರಿವೀಕ್ಷಣಾ ಅಧಿಕಾರಿಗೆ ಆ ಪರಿವೀಕ್ಷಣಾಧಿಕಾರಿಯು ಅವಶ್ಯವಾದ ವಿಚಾರಣೆಗಳನ್ನು ಮಾಡಲು ಸಾಧ್ಯವಾಗುವಂತೆ ಅಂಥ ನಿವಾಸಿಗಳು ಹೆಸರುಗಳು, ಅವರು ಪಡೆದ ವೃತ್ತಿ, ತರಬೇತಿಯ ವಿವರಗಳು ಮತ್ತು ಅವರಿಗೆ ಸೂಕ್ತವಾದ ಕೆಲಸದ ಬಗೆಯನ್ನು ಕಳುಹಿಸತಕ್ಕದ್ದು ಮತ್ತು ಹಾಗೆ ಪಡೆದುಕೊಂಡ ಮಾಹಿತಿಯನ್ನು ಸಂದರ್ಶಕ ಸಮಿತಿಯ ಮುಂದೆ ಇಡತಕ್ಕದ್ದು.

**47. ಪರಿವೀಕ್ಷಣಾ ಅಧಿಕಾರಿಯಿಂದ ವರದಿ:** ಲೈಸೆನ್ಸಿನ ಅವಧಿಯಲ್ಲಿ ಯಾವುದೇ ಕಾಲದಲ್ಲಿ ಯಾರ ರಕ್ಷಣೆಯಲ್ಲಿ ನಿವಾಸಿಯನ್ನು ಇಡಲಾಗಿದೆಯೋ ಆ ಪರಿವೀಕ್ಷಣಾ ಅಧಿಕಾರಿಯು, ನಿವಾಸಿಯು ಅವನ ಕೆಲಸದಲ್ಲಿ ಪ್ರಗತಿಯನ್ನು ತೋರಿಸಲು ಯಾವುದೇ ಪ್ರಯತ್ನವನ್ನು ಮಾಡಿಲ್ಲವೆಂದು ಅಭಿಪ್ರಾಯಪಟ್ಟರೆ ಅಥವಾ ಅವನ ವರ್ತನೆಯು ತೃಪ್ತಿಕರವಾಗಿಲ್ಲವೆಂದು ನಿರ್ಧರಿಸಿದರೆ ಅವನು ಆ ವಿಷಯವನ್ನು ಸೂಪರಿಂಟೆಂಡೆಂಟನಿಗೆ ವರದಿ ಮಾಡತಕ್ಕದ್ದು, ಅವನು ತರುವಾಯ ಕೂಡಲೇ ಇನ್ಸ್‌ಪೆಕ್ಟರ್ ಜನರಲ್ಲನಿಗೆ ಅವನ ಆದೇಶಗಳಿಗಾಗಿ ವರದಿ ಮಾಡತಕ್ಕದ್ದು.

**48. ನಿವಾಸಿಯ ಅನರ್ಹತೆ ಅಥವಾ ಅಸಮಾರ್ಥ್ಯದ ಸಂದರ್ಭದಲ್ಲಿ ಲೈಸೆನ್ಸಿನ ರದ್ಧಿಯಾತಿ:–** ಲೈಸೆನ್ಸನ್ನು ಮಂಜೂರು ಮಾಡಲಾಗಿರುವ ಅಪರಾಧಿಯು ಕಾಯಿಲೆಯ ಕಾರಣದಿಂದಾಗಿಯೇ ಆಗಲಿ ಅಥವಾ ಅನ್ಯಥಾ ಆಗಲಿ ಶಾಲೆಯನ್ನು ಬಿಡಲು ಅನರ್ಹನಾದರೆ ಅಥವಾ ಅಸಮರ್ಥಗೊಂಡರೆ ಅವನ ಲೈಸೆನ್ಸನ್ನು ಇನ್ಸ್‌ಪೆಕ್ಟರ್ ಜನರಲ್ಲನು ರದ್ದುಗೊಳಿಸತಕ್ಕದ್ದು. ಪರಂತು, ಅಂಥ ಲೈಸೆನ್ಸನ್ನು ಸಂದರ್ಶಕ

ಸಮಿತಿಯು ಅಂಥ ಅನರ್ಹತೆ ಅಥವಾ ಸಮರ್ಥತೆಯು ತಾತ್ಕಾಲಿಕ ಅವಧಿಯದೆಂದು ಅಭಿಪ್ರಾಯಪಟ್ಟರೆ, ಸೂಪರಿಂಟೆಂಡೆಂಟನು ಅದನ್ನು ಜಾರಿಯಲ್ಲಿ ಇಟ್ಟಿರತಕ್ಕದ್ದು.

**49. ವಿಶೇಷವಾಗಿ ಶಿಫಾರಸ್ಸು ಮಾಡಿದ ಹೊರತು ತಪ್ಪಿಸಿಕೊಂಡವನಿಗೆ ಲೇಸೆನ್ಸನ್ನು ಕೊಡತಕ್ಕದ್ದಲ್ಲ.–** ಸಂದರ್ಶಕ ಸಮಿತಿಯು ವಿಶೇಷವಾಗಿ ಶಿಫಾರಸ್ಸು ಮಾಡಿದ ಹೊರತು ಶಾಲೆಯಿಂದ ಅಥವಾ ಮೇಲ್ವಿಚಾರಣೆಯಿಂದ ತಪ್ಪಿಸಿಕೊಂಡ ಅಥವಾ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ಯಾವನೇ ನಿವಾಸಿಗೆ ಲೈಸೆನ್ಸನ್ನು ಕೊಡತಕ್ಕದ್ದಲ್ಲ.

**50. ನಿವಾಸಿಯ ಬಿಡುಗಡೆಯ ನಿರೀಕ್ಷೆಯಲ್ಲಿ ಪರಿವೀಕ್ಷಣಾ ಅಧಿಕಾರಿಗೆ ಸೂಪರಿಂಟೆಂಡೆಂಟನ ವರದಿ:–** ಬಂಧನದ ಅವಧಿಯು ಮುಕ್ತಾಯವಾದ ಮೇಲೆ ಬಿಡುಗಡೆಯಾಗಬೇಕಾದ ನಿವಾಸಿಯ ಪ್ರಕರಣದಲ್ಲಿ ಸೂಪರಿಂಟೆಂಡೆಂಟನು, ಬಿಡುಗಡೆಯ ನಿರೀಕ್ಷಿತ ದಿನಾಂಕಕ್ಕೆ ಆರು ತಿಂಗಳುಗಳಿಗೆ ಮುಂಚೆ ನಿವಾಸಿಯ ಹೆಸರು, ಅವನು ಪಡೆದಿರುವ ವೃತ್ತಿ ತರಬೇತಿಯ ವಿವರಗಳು, ಅವನಿಗೆ ಸೂಕ್ತವಾದ ಕೆಲಸದ ಬಗ್ಗೆ ಇವುಗಳ ಬಗ್ಗೆ ಮಾಹಿತಿಯನ್ನು ಜಿಲ್ಲಾ ಪರಿವಿಕ್ಷಣಾ ಅಧಿಕಾರಿಗೆ ಕಳುಹಿಸತಕ್ಕದ್ದು. ಬಿಡುಗಡೆಯಾದ ಮೇಲೆ ನಿವಾಸಿಗೆ ಅವನು ಅವನ ಸ್ವಸ್ಥಳವನ್ನು ತಲುಪಿದಾಗ ಸಹಾಯ, ಮಾರ್ಗದರ್ಶನಕ್ಕಾಗಿ ಅವನಲ್ಲಿಗೆ ಹೋಗುವ ನಿರ್ದೇಶನದೊಂದಿಗೆ ಪರಿವೀಕ್ಷಣಾ ಅಧಿಕಾರಿಗೆ ಬರೆದ ಪತ್ರವನ್ನು ಒದಗಿಸತಕ್ಕದ್ದು.

**51. ಜಿಲ್ಲಾ ಪರಿವೀಕ್ಷಣಾಧಿಕಾರಿಯ ಕರ್ತವ್ಯಗಳು:–** ಜಿಲ್ಲಾ ಪರಿವೀಕ್ಷಣಾಧಿಕಾರಿಯು –

(i) ಬೋರ್ಸ್ಟಲ್ ಶಾಲೆಯಿಂದ ವಿಮೋಚನೆಗೊಂಡ ಪ್ರತಿಯೊಬ್ಬ ನಿವಾಸಿಯ ಬಗ್ಗೆ ಒಂದು ವರ್ಷದ ಅವಧಿಯವರೆಗೆ ಮೇಲ್ವಿಚಾರಣೆ ನಡೆಸತಕ್ಕದ್ದು.

(ii) ಬೋರ್ಸ್ಟಲ್ ಶಾಲೆಯಿಂದ ವಿಮೋಚನೆಗೊಂಡ ಪ್ರತಿಯೊಬ್ಬ ನಿವಾಸಿಯನ್ನು ಸಂದರ್ಶಿಸತಕ್ಕದ್ದು ಮತ್ತು ಅಂಥ ನಿವಾಸಿಗೆ ಸಲಹೆ ನೀಡಲು ಮತ್ತು ನೆರವಾಗಲು ಮುಕ್ತ ಮಧ್ಯಂತರಗಳಲ್ಲಿ ಅವನನ್ನು ಬರಮಾಡಿಕೊಳ್ಳತಕ್ಕದ್ದು.

(iii) ಬೋರ್ಸ್ಟಲ್ ಶಾಲೆಯಿಂದ ವಿಮೋಚನೆಗೊಂಡ ಪ್ರತಿಯೊಬ್ಬ ನಿವಾಸಿಗೆ ಶಾಲೆಯಲ್ಲಿ ಅವನಿಗೆ ಕೊಟ್ಟ ತರಬೇತಿಯ ಒಳ್ಳೆಯ ಉಪಯೋಗವನ್ನು ಮಾಡಿಕೊಳ್ಳಲು ಸಹಾಯ ಮಾಡತಕ್ಕದ್ದು ಮತ್ತು ಅವಶ್ಯವಿದ್ದಾಗಲೆಲ್ಲ ಅವನಿಗೆ ಸೂಕ್ತ ಉದ್ಯೋಗವನ್ನು ದೊರಕಿಸಿಕೊಡಲು ಪ್ರಯತ್ನಿಸತಕ್ಕದ್ದು.

(iv) ಬೋರ್ಸ್ಟಲ್ ಶಾಲೆಯಿಂದ ವಿಮೋಚನೆಗೊಂಡ ತರುವಾಯ ಒಂದು ವರ್ಷದ ಅವಧಿಯಲ್ಲಿ ಅಂಥ ನಿವಾಸಿಯ ಪ್ರಗತಿ ಮತ್ತು ನಡವಳಿಕೆಯ ಬಗ್ಗೆ ಶಾಲೆಯ ಸೂಪರಿಂಟೆಂಡೆಂಟನಿಗೆ ಮತ್ತು ಇನ್ಸ್‌ಪೆಕ್ಟರ್ ಜನರಲ್ಲನಿಗೆ ತ್ರೈಮಾಸಿಕ ವರದಿಗಳನ್ನು ಕಳುಹಿಸತಕ್ಕದ್ದು.

(v) ಶಾಲೆಯ ಸೂಪರಿಂಟೆಂಡೆಂಟನಿಗೆ ಮತ್ತು ಇನ್ಸ್‌ಪೆಕ್ಟರ್ ಜನರಲ್ಲನಿಗೆ ಲೈಸೆನ್ಸ್‌ನ ಅವಧಿಯ ಮುಕ್ತಾಯವಾಗುವವರೆಗೆ ಲೈಸೆನ್ಸಿನ ಮೇಲೆ ಬಿಡುಗಡೆ ಮಾಡಿದ ನಿವಾಸಿಗಳ ಬಗ್ಗೆ ಮಾಸಿಕ ವರದಿಯನ್ನು ಮತ್ತು ಆ ತರುವಾಯ, ಬೋರ್ಸ್ಟಲ್ ಶಾಲೆಯಿಂದ ವಿಮೋಚನೆಗೊಂಡ ನಿವಾಸಿಗಳ ಸಂದರ್ಭದಲ್ಲಿದ್ದಂತೆ ಒಂದೇ ವರ್ಷಕ್ಕಾಗಿ ತ್ರೈಮಾಸಿಕ ವರದಿಗಳನ್ನು ಕಳುಹಿಸತಕ್ಕದ್ದು.

**52. ಲೈಸೆನ್ಸುಗಳ ರಿಜಿಸ್ಟರು:** ಸೂಪರಿಂಟೆಂಡೆಂಟನು ಲೈಸೆನ್ಸುಗಳ ರಿಜಿಸ್ಟರನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ಅವುಗಳನ್ನು ಕನಿಷ್ಠಪಕ್ಷ ಪ್ರತಿ ಮೂರು ತಿಂಗಳಿಗೊಮ್ಮೆ ಸಂದರ್ಶಕ ಸಮಿತಿಯ ಮುಂದೆ ಇಡತಕ್ಕದ್ದು.

**53. ಬಟ್ಟೆಬರೆ ಮತ್ತು ಹಾಸಿಗೆ :** (1) ಶಾಲೆಗೆ ಸೇರಿಕೊಂಡ ಮೇಲೆ ಪ್ರತಿಯೊಬ್ಬ ನಿವಾಸಿಗೆ ಎರಡು ಸೂಟುಗಳನ್ನು ಒಂದು ಹೊಸದು ಮತ್ತು ಲಭ್ಯವಿದ್ದರೆ ಇನ್ನೊಂದು ಭಾಗಶಃ ಉಪಯೋಗಿಸಿದ್ದು ಒದಗಿಸತಕ್ಕದ್ದು. ಒಬ್ಬ ನಿವಾಸಿಯು ಧರಿಸಲಾಗಿರುವಂಥ ಬಟ್ಟೆಬರೆಯ ಯಾವುದೇ ವಸ್ತುವನ್ನು ಅದನ್ನು ಸ್ವಚ್ಛಗೊಳಿಸಲಾಗಿದ್ದು ಮತ್ತು ಸೋಂಕು ನಾಶಗೊಳಿಸಲಾಗಿದ್ದ ಹೊರತು ಇನ್ನೊಬ್ಬನಿಗೆ ಕೊಡತಕ್ಕದ್ದಲ್ಲ.

(2) ಮೇಲೆ ಹೇಳಿರುವುದರ ಜೊತೆಗೆ ಸೇರಿಸಿಕೊಂಡ ಮೇಲೆ ಪ್ರತಿಯೊಬ್ಬ ನಿವಾಸಿಗೆ ಹೊಸದಾದುದೇ ಆಗಲಿ ಅಥವಾ ಭಾಗಶಃ ಧರಿಸಿದ್ದುದ್ದೇ ಆಗಿರುವಂಥ ಬಣ್ಣದ ಕ್ರೀಡಾ ಉಡುಪನ್ನು ಒದಗಿಸತಕ್ಕದ್ದು. ಅಂಥ ಸೂಟನ್ನು ಧರಿಸುವ ಅವಧಿಯು ಎರಡು ವರ್ಷಗಳಾಗಿರುತ್ತದೆ.

(3) ಶಾಲೆಯ ಬ್ಯಾಂಡ್‌ಸೆಟ್ಟಿನಲ್ಲಿರುವ ಪ್ರತಿಯೊಬ್ಬ ನಿವಾಸಿಗೆ ಈ ಕೆಳಕಂಡ ಸಮವಸ್ತ್ರವನ್ನು ಒದಗಿಸತಕ್ಕದ್ದು, ಎಂದರೆ :

(i) ಬಿಳಿ ಕೋಟು,

(ii) ಉದ್ದವಾದ ಷರಾಯಿ,

(iii) ಬಣ್ಣದ ಪಟ್ಟಿಗಳು ಮತ್ತು ಅಲಂಕಾರಗಳೊಂದಿಗೆ ಟೋಪಿ ಮತ್ತು ಹಸಿರು ಕಾಲರ್ ಮತ್ತು

(iv) ಪಾದ ರಕ್ಷೆ

ಅಂಥ ಸಮವಸ್ತ್ರವನ್ನು ಧರಿಸಬೇಕಾದ ಅವಧಿಯು ಎರಡು ವರ್ಷಗಳಾಗಿರತಕ್ಕದ್ದು.

(4) ಸಾಮಾನ್ಯ ದರ್ಜೆಯಲ್ಲಿ ಮತ್ತು ನಕ್ಷತ್ರ ದರ್ಜೆಯಲ್ಲಿನ ನಿವಾಸಿಗಳ ಬಟ್ಟೆಬರೆಗಳನ್ನು ಜೈಲಿನಲ್ಲಿ ತಯಾರಿಸಿದ ಬಿಳಿಯ ಬಟ್ಟೆಯಿಂದ ಮಾಡಿರತಕ್ಕದ್ದು, ವಿಶೇಷ ನಕ್ಷತ್ರ ದರ್ಜೆಯಲ್ಲಿನ ನಿವಾಸಿಗಳದ್ದು ಖಾಕಿ ಡ್ರಿಲ್ ಬಟ್ಟೆಯಿಂದ ಹೊಲಿಸತಕ್ಕದ್ದು.

**54. ಬಟ್ಟೆಬರೆಗಳ ಮತ್ತು ಹಾಸಿಗೆಯ ಶ್ರೇಣಿ :** ನಿವಾಸಿಗಳ ಬಟ್ಟೆಬರೆಗಳು ಮತ್ತು ಹಾಸಿಗೆಯು ಈ ಕೆಳಕಂಡ ಕೋಷ್ಠಕದಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು, ನವೀಕರಣದ ಅವಧಿಯನ್ನೂ ಸಹ ಕೊನೆಯ ಅಂಕಣದಲ್ಲಿ ಕೊಡಲಾಗಿದೆ.

| ಕ್ರಮ ಸಂಖ್ಯೆ | ವಸ್ತುವಿನ ಹೆಸರು | ಸಂಖ್ಯೆ | ನವೀಕರಣದ ಅವಧಿ |
|---|---|---|---|
| 1. | ಬಿಳಿಯ ಅಬ್ಲಾಂಗ್ ಟೋಪಿಗಳು | 2 | |
| 2. | ತೆರೆದ ಕಾಲರು ಮತ್ತು ಮುಂಭಾಗದಲ್ಲಿ ಮೂರು ಗುಂಡಿಗಳನ್ನು ಮತ್ತು ಎದೆಯ ಎಡಭಾಗದಲ್ಲಿ ಒಂದು ಜೇಬನ್ನು ಹೊಂದಿರುವ ತಿಳಿ ಆಕಾಶನೀಲಿ ಬಣ್ಣದ ಅರ್ಧದ ತೋಳಿದ ಷರ್ಟುಗಳು | 2 | |
| 3. | ಕಡು ನೀಲಿ ಡ್ರಿಲ್ ಷರ್ಟುಗಳು | 2 | ಒಂದು ವರ್ಷ |
| 4. | ಬಿಳಿಯ ಪೈಜಾಜಾ | 2 | |
| 5. | ಸಾದಾ ಬೂದು ಬಣ್ಣದ ಹತ್ತಿಯ ಬಿಳಿಯ ಟವಲ್ 4 x2 (122 ಸೆಂ. x 61 ಸೆಂ.ಮೀ). | 2 | |
| 6. | ಸಾಮಾನ್ಯವಾದ ಕಂಬಳಿ (198 ಸೆಂ. ಮೀ x 100 ಸೆಂ.ಮೀ.) | 1 | ಎರಡು ವರ್ಷಗಳು |
| 7. | ಹತ್ತಿಯ ಜಮಖಾನೆ (198 ಸೆಂ. x 100 ಸೆಂ.ಮೀ.) | 1 | ಮೂರು ವರ್ಷಗಳು |
| 8. | ಬಾಚಣಿಗೆ | 1 | ಆರು ತಿಂಗಳುಗಳಿಗೆ ಒಂದು |
| | ಊಟ ಮಾಡಲು ಮತ್ತು ಕುಡಿಯಲು ಪಾತ್ರೆಗಳು | | |
| 1. | ಅಲ್ಯೂಮಿನಿಯಂ ತಟ್ಟೆ | 1 | |
| 2. | ಅಲ್ಯೂಮಿನಿಯಂ ಮೊಗೆ | 1 | ಒಂದು ವರ್ಷ |
| 3. | ಅಲ್ಯೂಮಿನಿಯಂ ಕೋಟೋರ | 1 | |

2. ನಿವಾಸಿಗಳು ಅವರ ಖರ್ಚಿನಲ್ಲಿ ಒಳಚಡ್ಡಿ ಮತ್ತು ಬನಿಯನ್‌ಗಳನ್ನು ಧರಿಸಲು ಅವಕಾಶ ಕೊಡಬಹುದು.

3. ನಕ್ಷತ್ರ ದರ್ಜೆಯ ಮತ್ತು ವಿಶೇಷ ನಕ್ಷತ್ರ ದರ್ಜೆಯ ನಿವಾಸಿಗಳು ಅರ್ಧ ತೋಳಿನ ಷರ್ಟಿನ ಎದೆಯ ಎಡಭಾಗದಲ್ಲಿ ಅನುಕ್ರಮವಾಗಿ ಒಂದು ಮತ್ತು ಎರಡು ಹಿತ್ತಾಳೆ ನಕ್ಷತ್ರಗಳನ್ನು ಧರಿಸಬೇಕು.

4. ನಿವಾಸಿಯು ಯಾವ ಗೃಹಕ್ಕೆ ಸೇರಿರುತ್ತಾನೆಯೋ ಆ ಗೃಹದ ಮೊದಲಿನ ಅಕ್ಷರವನ್ನು ಷರ್ಟಿನ ಮೇಲೆ ಮುಂಭಾಗದಲ್ಲಿ ಹಾಕಬಹುದು.

5. ಮೇಲ್ವಿಚಾರಕನು, ಅರ್ಧ ತೋಳಿನ ಷರ್ಟಿನ ಎಡಗೈ ಭಾಗದ ಮೇಲೆ V ಆಕಾರದ ಎರಡು ತೆರಪಚ್ಚುಗಳನ್ನು ಹೊಂದಿರತಕ್ಕದ್ದು.

**55. ರಜಾದಿವಸಗಳು :** ಶಾಲೆಯು ಎಲ್ಲಾ ಭಾನುವಾರಗಳನ್ನು ಮತ್ತು ಈ ಕೆಳಕಂಡವುಗಳನ್ನು ಸಾರ್ವತ್ರಿಕ ರಜಾ ದಿವಸಗಳೆಂದು ಆಚರಿಸತಕ್ಕದ್ದು ; ಎಂದರೆ

(i) ಹೊಸ ವರ್ಷದ ದಿನ

(ii) ಗಣರಾಜ್ಯ ದಿನ

(iii) ಮಹಾ ಶಿವರಾತ್ರಿ

(iv) ಚಂದ್ರಮಾನ ಹೊಸ ವರ್ಷದ ದಿನ

(v) ಸ್ವಾತಂತ್ರ್ಯ ದಿನ

(vi) ಗಣೇಶ ಚತುರ್ಥಿ

(vii) ಗಾಂಧಿ ಜಯಂತಿ

(viii) ಮಹಾಲಯ ಅಮಾವಾಸ್ಯೆ

(ix) ಆಯುಧ ಪೂಜೆ

(x) ಮೊಹರಂ ಕಡೆ ದಿನ

(xi) ಕ್ರಿಸ್‌ಮಸ್

(xii) ದೀಪಾವಳಿ

(xiii) ಗೋಕುಲಾಷ್ಟಮಿ

(xiv) ರಂಜಾನ್ ಈದ್

(xv) ಬಕ್ರೀದ್

**56. ಕ್ಯಾಂಟೀನ್ :** ಪ್ರತಿಯೊಂದು ಶಾಲೆಯು ನಿವಾಸಿಗಳ ಪ್ರಯೋಜನಕ್ಕಾಗಿ ಸೂಪರಿಂಟೆಂಡೆಂಟನ ಸಾಮಾನ್ಯ ಮೇಲ್ವಿಚಾರಣೆಯಲ್ಲಿ ಒಂದು ಕ್ಯಾಂಟೀನನ್ನು ಹೊಂದಿರತಕ್ಕದ್ದು. ಅದನ್ನು

ಸೂಪರಿಂಟೆಂಡೆಂಟನು ನಿರ್ದೇಶಿಸಬಹುದಾದಂಥ ವೇಳೆಗಳಲ್ಲಿ ತೆರೆದಿರತಕ್ಕದ್ದು. ಕ್ಯಾಂಟೀನು ನಿವಾಸಿಗಳು ಸಾಮಾನ್ಯವಾಗಿ ಬೇಡುವ ಲೇಖನ ಸಾಮಗ್ರಿ ಮತ್ತು ಪ್ರಸಾಧನ ವಸ್ತುಗಳಲ್ಲಿ ವ್ಯವಹರಿಸತಕ್ಕದ್ದು.

**57. ಅಂಕಿಅಂಶಗಳು ಮತ್ತು ವಿವರ ಪಟ್ಟಿಕೆಗಳು.–** (1) ಸೂಪರಿಂಟೆಂಡೆಂಟನು ದಾಖಲೆಗಳು ಮತ್ತು ರಿಜಿಸ್ಟರುಗಳನ್ನು ಇಟ್ಟುಕೊಂಡು ಬರುವುದು ಮತ್ತು ಇನ್ಸ್‌ಪೆಕ್ಟರ್ ಜನರಲ್ಲನು ಕಾಲಕಾಲಕ್ಕೆ ನಿರ್ದೇಶಿಸಬಹುದಾದಂಥ ವರದಿಗಳು ಮತ್ತು ವಿವರ ಪಟ್ಟಿಕೆಗಳನ್ನು ಸಿದ್ಧಪಡಿಸುವುದು ಮತ್ತು ಸಲ್ಲಿಸುವುದು ಇವುಗಳಿಗಾಗಿ ಜವಾಬ್ದಾರನಾಗಿರತಕ್ಕದ್ದು.

(2) ಅವನು ಇನ್ಸ್‌ಪೆಕ್ಟರ್ ಜನರಲ್ಲನು ನಿರ್ದೇಶಿಸಬಹುದಾದಂಥ ನಮೂನೆಯಲ್ಲಿ, ಪ್ರತಿವರ್ಷ ಜುಲೈ 31ನ್ನು ಮೀರದ ಹಾಗೆ, ಹಿಂದಿನ ವರ್ಷದ ಶಾಲೆಯ ಆಡಳಿತದ ಬಗ್ಗೆ ವರದಿಯನ್ನು ಅವನಿಗೆ ಸಲ್ಲಿಸತಕ್ಕದ್ದು.

**58. ನಿವಾಸಿಯ ಮರಣ/ ಕಾಯಿಲೆಯ ಬಗ್ಗೆ ವರದಿ ಮತ್ತು ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು.–** (1) ಶಾಲೆಯ ವೈದ್ಯಾಧಿಕಾರಿಯು, ಯಾವನೇ ನಿವಾಸಿಯ ಮರಣದ ದಾಖಲೆಯನ್ನು ಇಡತಕ್ಕದ್ದು; ಅದು ಮೃತನಿಗೆ ಕಾಯಿಲೆ ಹಿಡಿದ ಕಾಲ, ಅವನ ಕಾಯಿಲೆಯನ್ನು ಯಾವಾಗ ಮೊದಲು ಗುರುತಿಸಿದ್ದು, ಆ ಕಾಯಿಲೆಯ ಸ್ವರೂಪ, ಮರಣದ ಕಾಲ ಮತ್ತು ಮೃತನಿಗೆ ನೀಡಲಾದ ಶುಶ್ರೂಷೆ ಇವುಗಳಿಗೆ ಸಂಬಂಧಪಟ್ಟಂತೆ ವಿವರಗಳನ್ನು ಒಳಗೊಂಡಿರತಕ್ಕದ್ದು.

2) ಸೂಪರಿಂಟೆಂಡೆಂಟನು, ಯಾವನೇ ನಿವಾಸಿಯ ಮರಣದ ಬಗೆಗಿನ ವರದಿಯನ್ನು ಕೂಡಲೇ ಇನ್ಸ್‌ಪೆಕ್ಟರ್ ಜನರಲ್ಲನಿಗೆ ಕಳುಹಿಸಿಕೊಡತಕ್ಕದ್ದು.

**59. ನಿವಾಸಿಗಳ ಆಹಾರ.–** ಈ ಕೆಳಕಂಡ ಶ್ರೇಣಿ ಮತ್ತು ಸೂಚನೆಗಳಿಗೆ ಅನುಸಾರವಾಗಿ ನಿವಾಸಿಗಳು ಆಹಾರವನ್ನು ಹೊಂದಿರತಕ್ಕದ್ದು.

| ವಸ್ತುಗಳ ಹೆಸರು | ಸಸ್ಯಹಾರಿಗೆ | ಪ್ರತಿ ದಿವಸಕ್ಕೆ | ಮಾಂಸಾಹಾರಿಗೆ | ಪ್ರತಿ ದಿವಸಕ್ಕೆ |
|---|---|---|---|---|
| ಅಕ್ಕಿ | 12 ಔನ್ಸ್ | 340 ಗ್ರಾಂಗಳು | 12 ಔನ್ಸ್ | 340 ಗ್ರಾಂಗಳು |
| ಗೋಧಿ ಅಥವಾ ಜೋಳ ಅಥವಾ ರಾಗಿ ಅಥವಾ ಕ್ಲಾಂಬು | 12 ,, | 340 ,, | 12 ,, | 340 ,, |
| ಬೇಳೆ | 3 ,, | 85 ,, | 3 ,, | 85 ,, |
| * ಕಡಲೇಕಾಯಿ | 1 ,, | 28 ,, | 1 ,, | 28 ,, |
| * ಬೆಲ್ಲ | 1/2 ,, | 14 ,, | 1/2 ,, | 14 ,, |

| | | | | |
|---|---|---|---|---|
| ** ಮಾಂಸ | – | – | 12 ,, | 340 ,, |
| ತುಪ್ಪ | 1/2 ,, | 14 ,, | 1/2 ,, | 14 ,, |
| ಈರುಳ್ಳಿ | 1/2 ,, | 14 ,, | 1/2 ,, | 14 ,, |
| ಹುಣಸೆ ಹಣ್ಣು | 1/2 ,, | 14 ,, | 1/2 ,, | 14 ,, |
| ಸಾಂಬಾರು ಪುಡಿ | 1/2 ,, | 7 ,, | 1/2 ,, | 7 ,, |
| ಉಪ್ಪು | 1 ,, | 28 ,, | 1 ,, | 28 ,, |
| ತರಕಾರಿ | 8 ,, | 228 ,, | 8 ,, | 228 ,, |
| ಬೆಳ್ಳುಳ್ಳಿ | 1/32 ,, | 8 ,, | 1/32 ,, | 8 ,, |
| ಎಣ್ಣೆ | 3/4 ,, | 21 ,, | 3/4 ,, | 21 ,, |
| ಹಾಲು (ಮಜ್ಜಿಗೆಗಾಗಿ) | 5–5/7 ,, | 160 ,, | 2–6/7 ,, | 80 ,, |
| ನಿಂಬೆಹಣ್ಣು | 1/2 ಹೋಳು | | 1/2 ಹೋಳು | |
| ಉರುವಲು | 2 ಪೌಂಡು | 908 ,, | 2 ಪೌಂಡು | 908 ,, |

* ಕಡಲೆಕಾಯಿ ಮತ್ತು ಬೆಲ್ಲ ವಾರಕ್ಕೆ ಎರಡು ಬಾರಿ

** ಮಾಂಸ ವಾರಕ್ಕೆರಡು ಬಾರಿ

**ಆಹಾರದ ವಿತರಣೆ**

ಸಸ್ಯಾಹಾರಿಗಳು ಮತ್ತು ಮಾಂಸಹಾರಿಗಳಿಗಾಗಿ

ಬೆಳಗಿನ ಗಂಜಿ 2 ಔನ್ಸ್, ರಾಗಿ ಅಥವಾ ಗೋಧಿ ಅಥವಾ ಜೋಳ ಅಥವಾ ಕಾಂಬು

ಮಧ್ಯಾಹ್ನದ ಊಟ – ಅನ್ನ 2 ಔನ್ಸ್, ಕಾಂಬು ಅಥವಾ ಜೋಳ ಅಥವಾ ಗೋಧಿ ಅಥವಾ ರಾಗಿ 10 ಔನ್ಸ್

ರಾತ್ರಿ ಊಟ – ಅನ್ನ 10 ಔನ್ಸ್

1) ಎಲ್ಲಾ ವರ್ಗಗಳಿಗಾಗಿ ಅನುಮತಿಸಿರುವ ಗರಿಷ್ಠ ಇಂಧನ 2 ಪೌಂಡು ಅಥವಾ 908 ಗ್ರಾಂಗಳು

2) ಈ ಕೆಳಕಂಡಂತೆ ವಿಧವಿಧವಾದ ಬೇಳೆಗಳನ್ನು ಪ್ರತ್ಯೇಕವಾಗಿ ಕೊಡಬಹುದು.

ಬೆಳೆಯ ಅರ್ಧದಷ್ಟು ಪ್ರಮಾಣವನ್ನು ಪ್ರತಿದಿನವೂ ತೊಗರಿ ಬೇಳೆಯ ರೂಪದಲ್ಲಿ ಕೊಡಬಹುದು ಮತ್ತು ಇತರ ಅರ್ಧ ಭಾಗವನ್ನು ಸರದಿಯ ಮೇಲೆ ಹೆಸರು ಬೇಳೆ ಅಥವಾ ಕಡಲೆಬೇಳೆ ಅಥವಾ ಹಲಸಂದೆ ಅಥವಾ ಅವರೆ ಬೇಳೆಯ ರೂಪದಲ್ಲಿ ಕೊಡಬಹುದು. ಚನ್ನಂಗಿ ಬೇಳೆ ಅಥವಾ ಮಸೂರು ಬೇಳೆಯ ಬಳಕೆಯನ್ನು ನಿಷೇಧಿಸಲಾಗಿದೆ.

3) ಋತುಮಾನಕ್ಕನುಸಾರವಾದ ತರಕಾರಿಗಳನ್ನು ಕೊಡಬಹುದು ಮತ್ತು ಕನಿಷ್ಠ ಪಕ್ಷ ಶೇಕಡಾ ಇಪ್ಪತ್ತೈದರಷ್ಟು ಪ್ರಮಾಣದ ಸೊಪ್ಪು ತರಕಾರಿಯನ್ನು ಕೊಡತಕ್ಕದ್ದು. ವಾರಕ್ಕೊಮ್ಮೆ ತರಕಾರಿಯ ಅರ್ಧದಷ್ಟು ಪ್ರಮಾಣವನ್ನು ಆಲೂಗಡ್ಡೆಯ ರೂಪದಲ್ಲಿ ಕೊಡಬಹುದು.

4) ಮೊಸರು ತಯಾರಿಸುವುದಕ್ಕಾಗಿ ಮತ್ತು ರಾತ್ರಿಯ ಊಟದೊಂದಿಗೆ ಮಜ್ಜಿಗೆಯನ್ನು ಕೊಡುವುದಕ್ಕಾಗಿ ಹಾಲನ್ನು ಉಪಯೋಗಿಸತಕ್ಕದ್ದು.

5) ನಿವಾಸಿಗಳಿಗೆ ತಲೆಗೆ ಹಚ್ಚಿಕೊಳ್ಳುವುದಕ್ಕಾಗಿ ವಾರಕ್ಕೊಮ್ಮೆ ಎರಡು ಔನ್ಸ್ ಅಥವಾ 57 ಗ್ರಾಂ ಕೊಬ್ಬರಿ ಎಣ್ಣೆಯನ್ನು ಮತ್ತು ಬಟ್ಟೆ ಒಗೆಯುವುದಕ್ಕಾಗಿ 2 ಔನ್ಸ್ ಅಥವಾ 57 ಗ್ರಾಂ ಸಾಬೂನನ್ನು ಕೊಡತಕ್ಕದ್ದು.

6) ನಿವಾಸಿಗಳಿಗೆ ವಾರಕ್ಕೊಮ್ಮೆ ಸ್ನಾನಕ್ಕಾಗಿ ಬಿಸಿ ನೀರನ್ನು ಒದಗಿಸಲು ಪ್ರತಿಯೊಬ್ಬ ನಿವಾಸಿಗೆ 908 ಗ್ರಾಂಗಳಷ್ಟು ಇಂಧನವನ್ನು ಕೊಡಬಹುದು.

**60. ಲೈಸೆನ್ಸಿನ ನಮೂನೆ.–** 15ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗಿನ ಬರಹದಲ್ಲಿನ ಲೈಸೆನ್ಸು ಅದರ ಷರತ್ತುಗಳೊಂದಿಗೆ ನಮೂನೆ V ರಲ್ಲಿರತಕ್ಕದ್ದು.

**61. ನಿರಸನ ಮತ್ತು ಉಳಿಸುವಿಕೆಗಳು.–** 32ನೇ ಪ್ರಕರಣದ ಮೂಲಕ ನಿರಸಿತವಾದ ಯಾವುದೇ ಅಧಿನಿಯಮಿತಿಯ ಮೇರೆಗೆ ರಚಿಸಿದ ಹಿಂದೆ ಹೇಳಿದ ನಿಯಮಗಳಿಗೆ ಸಂವಾದಿಯಾದ ಎಲ್ಲಾ ನಿಯಮಗಳನ್ನು ಈ ಮೂಲಕ ನಿರಸನಗೊಳಿಸಿದೆ.

ಪರಂತು, ಆ ನಿರಸನವು.–

(ಕ) ಹಾಗೆ ನಿರಸಿತವಾದ ನಿಯಮಗಳ ಪೂರ್ವಪ್ರವರ್ತನೆ ಅಥವಾ ಅದರ ಮೇರೆಗೆ ಕ್ರಮಬದ್ಧವಾಗಿ ಮಾಡಲಾದ ಅಥವಾ ಮಾಡಲು ಎಡೆಗೊಟ್ಟ ಯಾವುದೇ ಕಾರ್ಯ;

(ಖ) ಹಾಗೆ ನಿರಸಿತವಾದ ಯಾವುದೇ ನಿಯಮಗಳ ಮೇರೆಗೆ ಆರ್ಜಿಸಿದ, ಒದಗಿಬಂದ ಅಥವಾ ಗುರಿಯಾದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆ ; ಅಥವಾ

(ಗ) ಹಾಗೆ ನಿರಸಿತವಾದ ಯಾವುದೇ ನಿಯಮದ ವಿರುದ್ಧ ಮಾಡಿದ ಯಾವುವೇ ಅಪರಾಧಗಳಿಗೆ ಸಂಬಂಧಪಟ್ಟಂತೆ ಗುರಿಯಾದ ಯಾವುದೇ ದಂಡ, ಮುಟ್ಟುಗೋಲು ಅಥವಾ ದಂಡನೆ, ಅಥವಾ

(ಘ) ಹಿಂದೆ ಹೇಳಿದ ಯಾವುದೇ ಅಂಥ ಹಕ್ಕು, ವಿಶೇಷಾಧಿಕಾರಿ, ಬಾಧ್ಯತೆ, ಹೊಣೆಗಾರಿಕೆ, ದಂಡ, ಮುಟ್ಟುಗೋಲು ಅಥವಾ ದಂಡನೆಗೆ ಸಂಬಂಧಿಸಿದಂತೆ ಯಾವುದೇ ತನಿಖೆ ಅಥವಾ ಕಾನೂನು ವ್ಯವಹರಣೆಗಳು ಅಥವಾ ಪರಿಹಾರೋಪಾಯ ಮತ್ತು ಅಂಥ ನಿಯಮಗಳನ್ನು ನಿರಸನಗೊಳಿಸದಿದ್ದರೆ ಹೇಗೋ ಹಾಗೆ ಯಾವುದೇ ಅಂಥ ತನಿಖೆ, ಕಾನೂನು ವ್ಯವಹರಣೆಗಳು ಅಥವಾ ಪರಿಹಾರೋಪಾಯವನ್ನು ಹೂಡಬಹುದು, ಮುಂದುವರೆಸಬಹುದು ಅಥವಾ ಜಾರಿಗೊಳಿಸಬಹುದು ಮತ್ತು ಯಾವುದೇ ಅಂಥ ದಂಡ ಮುಟ್ಟುಗೋಲು ಅಥವಾ ದಂಡನೆಯನ್ನು ವಿಧಿಸಬಹುದು:

ಮತ್ತೂ ಪರಂತೂ, ಹಿಂದಿನ ಪರಂತುಕಕ್ಕೆ ಒಳಪಟ್ಟು ಅಂಥ ಯಾವುದೇ ನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು (ಯಾವುದೇ ನೇಮಕಾತಿ ಅಥವಾ ಮಾಡಿದ ಪ್ರತ್ಯಾಯೋಜನೆ, ಹೊರಡಿಸಿದ ಅಧಿಸೂಚನೆ, ಆದೇಶ, ಅನುದೇಶಗಳನ್ನು ಅಥವಾ ನಿರ್ದೇಶನಗಳು ಪಡೆದುಕೊಂಡ ನಮೂನೆಗಳು, ಪ್ರಮಾಣಪತ್ರಗಳು, ಮಂಜೂರು ಮಾಡಿದ ಪರ್ಮಿಟ್ಟು ಅಥವಾ ಪಾಸು ಅಥವಾ ಲೈಸೆನ್ಸ್ ಅಥವಾ ಮಾಡಿದ ನೋಂದಣಿ ಇವುಗಳನ್ನು ಒಳಗೊಂಡು ಈ ನಿಯಮಗಳ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾದುದು ಅಥವಾ ಕೈಗೊಳ್ಳಲಾದುದು ಎಂದು ಭಾವಿಸತಕ್ಕದ್ದು ಮತ್ತು ಅವುಗಳನ್ನು ಸಂದರ್ಭಾನುಸಾರ ಅಧಿನಿಯಮ ಅಥವಾ ಈ ನಿಯಮಗಳ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮದ ಮೂಲಕ ರದ್ದುಗೊಳಿಸುವವರೆಗೆ ತದನುಸಾರವಾಗಿ ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು.

**ನಮೂನೆ – I**

**ಬೋರ್ಸ್ಟಲ್ ಶಾಲೆಯ ವೈಯಕ್ತಿಕ ದಾಖಲೆ ಮತ್ತು ತನಿಖಾ ನಮೂನೆ**

**(7ನೇ ನಿಯಮವನ್ನು ನೋಡಿ)**

1. ವೈಯಕ್ತಿಕ ವಿವರಗಳು

   (ಕ) ಎರಡನೇ ಹೆಸರಿನೊಂದಿಗೆ ಹೆಸರು

   (ಖ) ವಯಸ್ಸು, ಲಿಂಗ, ರಾಷ್ಟ್ರೀಯತೆ

   (ಗ) ವಾಸಸ್ಥಳ

   (ಘ) ನೋಂದಣಿ ಸಂಖ್ಯೆ

2. ಶಿಕ್ಷೆ

   (ಕ) ಅಪರಾಧ

   (ಖ) ತೀರ್ಪಿನ ದಿನಾಂಕ

   (ಗ) ಬಂಧನದ ಅವಧಿ

   (ಘ) ಬಂಧಿಸಿರುವ ನ್ಯಾಯಾಲಯದ ಹೆಸರು

3. ವಾರೆಂಟ್‌ನ ಪ್ರಕಾರ ವಯಸ್ಸು

4. ಹಿಂದಿನ ದಾಖಲೆ

   (ಕ) ಹಿಂದಿನ ನಿರ್ಣೀತ ಅಪರಾಧ ಯಾವುದಾದರೂ ಇದ್ದರೆ ಅದರ ಸಂಖ್ಯೆ

   (ಖ) ಹಿಂದಿನ ಸಾಂಸ್ಥಿಕ ಶುಶ್ರೂಷೆಯ ವಿವರಗಳು

   (ಗ) ಯಾವ ಅವಧಿಯವರೆಗೆ ಪಡೆದದ್ದು

   (ಘ) ಬಿಡುಗಡೆಯ ದಿನಾಂಕ

5. ಕುಟುಂಬದ ಸ್ಥಿತಿಗತಿಗಳು

   (ಕ) ಪಾಲಕನ ಹೆಸರು ಮತ್ತು ವಿಳಾಸ

   (ಖ) ಸ್ವಸ್ಥಳವನ್ನು ಬಿಡಲು ಕಾರಣ ಮತ್ತು ಅದರ ದಿನಾಂಕ

(ಗ) ವಿವಾಹಿತನಾಗಿದ್ದರೆ ಹೆಸರು, ವಯಸ್ಸು, ವಿಳಾಸದ ಗುರುತು,

6. ಹೌಸ್ ಮಾಸ್ಟರನ ವರದಿ (ಬೋಧಕ ಮತ್ತು ಶಿಕ್ಷಕನ ಸಮಾಲೋಚನೆಯೊಡನೆ)

(ಕ) ನಡತೆ ಮತ್ತು ವರ್ತನೆಯ ಯಾವುದೇ ವಿಶೇಷ ಲಕ್ಷಣ

(ಖ) ಶಾಲಾ ಮಟ್ಟದಲ್ಲಿ ಪಡೆದ ಪ್ರಾವೀಣ್ಯತೆ

(ಗ) ವೃತ್ತಿಯಲ್ಲಿನ ಪ್ರಾವೀಣ್ಯತೆ

(ಘ) ಆಟಗಳಲ್ಲಿನ ಪ್ರಾವೀಣ್ಯತೆ

ದಿನಾಂಕ ರುಜು

7. ಆರೋಗ್ಯ ಮತ್ತು ಮಾನಸಿಕ ಸ್ಥಿತಿಯ ಬಗ್ಗೆ ವೈದ್ಯಾಧಿಕಾರಿಯ ವರದಿ

ದಿನಾಂಕ ರುಜು

8. ಸಂದರ್ಶಕ ಸಮಿತಿಯ ಅಭಿಪ್ರಾಯ

ದಿನಾಂಕ ರುಜು

**ನಮೂನೆ – II**

**(29 (6)ನೇ ನಿಯಮವನ್ನು ನೋಡಿ)**

**ಬಿಡುಗಡೆಯ ಸಂದರ್ಭದಲ್ಲಿ ಪ್ರಮಾಣ ಪತ್ರ**

.................................................................................................. ನಿವಾಸಿ ಸಂಖ್ಯೆಯನ್ನು ಹೊಂದಿದ್ದ ..................... ........................... ಎಂಬ ಹೆಸರಿನವನನ್ನು ................................ ಶಿಕ್ಷಣ ಮಟ್ಟದ ತರುವಾಯ ..................................... ................... ರಂದು ಈ ಶಾಲೆಯಿಂದ ಬಿಡುಗಡೆ ಮಾಡಲಾಗಿದೆ ಎಂದು ನಾನು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಪಡೆದ ದೈಹಿಕ ಅಥವಾ ಇತರ ತರಬೇತಿ

ನಡತೆಯ ಬಗ್ಗೆ ಸೂಪರಿಂಟೆಂಡೆಂಟನ ಅಭಿಪ್ರಾಯ

ಉದ್ಯೋಗಶೀಲತೆ ಮತ್ತು ಸಾಮರ್ಥ್ಯ

.......................................................... ಬೋರ್ಸ್ಟಲ್ ಶಾಲೆ.

ಸೂಪರಿಂಟೆಂಡೆಂಟ್

**ನಮೂನೆ – III**

**(39ನೇ ನಿಯಮವನ್ನು ನೋಡಿ)**

**ಬೋರ್ಸ್ಟಲ್ ಶಾಲೆಯಲ್ಲಿನ ಬಂಧನಾದೇಶದ ನಮೂನೆ**

........................................................................................................ ನ್ಯಾಯಾಲಯದಲ್ಲಿ
........................................ ರ ಪ್ರಕರಣ ಸಂಖ್ಯೆ ..............................................

ಸೂಪರಿಂಟೆಂಡೆಂಟ್

ಬೋರ್ಸ್ಟಲ್ ಶಾಲೆ,

................................................ ಇವರಿಗೆ

...................................................... ರ .................................. ಪ್ರಕರಣ ಸಂಖ್ಯೆಯ ಅಪರಾಧಿಯಾದ ............................ ...................................... ಮಗ / ಮಗಳು / ಹೆಂಡತಿಯಾದ ......................................... ವರ್ಷ ವಯಸ್ಸಿನ ................ .................................. ಎಂಬುವವನು / ಳು ............................................... ರಂದು ................................................ ಮ್ಯಾಜಿಸ್ಟ್ರೇಟನಾದ ........................................................ ಅಪರಾಧದ ಬಗ್ಗೆ ಅಪರಾಧ ನಿರ್ಣೀತನಾಗಿರುವುದರಿಂದ ಮತ್ತು ಕ್ರಮಬದ್ಧ ವಾದವಿಚಾರಣೆಯ ತರುವಾಯ ಅವನನ್ನು / ಅವಳನ್ನು ಬೋರ್ಸ್ಟಲ್ ಶಾಲೆಗೆ ಕಳುಹಿಸುವುದು ವಿಹಿತವೆಂದು ನನಗೆ ಮನದಟ್ಟಾಗಿರುವುದರಿಂದ ಸದರಿ .................................................. ಅನ್ನು ಬೋರ್ಸ್ಟಲ್ ಶಾಲೆಯಲ್ಲಿ ಸೇರಿಸಿಕೊಳ್ಳಲು ಮತ್ತು ಅವನನ್ನು / ಅವಳನ್ನು ................................................. ವರ್ಷಗಳವರೆಗೆ ಅಥವಾ ಅವನು / ಅವಳು 23 ವರ್ಷಗಳ ವಯಸ್ಸನ್ನು ತಲುಪುವವರೆಗೆ ಅಲ್ಲಿಯೇ ಇರಿಸಿಕೊಳ್ಳಲು ಸದರಿ ಸೂಪರಿಂಟೆಂಡೆಂಟನಾದ ನಿಮ್ಮನ್ನು ಅಧಿಕೃತಗೊಳಿಸಲಾಗಿದೆ ಮತ್ತು ಅಗತ್ಯಪಡಿಸಲಾಗಿದೆ.

1. ಅಪರಾಧಿಯ ಸ್ವಸ್ಥಳದಿಂದ ಅತಿ ಸಮೀಪದ ರೈಲ್ವೆ ಸ್ಟೇಷನ್ನಿಗೆ ಇರುವ ದೂರ .................................. ಕಿ.ಲೋ. ಮೀಟರುಗಳು.

2. ಅಪರಾಧಿಯ ಮೈ ಮೇಲಿರುವ ಸ್ವತ್ತಿನ ವಿವರಗಳು :

3. ಅಪರಾಧಿಯ ವರ್ಣನಾತ್ಮಕ ವಿವರಗಳು

ಕ) ಹೆಸರು

ಖ) ತಂದೆಯ / ಗಂಡನ ಹೆಸರು

ಗ) ಲಿಂಗ, ವಿವಾಹಿತ ಅಥವಾ ಅವಿವಾಹಿತ

ಘ) ಜನಾಂಗ, ಧರ್ಮ, ರಾಷ್ಟ್ರೀಯತೆ

ಙ) ಹಿಂದಿನ ಉದ್ಯೋಗ, ಯಾವುದಾದರೂ ಇದ್ದರೆ

ಚ) ವಯಸ್ಸು

ಛ) ವರ್ಣನಾತ್ಮಕ ಗುರುತುಗಳು

............................................ ಇಂದು ನನ್ನ ರುಜು ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.

ಮೊಹರು ಮ್ಯಾಜಿಸ್ಟ್ರೇಟ್/ ನ್ಯಾಯಾಧೀಶ

**ನಮೂನೆ – IV**

**(45ನೇ ನಿಯಮವನ್ನು ನೋಡಿ)**

**ಲೈಸೆನ್ಸಿನ ಮೇಲೆ ಬಿಡುಗಡೆ ಆದೇಶ**

ಬೆಂಗಳೂರಿನ ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲ್ಲನಾದ ................................................... ನಾನು ಈ ಲೈಸೆನ್ಸಿನ ಮೂಲಕ ...................................... ಪ್ರಕರಣದ ಮೇರೆಗೆ ............................................................................. ನ್ಯಾಯಾಲಯದ ಮೂಲಕ (ನ್ಯಾಯಾಲಯವನ್ನು ಸೂಚಿಸಿ) ಅಪರಾಧ ನಿರ್ಣೀತನಾದ ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡಬೇಕೆಂದು ಆದೇಶಿಸಲಾಗಿದ್ದ ಮತ್ತು 20 .......... ರ............................ ತಿಂಗಳ .................................. ದಿವಸದಂದು ....................................... ಗಾಗಿ ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡಬೇಕೆಂದು ಶಿಕ್ಷೆಗೆ ಗುರಿಯಾಗಿದ್ದ ಮತ್ತು ಹಿಂದೆ ಹೇಳಿದ ಬಂಧನದ ಅವಧಿಯ ಉಳಿದ ಭಾಗದ ಅವಧಿಯಲ್ಲಿ ........................................... ರಕ್ಷಣೆ, ಮೇಲ್ವಿಚಾರಣೆ ಮತ್ತು ಪ್ರಾಧಿಕಾರದಲ್ಲಿ ಇಡಲು ಈಗ ................................. ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಟ್ಟಿರುವ ................................ ಜಿಲ್ಲೆಯ ................................................. ತಾಲ್ಲೂಕಿನ ........................................................ ಗ್ರಾಮದ ನಿವಾಸಿ ಮತ್ತು .................... ವರ್ಷ

............................ ತಿಂಗಳ ವಯಸ್ಸಿನ ............................. ರವರ ಮಗ / ಮಗಳು / ಹೆಂಡತಿಯಾದ ............................................................... ಅವರನ್ನು ಅನುಮತಿಸಿದ್ದೇನೆ.

ಈ ಲೈಸೆನ್ಸನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕೊಡಲಾಗಿದೆ. ಇವುಗಳಲ್ಲಿ ಯಾವುದನ್ನಾದರೂ ಉಲ್ಲಂಘಿಸಿದರೆ ಇದನ್ನು ರದ್ದುಗೊಳಿಸಲಾಗುವುದು.

ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲ್

ಬೆಂಗಳೂರು

**ಷರತ್ತುಗಳು**

1. ಲೈಸೆನ್ಸನ್ನು ಕೂಡಲೇ ರದ್ದುಗೊಳಿಸಿದ ಹೊರತು, ಬೋರ್ಸ್ಟಲ್ ಶಾಲೆಯಲ್ಲಿ ಅವನನ್ನು / ಅವಳನ್ನು ಯಾವ ಅವಧಿಯವರೆಗೆ ಬಂಧನದಲ್ಲಿಡಬೇಕೆಂದು ಆದೇಶಿಸಲಾಗಿದೆಯೋ ಆ ಅವಧಿಯು ಮುಕ್ತಾಯವಾಗುವವರೆಗೆ ಆ ಲೈಸೆನ್ಸುದಾರನು ............................................................ ಗೆ ಹೋಗತಕ್ಕದ್ದು ಮತ್ತು ...................................................... ನ (ಇಲ್ಲಿ ಪರಿವೀಕ್ಷಣಾಧಿಕಾರಿಯನ್ನು ನಮೂದಿಸಿ) ರಕ್ಷಣೆ, ಮೇಲ್ವಿಚಾರಣೆ ಮತ್ತು ಪ್ರಾಧಿಕಾರದಲ್ಲಿ ಇಡತಕ್ಕದ್ದು.

2. ಹಿಂದೆ ಹೇಳಿದ ಅವಧಿಯಲ್ಲಿ ಲೈಸೆನ್ಸುದಾರನು –

(ಕ) ಸದರಿ ಪರಿವೀಕ್ಷಣಾಧಿಕಾರಿಯ ಅನುಮತಿಯನ್ನು ಪಡೆದ ಹೊರತು ಅವನ / ಅವಳ ವಿಳಾಸವನ್ನು ಬದಲಾಯಿಸತಕ್ಕದ್ದಲ್ಲ ;

(ಖ) ಉದ್ಯೋಗದ ಸ್ಥಳದಲ್ಲಿ ಅಥವಾ ಅನ್ಯಥಾ ಕಾಲನಿಷ್ಠೆಯುಳ್ಳ ಮತ್ತು ನಿಯತವಾಗಿ ಹಾಜರಾಗುವ ಬಗ್ಗೆ ಅವನು/ ಅವಳು ಸ್ವೀಕರಿಸಬಹುದಾದಂಥ ಸೂಚನೆಗಳನ್ನು ಅವನು / ಅವಳು ಪಾಲಿಸತಕ್ಕದ್ದು.

(ಗ) ಅವನು / ಅವಳು ಯಾವುದೇ ಕಾನೂನನ್ನು ಉಲ್ಲಂಘಿಸತಕ್ಕದ್ದಲ್ಲ ಮತ್ತು ಸದರಿ ಪರಿವೀಕ್ಷಣಾಧಿಕಾರಿಗೆ ಮನದಟ್ಟಾಗುವಂತೆ ಗಂಭೀರ ಮತ್ತು ಉದ್ಯೋಗಶೀಲ ಜೀವನವನ್ನು ನಡೆಸತಕ್ಕದ್ದು.

(ಘ) ಅವನು / ಅವಳು ಕೆಟ್ಟ ನಡತೆಯ ವ್ಯಕ್ತಿಗಳ ಸಹವಾಸ ಮಾಡತಕ್ಕದ್ದಲ್ಲ.

(ಙ) ಅವನು / ಅವಳು ಒಳ್ಳೆಯ ವರ್ತನೆಯವನಾ / ಳಾಗಿರತಕ್ಕದ್ದು.

ಈ ಮೇಲ್ಕಂಡ ಷರತ್ತುಗಳಿಗೆ ಬದ್ಧನಾಗಿರಲು ನಾನು ಈ ಮೂಲಕ ಒಪ್ಪಿಕೊಂಡಿದ್ದೇನೆ ಮತ್ತು ಅವುಗಳಲ್ಲಿ ಯಾವುದೇ ಷರತ್ತನ್ನು ಉಲ್ಲಂಘಿಸಿದರೆ : ಇನ್ಸ್‌ಪೆಕ್ಟರ್ ಜನರಲ್ಲನು ಅಧಿನಿಯಮದ ........................ ಪ್ರಕರಣದ ಮೇರೆಗೆ ಅವನ ಸ್ವಇಚ್ಛೆಯ ಮೇರೆಗೆ ಆಗಲಿ ಅಥವಾ ಸದರಿ ಪರಿವೀಕ್ಷಣಾಧಿಕಾರಿಯ ಕೋರಿಕೆಯ ಮೇರೆಗೆ ಆಗಲಿ ಲೈಸೆನ್ಸನ್ನು ರದ್ದುಗೊಳಿಸಬಹುದು ಮತ್ತು ಆ ಲೈಸೆನ್ಸನ್ನು ರದ್ದುಗೊಳಿಸಿದ ಮೇಲೆ ನನ್ನನ್ನು ಯಾವ ಅವಧಿಯವರೆಗೆ ಬಂಧನದಲ್ಲಿಡಲು ಆದೇಶಿಸಲಾಗಿತ್ತೋ ಆ ಅವಧಿಯು ಮುಕ್ತಾಯವಾಗುವವರೆಗೆ ....................................................... ಇಲ್ಲಿ ಇರುವ ಶಾಲೆಗೆ ಹಿಂದಿರುಗಿ ಕಳುಹಿಸಲ್ಪಡಲು ನಾನು ಬದ್ಧನಾಗಿದ್ದೇನೆ. ನನಗೆ ವಿವರಿಸಲಾದ ಈ ಮೇಲ್ಕಂಡ ಷರತ್ತುಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದು ನಾನು ಈ ಮೂಲಕ ತಿಳಿಸುತ್ತೇನೆ.

ನಿವಾಸಿಯ ರುಜು

ಈ ಮೇಲ್ಕಂಡ ಷರತ್ತುಗಳನ್ನು ನಿವಾಸಿಗೆ ವಿವರಿಸಲಾಗಿದೆ ಮತ್ತು ಅವನು ಅದನ್ನು ನನ್ನ ಸಮಕ್ಷಮದಲ್ಲಿ ಒಪ್ಪಿಕೊಂಡಿದ್ದಾನೆ ಎಂದು ಪ್ರಮಾಣೀಕರಿಸಲಾಗಿದೆ.

ಸಾಕ್ಷಿ

1.

2.

ಸೂಪರಿಂಟೆಂಡೆಂಟನ ರುಜು

ಲೈಸೆನ್ಸಿನ ಮೇಲೆ ಬಿಡುಗಡೆಗಾಗಿ ಮೇಲೆ ಆದೇಶಿಸಲಾದ ಹೆಸರಿನ ನಿವಾಸಿಯನ್ನು .................................... ರಂದು ಬಿಡುಗಡೆ ಮಾಡಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

ಸೂಪರಿಂಟೆಂಡೆಂಟ್

**ನಮೂನೆ – V**

**(70ನೇ ನಿಯಮವನ್ನು ನೋಡಿ)**

ಇನ್ಸ್‌ಪೆಕ್ಟರ್ ಜನರಲ್ಲನಿಗೆ ವಿವರಗಳನ್ನು ಒದಗಿಸಬೇಕಾಗಿರುವ .......................................... ಬೋರ್ಸ್ಟಲ್ ಶಾಲೆಯಲ್ಲಿ ಬಂಧನದಲ್ಲಿಡಲಾದ ನಿವಾಸಿಗಳ ಹೆಸರಿನ ಪಟ್ಟಿ.

| ನೋಂದಣಿ ಸಂಖ್ಯೆ | ಹೆಸರು | ವರ್ಗಾವಣೆ ದಿನಾಂಕ | .................. ರಿಂದ ಸೇರಿಸಿಕೊಳ್ಳಲಾಗಿದೆ | ವಾಸಸ್ಥಳ | ಯಾರ ಪಾಲಕತ್ವದಲ್ಲಿ ವಾಸ | ಶಿಕ್ಷೆಯ ದಿನಾಂಕ ಮತ್ತು ಬಂಧನದ ಅವಧಿ |
|---|---|---|---|---|---|---|
| 1 | 2 | 3 | 4 | 5 | 6 | 7 |

ಸೂಪರಿಂಟೆಂಡೆಂಟ್,
ಬೋರ್ಸ್ಟಲ್ ಶಾಲೆ
(ಸಂಖ್ಯೆ ಎಚ್‌ಡಿ 8 ಸಿಆರ್‌ಹೆಚ್ 66)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಂ.ಕೆ. ಶ್ರೀನಿವಾಸ್ ಮೂರ್ತಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಗೃಹ ಇಲಾಖೆ.